SRI V.M. Kushnoor (Minister for Co-operation)

Sir. I beg. to lay :--

Notification No. RDC 51 CEP 79 dated 28th March 1979.

Application of section 30 of the Karnataka Co-operative Societies Act, 1959 with modification to Galaginakatti collection Co-operative Farming Society, Galaginakatti.

U der Rule 130 of the Karnataka Co-operative Societies Act, 9.

MR. SPEAKER: All Papers are laid.

BUDGET ESTIMATES FOR 1979-80

Demands for Grants

Demand No. 27 and 28 (Debate Continued)

† ಶ್ರೀ ಎಂ. ಮಲ್ಲಪ್ಪ (ಜನಾರೋಗ್ಯ ಮತ್ತು ಕುಟುಂಬ ಕಲ್ಯಾಣ ಶಾಖೆಗಳ ಮಂತ್ರಿಗಳು).— ಸನ್ಮಾನ್ಯ ಅಧ್ಯಕ್ಷರೆ, ಆರೋಗ್ಯ ಇಲಾಖೆಯ ಬೇಡಿಕೆಗಳ ಮೇಲೆ ನಡೆದ ಚರ್ಚೆಯಲ್ಲಿ ಭಾಗವಹಿಸಿ ಮಾನ್ಯ ಸದಸ್ಯರು ಅಮೂಲ್ಯವಾದ ಸಲಹೆಗಳನ್ನು ನೀಡಿದ್ದಾರೆ. ಅದಕ್ಕಾಗಿ ಸನ್ಮಾನ್ಯ ಸದಸ್ಯರೆಲ್ಲರಿಗೂ ಕೂಡ ನನ್ನ ಧನ್ಯವಾದಗಳನ್ನು ಅರ್ಪಿಸುತ್ತೇನೆ. ನಿಜಕ್ಕೂ ಚರ್ಚೆಯಲ್ಲಿ ಅತ್ಯಮೂಲ್ಯವಾದ ಸಲಹೆಗಳನ್ನು ಮಾನ್ಯ ಸದಸ್ಯರು ನೀಡಿದ್ದಾರೆ. ಆರೋಗ್ಯ ಇಲಾಖೆ ಇನ್ನೂ ಹೆಚ್ಚು ದಕ್ಷತೆಯಿಂದ, ಹೆಚ್ಚು ಪ್ರಾಮಾಣಿಕತೆಯಿಂದ ಕೆಲಸ ಮಾಡಬೇಕು ಎನ್ನುವ ಬಗ್ಗೆ ಒಳ್ಳೆಯ ಸಲಹೆಗಳು ಬಂದಿವೆ. ಆ ಅಮೂಲ್ಯ ಸಲಹೆಗಳನ್ನು ನಾನು ಹೃತ್ಪೂರ್ವಕವಾಗಿ ಸ್ವಾಗತಿಸಿ ಸನ್ಮಾನ್ಯ ಸದಸ್ಯರೆಲ್ಲರಿಗೂ ನನ್ನ ಅಭಿನಂದನೆಗಳನ್ನು ಸಲ್ಲಿಸುತ್ತೇನೆ.

ಶ್ರೀ ಎಸ್. ಆರ್. ಬೊಮ್ಮಾಯಿ.--ಒಂದು ಸಂತೋಷವೇನೆಂದರೆ ಮಾನ್ಯ ಆರೋಗ್ಯ ಮಂತ್ರಿಗಳಿಗೆ ಹೋದ ವರ್ಷಕ್ಕಿಂತ ಈ ವರ್ಷ ಬಹಳ ಆರೋಗ್ಯವಂತರಾಗಿದ್ದಾರೆ. ಆದೇ ರೀತಿ ಈ ಆರೋಗ್ಯ ಇಲಾಖೆಯನ್ನು ಚೆನ್ನಾಗಿ ಮಾಡಬೇಕು.

ಶ್ರೀ ಎಂ. ಮಲ್ಲಪ್ಪ.—ವಿರೋಧ ಪಕ್ಷದ ನಾಯಕರ ಬಗ್ಗೆ ನನಗೆ ಬಹಳ ಕಳಕಳಿ ಇತ್ತು. ಅವರು ಈ ಸಭೆಗೆ ಬಂದಾಗ ಅವರ ಆರೋಗ್ಯ ಉತ್ತಮವಾಗಬೇಕೆಂದು ನನ್ನ ಮನಸ್ಸಿನಲ್ಲಿ ಮೂಡಿ ಬರುತ್ತಿತ್ತು, ಈಗ ಅವರ ಆರೋಗ್ಯವನ್ನು ನೋಡಿದಾಗ ಉತ್ತಮಗೊಂಡಂತೆ ಕಾಣುತ್ತಿದೆ. ಅವರ ಆರೋಗ್ಯ ಇನ್ನೂ ಹೆಚ್ಚಲಿ ಎಂದು ನಾನು ದೇವರಲ್ಲಿ ಪ್ರಾರ್ಥಿಸಿಕೊಳ್ಳುತ್ತೇನೆ.

ಅಧ್ಯಕ್ಷರು.—ಸದಸ್ಯರು ಪರಸ್ಪರ ಒಬ್ಬರಿಗೊಬ್ಬರು ಅಭಿನಂದಿಸಿಕೊಳ್ಳುತ್ತಿದ್ದಾರೆ.

ಶ್ರೀ ಎಂ. ಮಲ್ಲಪ್ಪ.—ಎಲ್ಲ ಸದಸ್ಯರಿಗೂ ಆರೋಗ್ಯ ಇಲಾಖೆಗೆ ಒದಗಿಸಿರುವ ಹಣ ಹೆಚ್ಚಾಗಬೇಕು, ಬೇಡಿಕೆಗಳು ಅತಿ ಶೀಘ್ರವಾಗಿ ಪೂರೈಕೆಯಾಗಬೇಕು ಎನ್ನತಕ್ಕಂತಹ ಆತಂಕವನ್ನು ನಾನು ಕೇಳಿದ್ದೇನೆ. ನಿಜವಾಗಿಯೂ ಕೂಡ ಮೊನ್ನೆ ದೆಹಲಿಯಲ್ಲಿ ಆರೋಗ್ಯ ಮಂತ್ರಿಗಳ ಸಭೆ ನಡೆದಾಗ, ಎಲ್ಲಾ ಮಂತ್ರಿಗಳೂ ಕೂಡ ಯಾವ ಸರ್ಕಾರವೇ ಆಗಲಿ, ಸರ್ಕಾರದ ಆಯವ್ಯಯದಲ್ಲಿ ಎಷ್ಟು ಹಣವನ್ನು ಖರ್ಚು ಮಾಡುತ್ತಾರೆಯೋ ಆದರ ಕನಿಷ್ಟ ಹತ್ತರಷ್ಟು ಈ ಆರೋಗ್ಯ ಇಲಾಖೆಗೆ ಖರ್ಚುಮಾಡಬೇಕು ಎನ್ನುವ ವಾದವನ್ನು ಎಲ್ಲರೂ ಅಂಗೀಕರಿಸಿದ್ದಾರೆ. ನಾನಾದರೂ ಹೇಳುತ್ತೇನೆ ಆರೋಗ್ಯಕ್ಕೆ ಹೆಚ್ಚಿನ ಒಂದು ಪ್ರಾಶಸ್ತ್ಯ ನೀಡಬೇಕು, ಇಡೀ ದೇಶದ ಜನರ ಆರೋಗ್ಯ ಮಟ್ಟ ಉತ್ತಮವಾಗಬೇಕು. ಆರೋಗ್ಯದ ಮಟ್ಟ ಸುಧಾರಿಸಿದರೆ ಮಾತ್ರ ಎಲ್ಲಾ ಉತ್ಪನ್ನಗಳ ಕಾರ್ಯಗಳಿಗೆ ಹೆಚ್ಚು ಗಮನವನ್ನು ಕೊಡುವುದಕ್ಕೆ ಸಾಧ್ಯವಾಗುತ್ತದೆ. ಈ ದೃಷ್ಟಿಯಿಂದ ನಾನು ಅರ್ಥ ಮಂತ್ರಿಗಳಲ್ಲಿ ನಾನು ಪ್ರಾರ್ಥನೆ ಮಾಡುತ್ತೇನೆ ದಯವಿಟ್ಟು ಆಯವ್ಯವನ್ನು ತಯಾರು ಮಾಡತಕ್ಕ ಕಾಲದಲ್ಲಿ ಕನಿಷ್ಟ ಶೇಕಡಾ ಹತ್ತರಷ್ಟು ಹಣವನ್ನು ಆಯವ್ಯಯದಲ್ಲಿ, ಈ ಆರೋಗ್ಯ ಇಲಾಖೆಗೆ ಒದಗಿಸಿದರೆ ನಿಜವಾಗಿ ಗ್ರಾಮ ಮಟ್ಟದಲ್ಲಿ

ಇನ್ನೂ ಹೆಚ್ಚಿನ ಮಟ್ಟದಲ್ಲಿ ಸಮರ್ಥನೀಯವಾಗಿ ಆರೋಗ್ಯ ಮತ್ತು ವೈದ್ಯಕೀಯ ಸೌಲಭ್ಯಗಳನ್ನು ಒದಗಿಸಬಹುದು. ವೈದ್ಯಕೀಯ ಸೌಲಭ್ಯವನ್ನು ಒದಗಿಸುವ ಬಗ್ಗೆ ಏನು ಕೂಗು ಇದೆ ಆ ಕೂಗನ್ನು ನಿಜವಾಗಿಯೂ ಸಮರ್ಥನೀಯವಾಗಿ ನಿವಾರಿಸುವುದಕ್ಕೆ ಸಮರ್ಥರಾಗುತ್ತೇವೆಂದು ನಾನು ಹೇಳಬಯಸುತ್ತೇನೆ. ಆದರೆ ಇಷ್ಟು ಹೇಳತಕ್ಕಂತಹ ಕಾಲದಲ್ಲಿ ಈಗ ಒದಗಿಸಿರುವ ಹಣ ಕಡಿಮೆ ಎಂದು ನಾನು ಒಪ್ಪುವುದಿಲ್ಲ. ೧೯೭೪-೭೫ರ ವಿಹಂಗಮ ನೋಟವನ್ನು ನೋಡಿದರೆ, ೧೯೭೯-೮೦ಕ್ಕೆ ಈಗ ಒದಗಿಸಿರತಕ್ಕ ಹಣವನ್ನು ನೋಡಿದರೆ ಶೇಕಡ ೧೦೦ ರಷ್ಟು ಹೆಚ್ಚಾಗಿದೆ. ೧೯೭೪-೭೫ರಲ್ಲಿ ೨೭.೯೨ ಕೋಟಿ ರೂಪಾಯಿಗಳನ್ನು ಈ ಬಾಬಿಗೆ ಒದಗಿಸಿದ್ದರು. ಈಗ ಎಂದರೆ ೧೯೭೯-೮೦ ರಲ್ಲಿ ೫೪.[illegible] ಕೋಟಿ ರೂಪಾಯಿಗಳನ್ನು ಒದಗಿಸಲಾಗಿದೆ. ಇದೂ ಅಲ್ಲದೆ ದೇಶೀಯ ವೈದ್ಯ ಪದ್ಧತಿಗೆ ಕೂಡ ಬೇರೆ ಹಣವನ್ನು ಒದಗಿಸಲಾಗಿದೆ. ಔಷಧಿಗಳಿಗೂ ಬೇರೆ ಹಣವನ್ನು ಒದಗಿಸಿದ್ದಾರೆ. ಇ.ಎಸ್.ಐ.ಗೆ ಒದಗಿಸಿರುವ ಹಣ ಇದರಲ್ಲಿ ಸೇರಿಲ್ಲ. ಹೆಚ್ಚು ಹೆಚ್ಚು ಪ್ರಗತಿದಾಯಕ ಕಾರ್ಯಗಳಿಗೆ ಈ ಇಲಾಖೆಯಿಂದ ಹಣವನ್ನು ಒದಗಿಸಲಾಗಿದೆ. ಅದಕ್ಕಾಗಿ ಹಣವೂ ಖರ್ಚಾಗಿದೆ. ಜನತೆಗೆ ಇದರಿಂದ ಸೌಲಭ್ಯಗಳೂ ಕೂಡ ದೊರಕಿವೆ ಎಂದು ಹೇಳುವುದಕ್ಕೆ ನನಗೆ ಬಹಳ ಸಂತೋಷವಾಗಿದೆ. ಆದರೂ ಕೂಡ ಈ ಇಲಾಖೆಗೆ ಇನ್ನೂ ಹೆಚ್ಚಿನ ಹಣವನ್ನು ಒದಗಿಸಬೇಕು. ಅದಕ್ಕೆ ಕಾರಣ ಇಷ್ಟೇ. ನಮ್ಮಲ್ಲಿರತಕ್ಕ ಬಜೆಟ್ ಏನಿದೆ ಅದರಲ್ಲಿ ಶೇಕಡ ೧೦ರಷ್ಟು ಇದಕ್ಕೆ ಮೀಸಲಾಗಿ ಇಟ್ಟರೆ ಸಮರ್ಥನೀಯವಾದ ಸೇವೆ ಸಲ್ಲಿಸುವುದಕ್ಕೆ ಅನುಕೂಲವಾಗುತ್ತದೆ. ಈ ಇಲಾಖೆಗೆ ಇನ್ನೂ ಹೆಚ್ಚಿನ ಹಣವನ್ನು ಕೊಡಲಿ ಇದು ಇನ್ನೂ ಹೆಚ್ಚು ಸಮರ್ಥನೀಯವಾಗಿ ಕೆಲಸ ಮಾಡಬೇಕು ಎನ್ನುವ ಮೆಚ್ಚುಗೆಯ ಮಾತನ್ನು ಹೇಳಿದ್ದಾರೆ. ಅದಕ್ಕಾಗಿ ಮಾನ್ಯ ಸದಸ್ಯರಿಗೆ ನಾನು ತುಂಬಾ ಆಭಾರಿಯಾಗಿದ್ದೇನೆ.

ಇನ್ನು ಎರಡನೆಯದಾಗಿ, ಈಗ ಔಷಧಿಗಳಿಗೆ ಒದಗಿಸಿರುವ ಹಣ ಬಹಳ ಕಡಿಮೆಯೆಂದು ಗ್ರಾಮಾಂತರ ಪ್ರದೇಶಗಳಿಗೆ ಹೆಚ್ಚು ಹೆಚ್ಚು ಹಣವನ್ನು ಒದಗಿಸಬೇಕೆಂದು ಸಾಮಾನ್ಯವಾಗಿ ಸಲಹೆ ಮಾಡಿದ್ದಾರೆ. ಅದನ್ನು ನಾನು ಒಪ್ಪುತ್ತೇನೆ. ಅದನ್ನು ಒಪ್ಪತಕ್ಕ ಕಾಲದಲ್ಲಿ ಹಿಂದೆ ಎಷ್ಟು ಹಣವನ್ನು ಖರ್ಚು ಮಾಡಿದ್ದಾರೆ ಎಂದರೆ ೧೯೭೪-೭೫ ರಿಂದ ೧೯೭೯-೮೦ರ ವಿಹಂಗಮ ನೋಟವನ್ನು ನೋಡಿದರೆ ೧೯೭೪-೭೫ರಲ್ಲಿ ೨೭೬ ಲಕ್ಷ ರೂಪಾಯಿಗಳನ್ನು ಆಸ್ಪತ್ರೆಗಳಿಗೆ ಔಷಧಿಗಾಗಿ ಒದಗಿಸಿದ್ದಾರೆ. ೧೯೭೫-೭೬ ರಲ್ಲಿ ೩೨೧ ಲಕ್ಷ ರೂಪಾಯಿಗಳನ್ನು ಒದಗಿಸಿದ್ದಾರೆ. ೧೯೭೬-೭೭ರಲ್ಲಿ ೩೪೩ ಲಕ್ಷ ರೂಪಾಯಿಗಳನ್ನು, ೧೯೭೭-೭೮ರಲ್ಲಿ ೪೦೨ ಲಕ್ಷ ರೂಪಾಯಿಗಳನ್ನು ೧೯೭೮-೭೯ರಲ್ಲಿ ೪೩೮ ಲಕ್ಷ ರೂಪಾಯಿಗಳನ್ನು, ಈ ವರ್ಷ ಎಂದರೆ ೧೯೭೯-೮೦ರಲ್ಲಿ ೫೦೫ ಲಕ್ಷ ರೂಪಾಯಿಗಳನ್ನು ಒದಗಿಸಿದ್ದಾರೆ. ಹೋದವರ್ಷಕ್ಕಿಂತ ಈ ವರ್ಷ ೭೦ ಲಕ್ಷ ರೂಪಾಯಿ ಹಣವನ್ನು ಹೆಚ್ಚುವರಿ ಔಷಧಿಗಾಗಿ ಒದಗಿಸಿದ್ದೇವೆ ಎಂದು ಹೇಳಿದರೆ ನಿಜವಾಗಿಯೂ ಉತ್ತಮವಾಗಿ ಔಷಧಿಗಳು ಆಸ್ಪತ್ರೆಗಳಿಗೆ ಸರಬರಾಜು ಆಗುತ್ತದೆನ್ನುವುದಕ್ಕೆ ಹೆಚ್ಚು ನಿದರ್ಶನ ಬೇಡ. ಇದಕ್ಕೆ ಒಳಗೊಂಡಂತೆ ೫೦೫ ಲಕ್ಷ ರೂಪಾಯಿಗಳನ್ನು ಔಷಧಿಗಾಗಿ ಒದಗಿಸಿದೆ ಇದರಲ್ಲಿ ದೇಶೀಯ ವೈದ್ಯಕೀಯ ಆಸ್ಪತ್ರೆಗಳಿಗೆ ಕೊಡತಕ್ಕ ಔಷಧಿಗಳ ಮೊಬಲಗು ಇದರಲ್ಲಿ ಸೇರಿಲ್ಲ. ಟಿ.ಬಿ., ಮಲೇರಿಯಾ ನಿರ್ಮೂಲನ, ಫ್ಯಾಮಿಲಿ ವೆಲ್‌ಫೇರ್ ಔಷಧಿಗಳ ಪ್ರಮಾಣ ಇವುಗಳನ್ನು ನೋಡಿದರೆ ನಿಜವಾಗಿಯೂ ನಮ್ಮ ರಾಜ್ಯದಲ್ಲಿ ೬-೮ ಕೋಟಿ ರೂಪಾಯಿಗಳ ಔಷಧಿಗಳ ಸರಬರಾಜು ವ್ಯವಸ್ಥೆ ನಡೆದಿದೆ ಇಲ್ಲಿ ಇರತಕ್ಕ ಆಸ್ಪತ್ರೆಗಳಿಗೆ ಸರಿಯಾದ ಔಷಧಿಗಳ ಪ್ರಮಾಣ ಹೆಚ್ಚಾಗುತ್ತಿದೆ ಎನ್ನುವುದನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಈಗ ಸಾಮಾನ್ಯವಾಗಿ ನಮ್ಮಲ್ಲಿರತಕ್ಕ ಎ.ಎನ್.ಎಂ. ಸಬ್ ಸೆಂಟರ್ ಆಸ್ಪತ್ರೆಗಳು ಏನಿವೆ ಅವುಗಳಿಗೆ ಪ್ರತಿಯೊಂದಕ್ಕೂ ೨,೦೦೦ ರೂಪಾಯಿಗಳನ್ನು ಒದಗಿಸುತ್ತಿದ್ದೇವೆ. ಪ್ರಾಥಮಿಕ ಆರೋಗ್ಯ ಕೇಂದ್ರಗಳಿಗೆ ಭಾರತ ಸರ್ಕಾರದವರು ಔಷಧಿಗಾಗಿ ಒದಗಿಸುವ ಹಣವನ್ನು ಬಿಟ್ಟು, ೧೨,೦೦೦ ರೂಪಾಯಿಗೆ ಕಡಿಮೆ ಇಲ್ಲದಂತೆ ನಾವು ಔಷಧಿಗಾಗಿ ಹಣವನ್ನು ಒದಗಿಸುತ್ತಿದ್ದೇವೆ. ಎಲ್ಲಾ ಔಷಧಿಗಳೂ ಸರಬರಾಜು ಆಗುವುದನ್ನು ಲೆಕ್ಕ ಹಾಕಿದರೆ ೩೦,೦೦೦ ರೂಪಾಯಿಗಳಿಗೆ ಕಡಿಮೆ ಇಲ್ಲದಂತೆ ಒಂದು ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ಔಷಧಿಯನ್ನು ಒದಗಿಸಲಾಗುತ್ತಿದೆ. ಹಿಂದೆ ನಾವು ಮೆಡಿಕಲ್ ಸಬ್ ಸೆಂಟರ್ಸ್ ಎಂದು ಕರೆಯುತ್ತಿದ್ದವುಗಳ ಹೆಸರನ್ನು ಮಾರ್ಪಾಟು ಮಾಡಿ ಆರೋಗ್ಯ ಘಟಕಗಳು ಎಂದು ಮಾಡಿ ಅವುಗಳಿಗೆ ಪ್ರತಿಯೊಂದಕ್ಕೂ ೫,೦೦೦ ರೂಪಾಯಿಯ ಔಷಧಿಯನ್ನು ಒದಗಿಸುತ್ತಿದ್ದೇವೆ. ಅಷ್ಟೇ ಅಲ್ಲದೆ ನಮ್ಮ ಬೆಂಗಳೂರು ಸ್ಟೋರ್‌ನಲ್ಲಿ ಯಾವತ್ತೂ ೩ ತಿಂಗಳುಗಳಿಗೆ ಅಗತ್ಯವಾದ ಔಷಧಿಗಳ ಸ್ಟಾಕು ಇರುತ್ತದೆ. ಎಲ್ಲಿ ಔಷಧಿಗಳ ಅಗತ್ಯ ಇದೆ ಎಂದು ಶಾಸಕರುಗಳಾಗಲಿ, ಅಧಿಕಾರಿಗಳಾಗಲಿ ಅಗತ್ಯವಾಗಿ ಬೇಕು ಎಂದರೆ ಔಷಧಿಗಳನ್ನು ಅಲ್ಲಿಗೆ ತಕ್ಷಣ ಸರಬರಾಜು ಮಾಡುವುದಕ್ಕೆ ವ್ಯವಸ್ಥೆಯನ್ನು ಸರ್ಕಾರ

ಮೂಡಿದೆ. ಅದಕ್ಕಾಗಿ ಈ ವರ್ಷ ನಾನು ಧೈರ್ಯವಾಗಿ ಹೇಳಬಲ್ಲೆ ಕಳೆದ ವರ್ಷಕ್ಕಿಂತ ಈ ವರ್ಷ ಆಸ್ಪತ್ರೆಗಳಿಗೆ ಔಷಧಿಗಳ ಸರಬರಾಜು ಬಹಳ ಚೆನ್ನಾಗಿದೆ. ನಾನು ಅನೇಕ ಕಡೆ ಪ್ರಾಥಮಿಕ ಆರೋಗ್ಯ ಕೇಂದ್ರಗಳಿಗೆ ಭೇಟಿ ಕೊಟ್ಟಿದ್ದೇನೆ. ಎಲ್ಲಿ ಡಾಕ್ಟರುಗಳು ಚೆನ್ನಾಗಿ ಕೆಲಸ ಮಾಡುತ್ತಿದ್ದಾರೆ, ಅಲ್ಲಿ ಅವರು ಜನಗಳ ನಂಬಿಕೆಗೆ, ವಿಶ್ವಾಸಕ್ಕೆ ಪಾತ್ರರಾಗಿದ್ದಾರೆ. ಅಂಥಾ ಕಡೆ ಈ ಕೂಗು ಇಲ್ಲ. ಬೀದರ್ ಜಿಲ್ಲೆಯಲ್ಲಿ ಒಂದು ಆರೋಗ್ಯ ಪ್ರಾಥಮಿಕ ಕೇಂದ್ರಕ್ಕೆ ಹೋಗಿದ್ದೆ. ಡಾಕ್ಟರು ಒಳಗೆ ಕರೆದುಕೊಂಡು ಹೋಗಿ ಪ್ರತಿ ವರ್ಷ ಸರಬರಾಜಾಗಿರತಕ್ಕ ಔಷಧಿಗಳನ್ನು ತೋರಿಸಿ, ಪ್ರತಿನಿತ್ಯ 100 ಹೊರ ರೋಗಿಗಳು ಬರುತ್ತಾ ಇದ್ದಾರೆ ಎಂದು ಹೇಳಿದರು, ಆದರೂ ಕೂಡ ಸಾಕಷ್ಟು ಔಷಧಿಗಳ ಸ್ಟಾಕ್ ಇತ್ತು. ಅದಕ್ಕೋಸ್ಕರ ಸರಬರಾಜಾಗತಕ್ಕ ಔಷಧಿಯನ್ನು ಸಮರ್ಥನೀಯವಾಗಿ ವೈದ್ಯರು ಉಪಯೋಗಿಸುವುದಾದರೆ, ಜನಗಳ ಕಾಯಿಲೆಯನ್ನು ಕಂಡುಹಿಡಿದು ಅವರ ಅಗತ್ಯತೆಗನುಗುಣವಾಗಿ ಔಷಧಿಯನ್ನು ಕೊಡುವುದಾದರೆ ಈಗ ಕೊಡತಕ್ಕ ಔಷಧಿಗಳು ಸಾಕಷ್ಟು ಆಗಬಹುದು ಎನತಕ್ಕಂಥಾದ್ದು ನನ್ನ ನಂಬಿಕೆ. ಈ ಸಂದರ್ಭದಲ್ಲಿ ನಾನಾದರೂ ಪ್ರಾರ್ಥನೆ ಮಾಡಿಕೊಳ್ಳುವುದೇನೆಂದರೆ, ತಮ್ಮ ತಮ್ಮ ಕ್ಷೇತ್ರಗಳಲ್ಲಿ ಎಲ್ಲಿಯಾದರೂ ರೋಗಿಗಳ ಸಂಖ್ಯೆ ಜಾಸ್ತಿಯಾಗಿದೆ, ಅವಶ್ಯಕತೆಗನುಗುವಾಗಿ ಔಷಧಿಗಳು ಸರಬರಾಜಾಗುತ್ತಿಲ್ಲ ಎಂದು ಹೇಳುವುದಾದರೆ, ಯಾವತ್ತು ಹೇಳಿದರೂ ಕೂಡ ಔಷಧಿಗಳನ್ನು ಸರಬರಾಜು ಮಾಡಲಿಕ್ಕೆ ಅವಕಾಶವಿದೆ ಮತ್ತು ಅನುಕೂಲಕ್ಕೆ ತಕ್ಕಂತೆ ಇವತ್ತು ಸ್ಟಾಕ್ ಕೂಡ ಇದೆ. ಇದನ್ನು ಒದಗಿಸಲು ನಾನು ಸರ್ವ ಪ್ರಯತ್ನಗಳನ್ನೂ ಮಾಡುತ್ತೇನೆ ಎಂದು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಇನ್ನೊಂದು ಮುಖ್ಯವಾದ ವಿಷಯವೇನೆಂದರೆ, ಕಳೆದ ವರ್ಷ ಅನೇಕ ಮಾನ್ಯ ಸದಸ್ಯರು ಇದೊಂದು ದೊಡ್ಡ ಇಲಾಖೆ, ಈ ಇಲಾಖೆಯನ್ನು ಒಬ್ಬ ಡೈರೆಕ್ಟರಿಂದ ನಿರ್ವಹಿಸಲಿಕ್ಕೆ ಸಾಧ್ಯವಿಲ್ಲ, ಅದನ್ನು ಬೇರ್ಪಡಿಸಬೇಕು, ಪುನರ್ವಿಂಗಡಣೆ ಮಾಡಬೇಕು ಎಂದು ಸಲಹೆ ಕೊಟ್ಟಿದ್ದರು. ಇದೇ ಒಂದು ಅಭಿಪ್ರಾಯ ಸಾರ್ವಜನಿಕರಲ್ಲೂ ಮೂಡಿಬಂತು. ಮತ್ತು ವೈದ್ಯಕೀಯ ವೃಂದದಲ್ಲೂ ಮತ್ತು ಇಂಡಿಯನ್ ಮೆಡಿಕಲ್ ಅಸೋಸಿಯೇಷನ್‌ರವರೂ ಈ ಒಂದು ಅಭಿಪ್ರಾಯವನ್ನು ಸೂಚಿಸಿದರು. ಅದನ್ನು ಅನುಸರಿಸಿ ಅದನ್ನು ಮನಗಂಡು ಈ ಇಲಾಖೆಯನ್ನು ಎರಡು ಭಾಗವಾಗಿ ಬೇರ್ಪಡಿಸಿದೆ. ಅಥವಾ ಯಾರೊಬ್ಬರ ಅಧಿಕಾರವನ್ನು ಕಸಿದುಕೊಳ್ಳಬೇಕು ಎಂದಾಗಲೀ, ಅವರಿಗೆ ಅನ್ಯಾಯವನ್ನು ಮಾಡಬೇಕು ಎಂದಾಗಲೀ ಈ ವಿಂಗಡಣೆ ನಡೆದಿಲ್ಲ ಎಂದು ನಾನು ಎದೆಮುಟ್ಟಿ ಹೇಳುತ್ತಾ ಇದ್ದೇನೆ. ಈ ಇಲಾಖೆಯಲ್ಲಿ ಕೆಲಸಮಾಡತಕ್ಕ ಡೈರೆಕ್ಟರುಗಳೆಲ್ಲರೂ ಸಮಾನರು, ನಿಜವಾಗಿಯೂ ಬಹಳ ಒಳ್ಳೆಯ ಕೆಲಸಗಳನ್ನು ಮಾಡಿದ್ದಾರೆ ಹೆಸರನ್ನು ಪಡೆದಿದ್ದಾರೆ, ಇಲಾಖೆಗೆ ಮತ್ತು ತಮ್ಮ ವ್ಯಕ್ತಿತ್ವಕ್ಕೆ ಕುಂದು ಬರದಂತೆ ಇನ್ನೂ ಹೆಚ್ಚಿಗೆ ಗೌರವವನ್ನು ಸಂಪಾದಿಸಬೇಕು ಎನ್ನುವುದು ನನ್ನ ಆಸೆ. ಯಾರೊಬ್ಬರನ್ನು ಮೇಲೆ ಏರಿಸುವುದಾಗಲೀ ಯಾರೊಬ್ಬರನ್ನು ಕೆಳಗೆ ಇಳಿಸುವುದಾಗಲೀ ನನ್ನ ಹೃದಯದಲ್ಲಿ ಇಲ್ಲ. ಅದಕ್ಕಾಗಿ ಈ ಇಲಾಖೆಯನ್ನು ವಿಂಗಡಿಸಿದ್ದೇವೆ. ಈ ವಿಂಗಡಣೆಯಿಂದ ಇಬ್ಬರು ಡೈರೆಕ್ಟರೂ ಇನ್ನೂ ಹೆಚ್ಚು ಸಮರ್ಥನೀಯವಾಗಿ ಕೆಲಸಮಾಡುತ್ತಾರೆ ಎನ್ನುವ ನಂಬಿಕೆ ಇದೆ. ಮೆಡಿಕಲ್ ಎಜುಕೇಷನ್‌ನಲ್ಲಿ ಇನ್ನೂ ಅಭಿವೃದ್ಧಿಯಾಗಬೇಕು, ಆದರಲ್ಲಿ ಅನೇಕ ಮಾರ್ಪಾಡುಗಳಾಗಬೇಕು. ನಾವು ಏನು ಡಾಕ್ಟರುಗಳನ್ನು ತಯಾರು ಮಾಡುತ್ತೇವೋ ಅವರು ಸಮರ್ಥನೀಯವಾಗಿ ಕೆಲಸಮಾಡತಕ್ಕ ವಾತಾವರಣವನ್ನು ಕಲ್ಪಿಸುವುದರ ಜೊತೆಗೆ ಅವರು ನಿಜವಾಗಿಯೂ ತಮ್ಮ ವೃತ್ತಿಗನುಗುಣವಾಗಿ ಕೆಲಸ ಮಾಡತಕ್ಕ ಶಕ್ತಿಯನ್ನು ಸಂಪಾದಿಸಬೇಕು. ಅದಕ್ಕಾಗಿ ಮೆಡಿಕಲ್ ಎಜುಕೇಷನ್‌ನಲ್ಲೂ ಮಾಡತಕ್ಕ ಕೆಲಸ ಬಹಳ ಇದೆ. ಇದರ ಬಗ್ಗೆ ಅಧಿಕಾರಿಗಳೂ ಕೂಡ ಸಮರ್ಥನೀಯವಾಗಿ ಕೆಲಸ ಮಾಡುತ್ತಿದ್ದಾರೆ, ನನಗೆ ಮೆಚ್ಚುಗೆ ಇದೆ ಅದೇ ರೀತಿ ಕೆಲಸಮಾಡಬೇಕು, ಇಂಥಾ ದೊಡ್ಡ ಇಲಾಖೆಯಲ್ಲಿ ಅಲ್ಲೊಂದು ಇಲ್ಲೊಂದು ಲೋಪಗಳು ಬರಬಹುದು. ಅದನ್ನು ದೊಡ್ಡದು ಮಾಡಬಾರದು. ಇದನ್ನು ಆದಷ್ಟು ಕಡಿಮೆಮಾಡಿ ಎಲ್ಲರೂ ಹೊಂದಾಣಿಕೆಯಿಂದ ಕೆಲಸಮಾಡಲಿ ಎನ್ನುವ ಉದ್ದೇಶದಿಂದಲೇ ವಿಂಗಡಣೆ ಮಾಡಿರತಕ್ಕಂಥಾದ್ದು ಆ ಉದ್ದೇಶ ಸಾಧನೆಯಾದೀತು ಎನ್ನುವ ನಂಬಿಕೆ ನನಗೆ ಇದೆ. ಕರ್ನಾಟಕಕ್ಕೆ ಈ ವಿಂಗಡಣೆ ಹೊಸದಲ್ಲ ತಮಿಳುನಾಡಿನಲ್ಲಿ ಈ ರೀತಿ ಭಾಗಮಾಡಿದ್ದಾರೆ, ಕೇರಳದಲ್ಲಿ ಈ ರೀತಿ ಭಾಗಮಾಡಿದ್ದಾರೆ, ಮಹಾರಾಷ್ಟ್ರ ಮತ್ತು ಮಧ್ಯಪ್ರದೇಶಗಳ ಮಂತ್ರಿಗಳು ಕೂಡ ನನಗೆ ಸಿಕ್ಕಿದ್ದರು, ಅವರೂ ಈ ರೀತಿ ಮಾರ್ಪಾಡು ಮಾಡಬೇಕು ಎಂದು ಯೋಚನೆ ಮಾಡುತ್ತಿದ್ದೇವೆಂದು ಹೇಳಿದರು. ಇದರ ಬಗ್ಗೆ ಯಾರಿಗೂ ಕಾಳಜಿ ಬೇಡ. ಈ ಒಂದು ಇಲಾಖೆ ಒಮ್ಮತದಿಂದ ಕೆಲಸಮಾಡಿ ಜನರ ಇಂಗಿತವನ್ನು ಅರಿತು, ಅವರ ಕಷ್ಟ ಕಾರ್ಪಣ್ಯಗಳನ್ನು ಹೋಗಲಾಡಿಸಲಿಕ್ಕೆ ಕೆಲಸ ಮಾಡುವುದಾದರೆ ಅದಕ್ಕಿಂತ ದೊಡ್ಡತನ ಯಾವುದೂ ಇಲ್ಲ. ಮಾನ್ಯ ಸದಸ್ಯರಾದ ಶ್ರೀಮಾನ್ ಆಮ್ರುಗಂರವರು ಒಂದು ವಿಷಯವನ್ನು ಹೇಳಿದರು. ಈ

ಇಲಾಖೆಯಲ್ಲಿ ಇರತಕ್ಕ ಅಧಿಕಾರಿಗಳಲ್ಲಿ ಅಹಂ ಹೆಚ್ಚಾಗುತ್ತಾ ಇದೆ ಎಂದು. ಅಧಿಕಾರಿಗಳಲ್ಲಿ ಅಹಂ ಹೆಚ್ಚಾಗಬಾರದು ನಿಜ. ನಾನೂ ಕೂಡ ಅಹಂ ಇಲ್ಲದರೀತಿ, ಸ್ವಪ್ರತಿಷ್ಠೆ ಇಲ್ಲದ ರೀತಿಯಲ್ಲಿ ತಾವು ತಮ್ಮ ಕರ್ತವ್ಯವನ್ನು ಪಾಲನೆಮಾಡಬೇಕು ಎಂದು ಅವರಿಗೆ ಆಗಿಂದಾಗ್ಗೆ ಆದೇಶ ಕೊಡುತ್ತಿದ್ದೇನೆ. ನಿಜವಾಗಿ ಹೇಳುವುದಾದರೆ, ಎಲ್ಲರೂ ಸಮರ್ಥನೀಯವಾಗಿ ಕೆಲಸ ಮಾಡುತ್ತಿದ್ದಾರೆ. ಮಾನ್ಯ ಅಪರ್ಣಗೌಡರವರು ಇನ್ನೊಂದು ಮಾತನ್ನು ಹೇಳಿದರು. ಯಂಗೋಯಿಸಂ, ಇನ್‌ಕಾಂಪಿಟೆನ್ಸ್ ಗೊಟುಗೆದರೆ ಎಂದು. ಅದು ಇರಬಾರದು. ನಮ್ಮಲ್ಲಿ ಶಕ್ತಿ ಇದ್ದರೆ ಜನಕ್ಕೋಸ್ಕರ ಉಪಯೋಗಮಾಡಬೇಕು, ಜನ ಹಿತಕ್ಕಾಗಿ ಕೆಲಸಮಾಡಬೇಕು. ಆ ರೀತಿ ಯಾರನ್ನೂ ಕೆಲಸ ಮಾಡುತ್ತಾರೋ ಅವರಲ್ಲಿ ಅಹಂ ಉಳಿಯುವುದಿಲ್ಲ. ಆ ರೀತಿ ಕೆಲಸ ಮಾಡುತ್ತಾರೆ ಎನ್ನತಕ್ಕ ಭರವಸೆಯನ್ನು ಈ ಸಭೆಗೆ ತಮ್ಮ ಮೂಲಕ ನೀಡಲು ಇಷ್ಟಪಡುತ್ತೇನೆ. ಈಗ ಇಲಾಖೆಯನ್ನು ಏಕೆ ವಿಂಗಡಣೆ ಮಾಡಬೇಕಾದ ಪರಿಸ್ಥಿತಿ ಬಂತು ಎನ್ನುವುದರ ಬಗ್ಗೆ ಒಂದೆರಡು ಅಂಶಗಳನ್ನು ತಮ್ಮ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ. ಇಷ್ಟೊಂದು ದೊಡ್ಡ ಇಲಾಖೆಯಲ್ಲಿ ಎಲ್ಲಾ ಕೆಲಸವನ್ನು ಒಬ್ಬರೇ ಮಾಡಲಿಕ್ಕೆ ಸಾಧ್ಯವಿಲ್ಲ. ಉದಾಹರಣೆಗೆ ಹೇಳುವುದಾದರೆ, ೫ ವರ್ಷಗಳ ಹಿಂದೆ ಯಾರೋ ಒಬ್ಬ ಡಾಕ್ಟರ್ ರಾಜಿನಾಮೆ ಕೊಟ್ಟರೆ ಅದು ಇವತ್ತು ಅಂಗೀಕರಿಸಬೇಕು ಎಂದು ಬರುತ್ತದೆ. ಈ ರೀತಿ ಏಕೆ ಆಗುತ್ತದೆ ಎಂದರೆ, ನಿಜವಾಗಲೂ ಒಬ್ಬರಿಂದ ನಾವು ಎಷ್ಟರಮಟ್ಟಿಗೆ ಕೆಲಸವನ್ನು ನಿರೀಕ್ಷಣೆ ಮಾಡಬಹುದೋ ಅಷ್ಟು ಕೆಲಸವನ್ನು ನಾವು ನಿರೀಕ್ಷಣೆ ಮಾಡಬಹುದು, ಅದಕ್ಕಿಂತ ಹೆಚ್ಚಾದರೆ ನಿಧಾನವಾಗುತ್ತದೆ, ಕಷ್ಟವಾಗುತ್ತದೆ. ಇದನ್ನು ತಿಳಿದು ನಾವು ಬೈಫರ್‌ಕೇಟ್ ಮಾಡಿದ್ದೇವೆ. ಇದರ ಆಗುಹೋಗುಗಳನ್ನು ಮುಂದೆ ಕಾದು ನೋಡೋಣ. ಇದರ ಪರಿಣಾಮ ಒಳ್ಳೆಯದಾಗುವುದಾದರೆ ಸಂತೋಷ, ಇಲ್ಲವಾದರೆ ಅದನ್ನು ಪುನರಾಲೋಚನೆ ಮಾಡಲಿಕ್ಕೆ ಅವಕಾಶವಿದೆ. ಇನ್ನೂ ಕೂಡ ಪುನರ್ವಿಂಗಡಣೆ ಮಾಡಬೇಕು. ಹೆಲ್ತ್‌ಗೆ ಬೇರೆ ಡೈರಕ್ಟರ್ ಫ್ಯಾಮಿಲಿ ವೆಲ್‌ಫೇರ್‌ಗೆ ಒಬ್ಬರು ಬೇರೆ ಡೈರಕ್ಟರ್ ಇರಬೇಕು. ಈಗ ವಿಂಗಡಣೆ ಮಾಡಿರುವುದರ ಪರಿಣಾಮವನ್ನು ಮುಂದೆ ಕಾದು ನೋಡೋಣ. ಕೆಲವೇ ತಿಂಗಳಲ್ಲಿ ನಾವು ಊಹಿಸಲಿಕ್ಕೆ ಸಾಧ್ಯವಿಲ್ಲ, ಇನ್ನೂ ಕೆಲವುಕಾಲ ಕಾದು ನೋಡೋಣ. ಇದರ ಬಗ್ಗೆ ನಿರ್ದಿಷ್ಟವಾದ ಕಾರ್ಯಕ್ರಮ ಹಾಕಿಕೊಳ್ಳಬೇಕೇ ಹೊರತು ಪ್ರತಿವರ್ಷ ಬೈಫರ್‌ಕೇಟ್ ಮಾಡುತ್ತಾ ಹೋದರೆ ಇಲಾಖೆಯಲ್ಲಿ ಪ್ರಾಮಾಣಿಕತೆ, ದಕ್ಷತೆ ಉಳಿಯಲಿಕ್ಕೆ ಸಾಧ್ಯವಿಲ್ಲವೆನ್ನುವುದು ನನ್ನ ನಂಬಿಕೆ. ಈಗ ಬೈಫರ್‌ಕೇಟ್ ಮಾಡಿರುವುದರ ಪರಿಣಾಮ ಕಾದು ನೋಡಿ ಮುಂದೆ ಆಲೋಚನೆ ಮಾಡಲಿಕ್ಕೆ ಸಮಯವಿದೆ ಎಂದು ಈ ಸಮಯದಲ್ಲಿ ಹೇಳಬಯಸುತ್ತೇನೆ,

(ಶ್ರೀ ಎಂ.ಸಿ. ಬಸಪ್ಪನವರು ಅಧ್ಯಕ್ಷಪೀಠವನ್ನಲಂಕರಿಸಿದರು)

ಇನ್ನು ಕ್ಷ-ಕಿರಣಗಳ ಬಗ್ಗೆ ಅನೇಕ ವಿಷಯಗಳನ್ನು ಸನ್ಮಾನ್ಯ ಸದಸ್ಯರು ಸೂಚಿಸಿದ್ದಾರೆ. ಇದರ ಬಗ್ಗೆ ನಾನಾದರೂ ಹೇಳುವುದಾದರೆ, ನಮ್ಮ ರಾಜ್ಯದಲ್ಲಿ ೨೦೦ ಕ್ಷ-ಕಿರಣಗಳಿವೆ. ಇದರಲ್ಲಿ ಸುಮಾರು ೫೧ ಕ್ಷ-ಕಿರಣಗಳು ೭–೫–೧೯೬೭ರ ವರದಿ ಪ್ರಕಾರ ಕೆಲಸ ಮಾಡುತ್ತಿಲ್ಲ. ಇದರಲ್ಲಿ ೩೨ ಕ್ಷ-ಕಿರಣಗಳು ಕಂಡೆಮ್ ಆಗಿವೆ ರಿಪೇರಿ ಮಾಡಿದರೂ ಉಪಯೋಗವಾಗುವುದಿಲ್ಲ ಎನ್ನತಕ್ಕ ವರದಿ ಸರ್ಕಾರಕ್ಕೆ ತಲುಪಿದೆ. ಸುಮಾರು ೧೭೫ ತಾಲ್ಲೂಕುಗಳ ಪೈಕಿ ೯೧ ತಾಲ್ಲೂಕುಗಳಲ್ಲಿ ಕ್ಷ-ಕಿರಣದ ಸೌಲಭ್ಯವನ್ನು ನಾವು ಒದಗಿಸಿ ಕೊಟ್ಟಿದ್ದೇವೆ. ಈ ವರ್ಷ ೪೬ ಕ್ಷ-ಕಿರಣಗಳನ್ನು ತಾಲ್ಲೂಕುಬೋರ್ಡ್ ಮತ್ತು ಟೀಚಿಂಗ್ ಆಸ್ಪತ್ರೆಗಳಿಗೆ ಒದಗಿಸಿದೆ. ಹೋದವರ್ಷ ಸಾಮಾನ್ಯವಾಗಿ ಯಾವ ಯಾವ ಕ್ಷ-ಕಿರಣಗಳು ಕೆಟ್ಟುಹೋಗಿದ್ದುವೋ ಅವುಗಳೆಲ್ಲವನ್ನೂ ರಿಪೇರಿ ಮಾಡಿದ್ದೇವೆ. ೪ ವರ್ಷಗಳಿಂದ ಹುಬ್ಬಳ್ಳಿ ಟೀಚಿಂಗ್ ಆಸ್ಪತ್ರೆಯಲ್ಲಿ ಕೆಟ್ಟುಹೋಗಿದ್ದಂಥ ಕ್ಷ-ಕಿರಣಗಳೆಲ್ಲವನ್ನೂ ಕೂಡ ರಿಪೇರಿಮಾಡಿ ಅವುಗಳೆಲ್ಲವೂ ಕೆಲಸ ಮಾಡುತ್ತಿವೆ ಎಂಬ ವಿಷಯವನ್ನು ತಮ್ಮ ಗಮನಕ್ಕೆ ತರುವುದಕ್ಕೆ ಸಂತೋಷವಾಗುತ್ತದೆ.

ಇನ್ನು ವೈದ್ಯರ ಬಗ್ಗೆ ಹೇಳವುದಾದರೆ, ನಮ್ಮಲ್ಲಿರತಕ್ಕ ಸುಮಾರು ೨೦೦೦ ಆಸ್ಪತ್ರೆಗಳ ಪೈಕಿ ಸುಮಾರು ೫೦೦ ಆಸ್ಪತ್ರೆಗಳಲ್ಲಿ ವೈದ್ಯರು ಇರಲಿಲ್ಲ. ಇದಕ್ಕೆ ಕಾರಣ ಪಬ್ಲಿಕ್ ಸರ್ವಿಸ್ ಕಮಿಷನ್‌ನವರು ಕಳೆದ ೪ ವರ್ಷಗಳಿಂದ ಡಾಕ್ಟರುಗಳ ನೇಮಕವನ್ನು ಮಾಡಿರಲಿಲ್ಲ, ಈಗ ನಾವು ಸ್ಥಳೀಯ ಅಭ್ಯರ್ಥಿಗಳನ್ನು ನೇಮಕಮಾಡುವುದರ ಮೂಲಕ ೩೮೦ ಡಾಕ್ಟರುಗಳನ್ನು ನೇಮಕ ಮಾಡಿದ್ದೇವೆ. ಸಾಮಾನ್ಯವಾಗಿ ನಮ್ಮ ರಾಜ್ಯದಲ್ಲಿರತಕ್ಕ ಆಸ್ಪತ್ರೆಗಳಿಗೆ ಪುರುಷ ವೈದ್ಯರನ್ನು, ಮಹಿಳಾ ವೈದ್ಯರನ್ನು ಈಗ ನೇಮಕ ಮಾಡಿದ್ದೇವೆ, ಅವರೆಲ್ಲರೂ ಕೆಲಸ ಮಾಡುತ್ತಿದ್ದಾರೆ. ಎಲ್ಲಾ ಹುದ್ದೆಗಳನ್ನೂ ಭರ್ತಿ ಮಾಡಿದ್ದೀರಾ ಎಂದು ಯಾರಾದರೂ ಪ್ರಶ್ನೆ ಮಾಡಬಹುದು, ಎಲ್ಲಾ ಹುದ್ದೆಗಳನ್ನು ಭರ್ತಿಮಾಡಲಿಕ್ಕೆ ಸಾಧ್ಯ

ವಿಲ್ಲ. ೧೨೪ ಹುದ್ದೆಗಳು ಖಾಲಿ ಇವೆ. ಪಬ್ಲಿಕ್ ಸರ್ವಿಸ್ ಕಮಿಷನ್‌ನವರು ಈಗ ೩೨೫ ನೇಮಕ ಗಳನ್ನು ಮಾಡುತ್ತಾ ಇದ್ದಾರೆ. ಇವುಗಳನ್ನು ನೇಮಕಮಾಡುವುದರ ಮೂಲಕ ಇಡೀ ರಾಜ್ಯದಲ್ಲಿ ಎಲ್ಲಾ ಆಸ್ಪತ್ರೆಗಳಿಗೂ ವೈದ್ಯರನ್ನು ಒದಗಿಸಲಿಕ್ಕೆ ಸಾಧ್ಯವಾಗುತ್ತದೆ. ತಮ್ಮೆಲ್ಲರಿಗೂ ತಿಳಿದಿರುವಂತೆ ಸಾಮಾನ್ಯವಾಗಿ ಪಟ್ಟಣದಲ್ಲಿ ಓದಿ ಡಿಗ್ರಿಗಳನ್ನು ಪಡೆದಿರತಕ್ಕ ವೈದ್ಯರು ಹಳ್ಳಿಗಳಿಗೆ ಹೋಗಿ ಕೆಲಸಮಾಡ ಬೇಕು ಎಂದರೆ ಅವರಲ್ಲಿ ಮುಂಡಿವಂತಿಕೆ ಕಾಣುತ್ತದೆ. ಆದ್ದರಿಂದ ಇದರ ಬಗ್ಗೆ ನಾನೂ ಕೂಡ ಆಲೋ ಚನೆ ಮಾಡುತ್ತಿದ್ದೇನೆ. ಏನೆಂದರೆ, ಒಬ್ಬ ಎಂ ಬಿ.ಬಿ.ಎಸ್. ಪದವೀಧರ ತಯಾರಾಗಬೇಕಾದರೆ ಒಂದು ಲಕ್ಷ ರೂಪಾಯಿಗಳು ಸರ್ಕಾರಕ್ಕೆ ಖರ್ಚು ಆಗುತ್ತದೆ. ಇದರ ಪ್ರಯೋಜನ ಏನು ? ಪಾಸಾದ ಕೂಡಲೇ ಹೊರದೇಶಗಳಿಗೆ ಹೋಗುತ್ತಾರೆ. ಅಂಥವರಿಗೆ ನಾವೇಕೆ ಖರ್ಚುಮಾಡಬೇಕು. ಆದ್ದರಿಂದ ಇವತ್ತು ಯಾವ ಒಬ್ಬ ಮೆಡಿಕಲ್ ಪದವೀಧರನಾಗಿ ಹೊರ ಬಂದ ಮೇಲೆ, ಸರ್ಕಾರಿ ನೌಕರಿಯಲ್ಲಿರತಕ್ಕ ವರಾಗಲೀ, ಕನಿಷ್ಠ ಎರಡು ವರ್ಷಗಳಾದರೂ ಕಡ್ಡಾಯವಾಗಿ ಗ್ರಾಮಾಂತರ ಪ್ರದೇಶಗಳಲ್ಲಿ ಕೆಲಸ ಮಾಡಲೇಬೇಕು, ಕೆಲಸ ಮಾಡದೇ ಹೋದರೆ ಅವರ ನೇಮಕ ಖಾಯಂ ಆಗಬಾರದು ಮತ್ತು ಅವರಿಗೆ ಬಡ್ತಿ ಸಿಗಬಾರದು ಹಾಗೂ ಪಿಜಿ, ಸೌಲಭ್ಯ ದೊರಕಬಾರದು ಎಂದು ಕಂಡೀಷನ್ ಹಾಕಿ ನೇಮಕಮಾಡಿದರೆ ಗ್ರಾಮಾಂತರ ಪ್ರದೇಶಗಳಲ್ಲಿ ಇವತ್ತು ಡಾಕ್ಟರ್ಸ್ ಹೋಗುತ್ತಾ ಇಲ್ಲ ಎನ್ನತಕ್ಕ ಕೂಗು ಏನಿದೆ ಅದು ಬಹಳಷ್ಟು ಕಡಿಮೆಯಾಗುತ್ತದೆ ಎಂದು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ,

ಕಳೆದ ವರ್ಷದಿಂದ ಅದು ಕಡಿಮೆಯಾಗಿದೆ. ಸ್ಥಳೀಯ ಅಭ್ಯರ್ಥಿಗಳ ನೇಮಕವನ್ನು ಮಾಡುತ್ತಿಲ್ಲ ಏತಕ್ಕೆಂದರೆ ಬೆಂಗಳೂರಿನಲ್ಲಿಯೇ ಬೇಕಾದಷ್ಟು ಆಸ್ಪತ್ರೆಗಳು ಇವೆ, ನರ್ಸಿಂಗ್ ಹೋಮ್‌ಗಳಿವೆ, ಮತ್ತು ಎಲ್ಲಾ ಸೌಲಭ್ಯಗಳೂ ಇವೆ ಅದೇ ಯಾವುದಾದರೂ ಪಿ.ಎಚ್.ಎಂ.ಎಚ್. ಆಸ್ಪತ್ರೆಗಳಲ್ಲಿ ಡಾಕ್ಟರ್ ಇಲ್ಲ ಎಂದರೆ ಅಲ್ಲಿರತಕ್ಕ ಜನತೆಯ ದೃಷ್ಟಿಯಿಂದ ಡಾಕ್ಟರಾಗಳ ಮನಸ್ಸನ್ನು ಒಲಿಸಿಕೊಳ್ಳಬೇಕು ಎನ್ನುವ ದೃಷ್ಟಿಯಿಂದ ಅವರು ಎಲ್ಲಿಗೆ ಹಾಕಿದರೂ ಅಲ್ಲಿಗೆ ಹೋಗಿ ಕೆಲಸ ಮಾಡುವ ಶರತ್ತುಗಳನ್ನು ಹಾಕುತ್ತಿ ದ್ದೇವೆ. ಈ ರೀತಿ ನಾವು ನೇಮಕ ಮಾಡಿಕೊಳ್ಳುವಾಗಲೇ ಶರತ್ತನ್ನು ಹಾಕುತ್ತಿರುವುದರಿಂದ ಸ್ವಲ್ಪ ಮಟ್ಟಿಗೆ ನಮಗೆ ಇದ್ದ ಕಷ್ಟವನ್ನು ಬಗೆಹರಿಸುವುದಕ್ಕೆ ಸಾಧ್ಯವಾಗುತ್ತಿದೆ. ನಾನಾದರೂ ಯೋಚನೆ ಮಾಡುತ್ತಿರುವುದೇನೆಂದರೆ ಕನಿಷ್ಟ ಪಕ್ಷ ಎರಡು ವರ್ಷಗಳ ಕಾಲ ಒಬ್ಬ ಡಾಕ್ಟರನ್ನು ಒಂದು ಊರಿನಿಂದ ಮತ್ತೊಂದು ಊರಿಗೆ ವರ್ಗ ಮಾಡಬಾರದು ಮತ್ತು ಅವರು ಒಳ್ಳೆಯ ಡಾಕ್ಟರ್ ಎಂದು ಹೆಸರು ಪಡೆದಿ ದ್ದರೆ ಇನ್ನು ಒಂದು ವರ್ಷಗಳ ಕಾಲ ಬೇಕಾದರೆ ಅಲ್ಲಿಯೇ ಇಟ್ಟರೆ ಅದರಿಂದ ಜನತೆಗೆ ಅನುಕೂಲವಾಗು ತ್ತದೆ ಎನ್ನುವ ಬಗ್ಗೆ ಯೋಚನೆ ಮಾಡುತ್ತಿದ್ದೇನೆ. ಎಲ್ಲರೂ ಒಳ್ಳೆಯ ಜನವೆಂದು ಹೇಳುತ್ತಿಲ್ಲ, ಅವರ ಲ್ಲಿಯೂ ಕೆಲವರು ಕೆಟ್ಟವರು ಇರಬಹುದು ಅವರ ಬಗ್ಗೆ ಸೂಕ್ತ ಕ್ರಮ ಕೈಗೊಂಡು, ಒಳ್ಳೆಯವರಿಗೆ ಹೆಚ್ಚಿನ ಪ್ರೋತ್ಸಾಹ ಕೊಡಬೇಕೆಂಬುದೇ ನನ್ನ ಉದ್ದೇಶವಾಗಿದೆ.

ಶ್ರೀ ಗೋವಿಂದ ಪಿ. ಒಡೆಯರಾಜ್—ಒಳ್ಳೆಯ ಡಾಕ್ಟರ್ ಆದವರನ್ನು ಅಲ್ಲಿಯೇ ಇರಕೂಡಿಸು ತ್ತೇವೆ ತೊಂದರೆ ಕೊಡುವುದಿಲ್ಲವೆಂದು ಹೇಳಿದಿರಿ, ಆದರೆ ಮುಕ್ಕಾಲು ಪಾಲು ಒಳ್ಳೆಯ ಜನರಿಗೆ ನಿಮ್ಮ ಡಿಪಾರ್ಟ್‌ಮೆಂಟಿನಲ್ಲಿ ತೊಂದರೆಯಾಗುತ್ತಿದೆ ಎನ್ನುವುದು ವಿಧಿವತ್ತಾದ ಮಾತಾಗಿದೆ...

ಶ್ರೀ ಎಂ ಮಲ್ಲಪ್ಪ —ಇಲ್ಲ, ಆ ಭಾವನೆ ಇದ್ದರೆ ದಯವಿಟ್ಟು ಅದನ್ನು ತಾವು ಬದಲಾಯಿಸಿಕೊಳ್ಳ ಬೇಕು. ಆ ರೀತಿ ಯಾರಿಗೂ ಇಲ್ಲ ಎಂದು ಹೃದಯ ಪೂರ್ವಕವಾಗಿ ಮನಸುದ್ಧಿಪೂರ್ವಕವಾಗಿ ಹೇಳುತ್ತಿ ದ್ದೇನೆ ಯಾರು ಒಳ್ಳೆಯವರು ಇದ್ದಾರೆ ಅವರಿಗೆಲ್ಲರಿಗೂ ಅಲ್ಲಿ ಅಲ್ಲಿಯೇ ಎಲ್ಲಾ ಸೌಕರ್ಯಗಳನ್ನು ಒದ ಗಿಸಿಕೊಟ್ಟು ಪ್ರೋತ್ಸಾಹ ಕೊಡುತ್ತಿದ್ದೇನೆ. ಬಡ್ತಿ ಕೊಟ್ಟಿದ್ದೇವೆ, ಆದುದರಿಂದ ತಾವು ಹೇಳುವ ಮಾತನ್ನು ಯಾರು ಒಪ್ಪುವುದಿಲ್ಲವೆಂದು ನಂಬಿಕೊಂಡಿದ್ದೇನೆ. ಕಳೆದ ೧೦ ವರ್ಷಗಳಿಂದ ಬಡ್ತಿಯೇ ಸಿಕ್ಕಿಲ್ಲವೆಂದು ಕೊರಗುತ್ತಿದ್ದರೋ ಅಂಥವರಿಗೆಲ್ಲಾ ಬಡ್ತಿ ದೊರಕಿದೆ, ಅವರಿಗಿದ್ದ ತೊಂದರೆಗಳನ್ನೆಲ್ಲಾ ಆದಷ್ಟು ಬಗೆಹರಿಸುವುದಕೆ ಪ್ರಯತ್ನ ಮಾಡಿದ್ದೇನೆ. ನೂರಕ್ಕೆ ನೂರರಷ್ಟು ನಾನು ಧರ್ಮದಿಂದ ನಡೆ ದಿದ್ದೇನೆಂದು ಹೇಳುತ್ತಿಲ್ಲ. ಅಪ್ಪಿತಪ್ಪಿ ಎಲ್ಲಿಯಾದರೂ ಯಾರಿಗಾದರೂ ಅನ್ಯಾಯವಾಗಿರಬಹುದು, ಅದನ್ನು ನನ್ನ ಗಮನಕ್ಕೆ ತಂದರೆ ಸರಿಪಡಿಸಲಿಕ್ಕೆ ಸಿದ್ಧನಿದ್ದೇನೆ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಬಯಸುತ್ತೇನೆ.

ಶ್ರೀ ಎಸ್. ಆರ್. ಬೊಮ್ಮಾಯಿ—ನಿಮ್ಮ ಭೂಸಾಫ್ಟ್ಸನ್ನು ಪ್ರಶ್ನೆ ಮಾಡುತ್ತಿಲ್ಲ. ಯೋಗ್ಯ ರಾಗಿ ಕೆಲಸ ಮಾಡುತ್ತಿದ್ದವರಿಗೆ ತಾವು ಸರಿಯಾದ ಪ್ರೋತ್ಸಾಹ ಕೊಟ್ಟಿಲ್ಲ, ತಮಗೆ ಉದಾಹರಣೆಗೆ ಹೇಳು

ವುದಾದರೆ ಅವರ ಹೆಸರು ಹೇಳುವುದಿಲ್ಲ, ಒಬ್ಬ ಅತ್ಯಂತ ಉನ್ನತ ಹುದ್ದೆಯಲ್ಲಿರತಕ್ಕ ಒಬ್ಬ ಅಧಿಕಾರಿ ಅತ್ಯಂತ ಸಮರ್ಪಕವಾಗಿ ಕೆಲಸ ಮಾಡುತ್ತಿದ್ದರು. ಬಹಳ ಸ್ಟ್ರಿಕ್ಟ್ ಅಂಡ್ ಡಿಸಿಪ್ಲಿನ್ ಮ್ಯಾನ್ ಅಂತ ಹೆಸರು ಪಡೆದಿದ್ದರು, ಯಾವ ಮಂತ್ರಿಗಳವರ ಪರ್ಟಸ್ಸಿಗೂ ಒಳಗಾಗದೇ ಕೆಲಸ ಮಾಡುತ್ತಿದ್ದರು ಅಂಥಾ ಒಬ್ಬ ನಿಷ್ಠಾವಂತ ಅಧಿಕಾರಿಯಾಗಿದ್ದವರ ಅಧಿಕಾರ ವನ್ನು ಮೊಟಕು ಮಾಡಿದ್ದೀರಿ ಇದನ್ನು ತಮಗೆ ಬರೀ ಉದಾಹರಣಾರ್ಥವಾಗಿ ಹೇಳುತ್ತಿದ್ದೇನೆ. ಅವರು ನಿಮ್ಮ ಇಲಾಖೆಯಲ್ಲಿ ಅತ್ಯಂತ ಉನ್ನತ ಅಧಿಕಾರದಲ್ಲಿರುವವರಾಗಿದ್ದಾರೆ. ಅಂಥವರ ಬಗ್ಗೆ ತಾವು ಈ ರೀತಿ ಕ್ರಮ ತೆಗೆದುಕೊಂಡಿರುವುದು ಸರಿಯೇ ?

ಶ್ರೀ ಎಂ. ಮಲ್ಲಪ್ಪ.—ನಾವು ಇಲ್ಲಿ ಕ್ಲೈಫರ್‌ಕೇಟ್ ಮಾಡಬೇಕಾಗುತ್ತದೆ. ಮೊದಲನೆಯದಾಗಿ ಕೆಲಸ, ಎರಡನೆಯದಾಗಿ ಸಾಮಾನ್ಯವಾಗಿ ಇರಬೇಕಾದ ಅರ್ಹತೆ ಮತ್ತು ಅದರಲ್ಲಿ ನಾವು ಇವತ್ತಿನ ದಿವಸ ಮೆಡಿಕಲ್ ಎಜುಕೇಷನನ್ನು ನಾವು ಕಡೆಗಾಣಿಸುವ ಹಾಗೆ ಇಲ್ಲ. That is a very important department. Unless we improve the quality of medical education we cannot give useful service to the rural folks. Because he is efficient just to reform medical education we have posted him.

ನಾವು ಇದರ ಬಗ್ಗೆ ವಿತಂಡವಾದವನ್ನು ಮಾಡುವುದು ಬೇಡ. ಯಾರೂ ಇದರ ಬಗ್ಗೆ ತಪ್ಪಾಗಿ ಭಾವಿಸಬಾರದು, ಇದನ್ನು ನಾನು ತೆರೆದ ಹೃದಯದಿಂದ, ಒಳಮನಸ್ಸಿನಿಂದ ಇದನ್ನು ಹೇಳುತ್ತಿದ್ದೇನೆ. ಅಲ್ಲಿ ಅನಿವಾರ್ಯವಾಗಿ ಅದನ್ನು ಮಾಡಿರತಕ್ಕದ್ದೇ ಹೊರತು ಯಾರಿಗೂ ಸಹ ಅವರ ಇದ್ದ ಕಿರೀಟವನ್ನು ಕಳಚಿ ನೆಲದ ಮೇಲೆ ಹಾಕಿ ಇನ್ನೊಬ್ಬರ ತಲೆ ಮೇಲೆ ಇಡಬೇಕೆಂದೇನೂ ಇಲ್ಲ. ದಕ್ಷತೆಯಿಂದ, ಪ್ರಾಮಾಣಿಕತೆಯಿಂದ ಕೆಲಸ ಮಾಡತಕ್ಕಂಥವರಿಗೆ ತೊಂದರೆ ಕೊಡಬೇಕೆಂದು ಏನೂ ಇಲ್ಲ. ಇದನ್ನು ತಾವು ಅರ್ಥ ಮಾಡಿಕೊಳ್ಳಬೇಕು ಅದನ್ನು ಬಿಟ್ಟು ತಾವು ಯಾವುದನ್ನೋ ಮನಸ್ಸಿನಲ್ಲಿ ದುರ್ಭಾವನೆಯನ್ನಿಟ್ಟುಕೊಂಡು ಹೇಳುವುದು ಸರಿಯಲ್ಲ. ನಾವು ಅಲ್ಲಿ ಅವರಿಬ್ಬರಿಗೂ ಸಮಾನವಾದ ಅವಕಾಶ ಕೊಟ್ಟು ಅವರ ಒಂದು ಸೇವೆಯನ್ನು ತೆಗೆದುಕೊಳ್ಳಬೇಕು ಎನ್ನತಕ್ಕದ್ದೇ ನಮ್ಮ ಇಚ್ಛೆಯಾಗಿತ್ತು.

ಶ್ರೀ ಎಸ್. ಆರ್. ಬೊಮ್ಮಾಯಿ—ನನ್ನಲ್ಲಿ ದುರ್ಭಾವನೆ ಇಲ್ಲ, I am very categorical when I say that Officer was more suited, more efficient, more qualified for being there. He was doing very wonderful work and he is known for his honesty, uprightness, and he was not amenable to influence even of the Chief Minister or Minister. You have changed him. There fore, I am asking, I do not hold any brief for him. He was doing very good work in that place and there was no necessity for changing him. I do not say that there is mala fide intention. But the public of the State are of the view that he should not have been changed. The man who was in charge of medica l education could have been there in the medical education branch. But you are not continuing him.

SRI M. MALLAPPA—I pose a similar question. Is medical education un-important ? It is more important than health. An honest, efficient officer is required and he will show his metle and he will show what improvement he has made. Please wait for one year.

ಇನ್ನು ಮಲೇರಿಯಾ ಹಾವಳಿ ನಮ್ಮ ದೇಶದಲ್ಲಿ ತುಂಬಾ ಹರಡಿದೆ. ಇತ್ತೀಚಿನ ದಿನಗಳಲ್ಲಿ ಎಲ್ಲಾ ಕಡೆಗಳಲ್ಲೂ ಅದು ಕಾಣಿಸಿಕೊಳ್ಳುತ್ತಿದೆ ಎಂದು ಮಾನ್ಯ ಸದಸ್ಯರುಗಳು ಹೇಳಿದರು. ಅದು ನಿಜ. ಇದು ನಮ್ಮ ರಾಜ್ಯದಲ್ಲಿ ಒಂದೇ ಅಲ್ಲಾ ಇಡೀ ಭಾರತ ದೇಶದಲ್ಲಿಯೇ ಹರಡಿದೆ. ಇದು ಮತ್ತೆ ಪುನಃ ಕಾಣಿಸಿಕೊಳ್ಳುತ್ತಿದೆ. ಇದಕ್ಕೆ ಕಾರಣ ಏನು ಎಂದರೆ ಮಲೇರಿಯಾ ಉತ್ಪತ್ತಿ ಮಾಡತಕ್ಕ ಸೊಳ್ಳೆಗಳೇನಿವೆ ಅವುಗಳೆಲ್ಲಾ ಇಮ್ಯೂನ್ ಆಗಿದೆ. ಡಿ.ಡಿ.ಟಿಗೆ ಆಗಲೀ ಅಥವಾ ಇನ್ನೊಂದು ಬಿ.ಹೆಚ್.ಸಿ. ಪೌಡರಿಗೆ ಅವು ಸಾಯುತ್ತಿಲ್ಲ. ಅದಕ್ಕಾಗಿ ಈಗ ಬೇರೆ ಒಂದು ಮಲಾಥಿನ್ ಎನ್ನತಕ್ಕ ಒಂದು ಔಷಧಿಯನ್ನು ಪ್ರಯೋಗ ಮಾಡುತ್ತಿದ್ದಾರೆ. ಕಳೆದ ವರ್ಷದಿಂದ ಮಲೇರಿಯಾ ಹಾವಳಿ ನಮ್ಮ ರಾಜ್ಯದಲ್ಲಿಯೂ ಕಡಿಮೆಯಾಗಿದೆ.

ಸಾಮಾನ್ಯವಾಗಿ ನಾವು ಗ್ರಾಮಾಂತರ ಪ್ರದೇಶಗಳಲ್ಲಿ ಈ ಔಷಧಿಗಳನ್ನು ಜನಗಳಿಗೆ ಸುಲಭ ರೀತಿಯಲ್ಲಿ ಸಿಗುವ ಹಾಗೆ ವ್ಯವಸ್ಥೆ ಮಾಡಿದ್ದೇವೆ. ಮಂಡ್ಯ ಜಿಲ್ಲೆಯಲ್ಲೂ ಸಹ ಇವತ್ತು ಡ್ರಗ್ ಡಿಸ್ಟ್ರಿಬ್ಯೂಷನ್ ಸೆಂಟರ್ ಅಂತ ಮಾಡಿದ್ದೇವೆ. ಅದರ ಮೂಲಕ ನಾವು ಮಲೇರಿಯಾ ನಿವಾರಣಾ ಔಷಧಿಯನ್ನು ಕೊಡುತ್ತಿದ್ದೇವೆ. ಮತ್ತೆ ಫಿವರ್ ಡ್ರಗ್ಸನ್ನು ರಾಜ್ಯದಲ್ಲಿ ಸ್ಥಾಪನೆ ಮಾಡಿದ್ದೇವೆ. ಅದರ ಮೂಲಕ ಇವತ್ತಿನ ದಿವಸ ನಮ್ಮ ರಾಜ್ಯದಲ್ಲಿ ಏನು ಮಲೇರಿಯಾ ಹಾವಳಿ ಇತ್ತು ಅದನ್ನು ಬಹಳಷ್ಟು ಮಟ್ಟಿಗೆ ತಡೆಗಟ್ಟುವುದಕ್ಕೆ ಕಾರಣವಾಗಿದೆ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತಿದ್ದೇನೆ. ತಾವು ಇನ್ನು ಎಲ್ಲಿಯಾದರೂ ಔಷಧಿ ಸಿಗುತ್ತಿಲ್ಲವೆಂದು ಹೇಳಿದರೆ ಅಲ್ಲಿಗೆ ಆದಷ್ಟು ಬೇಗ ಅದನ್ನು ಒದಗಿಸಿ ಆ ಮಲೇರಿಯಾ ಹಾವಳಿಯಿಂದ ನರಳುತ್ತಿದ್ದರೆ ಅದನ್ನು ತಪ್ಪಿಸುವುದಕ್ಕೆ ಸೂಕ್ತ ಕ್ರಮವನ್ನು ಕೈಗೊಳ್ಳುತ್ತೇನೆಂದು ಹೇಳಬಯಸುತ್ತೇನೆ.

ಇನ್ನು ಕ್ಷಯ ರೋಗವೇನಿದೆ. ಇದು ಮಹಾ ಮಾರಿ ಇವತ್ತು ನಮ್ಮಲ್ಲಿ ಸುಮಾರು ೩ ಸಾವಿರ ಹಾಸಿಗೆಗಳನ್ನು ಪ್ರತ್ಯೇಕವಾಗಿ ಆಸ್ಪತ್ರೆಗಳಲ್ಲಿ ಒದಗಿಸಿರುವುದರಿಂದ ಈಗ ರೋಗ ನಿರ್ಮೂಲವಾಗುವುದಕ್ಕೆ ಅನುಕೂಲವಾಗಿದೆ. ಅವರಿಗೆ ವೈದ್ಯಕೀಯ ಸೌಲಭ್ಯಗಳನ್ನು ಒದಗಿಸಿದ್ದೇವೆ. ೩ ಸಾವಿರ ಹಾಸಿಗೆಗಳಲ್ಲಿ ೮೯೯ ಹಾಸಿಗೆಗಳು ಬೆಂಗಳೂರು ನಗರ ಒಂದರಲ್ಲಿಯೇ ಇದೆ. ಅಂದರೆ ಬೆಂಗಳೂರು ನಗರ ಒಂದಕ್ಕೆ ಮಾತ್ರ ಮೀಸಲಾಗಿಟ್ಟಿದ್ದೇವೆಂದು ಹೇಳುವುದಿಲ್ಲ. ಏತಕ್ಕೆಂದರೆ ವಾಸಿ ಆಗದೇ ಇರತಕ್ಕಂಥ ರೋಗಿಗಳು ಗ್ರಾಮಾಂತರ ಪ್ರದೇಶಗಳಿಂದ ಎಷ್ಟೋ ರೋಗಿಗಳು ಇಲ್ಲಿಗೆ ಬರುತ್ತಾರೆ. ಅವರಿಗೂ ಅನುಕೂಲವಾಗಲಿ ಎನ್ನುವ ಉದ್ದೇಶದಿಂದ ಮಾಡಿದ್ದೇವೆ. ಮತ್ತೆ ಇನ್ನೊಂದು ಹೊಸ ಪದ್ಧತಿಯನ್ನು ಅನುಸರಿಸುತ್ತಿದ್ದೇವೆ. ಅದು ಏನೆಂದರೆ ಎಲ್ಲರಿಗೂ ಆಸ್ಪತ್ರೆಯಲ್ಲಿಯೇ ಚಿಕಿತ್ಸೆ ಕೊಟ್ಟು ಜಾಗವನ್ನು ಕೊಡಲು ಆಗುವುದಿಲ್ಲ ಅದಕ್ಕೆ ಡಾಮಿಸಲರಿ ಲೈನ್ ಆಫ್ ಟ್ರೀಟ್‌ಮೆಂಟ್ ತರಹ ಕೊಡುತ್ತಿದ್ದೇವೆ ಇದರಿಂದ ಎಷ್ಟೋ ರೋಗಿಗಳ ಕಾಯಿಲೆ ಗುಣಮುಖವಾಗುತ್ತಿದೆ. ಅದು ಉಲ್ಬಣವಾದ ಕಾಲಕ್ಕೆ ಅವರನ್ನು ಆಸ್ಪತ್ರೆಯಲ್ಲಿ ಸೇರಿಸಿ ಅವರಿಗೆ ಅಲ್ಲಿ ಹೆಚ್ಚಿನ ಸೌಲಭ್ಯ ಪಡೆದುಕೊಳ್ಳುವುದಕ್ಕೆ ಅನುಕೂಲ ಮಾಡಿಕೊಟ್ಟಿದ್ದೇವೆ. ಈ ಕುಷ್ಟರೋಗಿಗಳಿಗಾಗಿ ಎಲ್ಲಾ ಆಸ್ಪತ್ರೆಗಳಲ್ಲೂ ಸಾಮಾನ್ಯವಾಗಿ ಇದಕ್ಕಾಗಿ ಪ್ರತ್ಯೇಕವಾಗಿ ಹಾಸಿಗೆಗಳನ್ನು ಮೀಸಲಾಗಿಟ್ಟಿದ್ದೇವೆ. ಎಲ್ಲಿ ಕಾರ್ಖಾನೆಗಳಲ್ಲಿ ಕೆಲಸ ಮಾಡತಕ್ಕ ಜನ ಇದ್ದಾರೆ, ಎಲ್ಲಿ ಈ ರೋಗ ಹೆಚ್ಚು ಉಲ್ಬಣವಾಗಿದೆ ಅಂಥಾ ಕಡೆ ಹೆಚ್ಚು ಆಸ್ಪತ್ರೆಗಳ ಅವಶ್ಯಕತೆ ಇದೆ. ಇರತಕ್ಕಂಥ ಆಸ್ಪತ್ರೆಗಳಲ್ಲಿ ಕೂಡ ಹಾಸಿಗೆಗಳನ್ನು ಹೆಚ್ಚು ಮಾಡುವುದು ಅವಶ್ಯಕವಿದೆ. ಆದರೆ ಹಣದ ತೊಂದರೆ ಇದೆ, ಅದಕ್ಕೆ ನಾವು ಭಾರತ ಸರ್ಕಾರದವರನ್ನೂ ಕೂಡ ಕೇಳಿದ್ದೇವೆ. ಆದರೂ ಅವರೂ ಕೂಡ ಎಲ್ಲಾ ಕಡೆಗೂ ಒಂದೇ ಸಾರಿ ಹಣವನ್ನು ಒದಗಿಸುವುದಕ್ಕಾಗುವುದಿಲ್ಲ. ಎಲ್ಲಿ ಹಣದ ಅವಶ್ಯಕತೆ ಅತ್ಯಂತ ಜರೂರಾಗಿದೆಯೋ ಅಂಥಾ ಕಡೆಗೆ ಅವರು ಒದಗಿಸುತ್ತಿದ್ದಾರೆ. ಅದೇ ರೀತಿ ನಾವು ಸಹ ಎಲ್ಲಿ ಅತ್ಯಂತ ಅವಶ್ಯಕವಾಗಿ ಹಾಸಿಗೆಗಳ ಸಂಖ್ಯೆ ಹೆಚ್ಚು ಮಾಡಲಿಕ್ಕೆ ಬೇಕಾಗಿದೆಯೋ ಅಂಥಾ ಕಡೆಗಳಲ್ಲಿ ಮಾಡುವುದಕ್ಕೆ ಪ್ರಯತ್ನ ಮಾಡುತ್ತಿದ್ದೇವೆ.

ಮೊನ್ನೆ ತಾನೇ ನಾನು ಕೋಲಾರ ಜಿಲ್ಲೆಗೆ ಹೋಗಿದ್ದೆ; ಅಲ್ಲಿ ಕೂಡ ಟಿ.ಬಿ. ಸ್ಯಾನಿಟೋರಿಯಂ ಇದೆ; ಅದು ಚೆನ್ನಾಗಿ ಕೆಲಸ ಮಾಡುತ್ತಿದೆ. ಅದನ್ನು ನೋಡಿ ನನಗೆ ತುಂಬಾ ಸಂತೋಷವಾಯಿತು. ಕೋಲಾರ ಜಿಲ್ಲಾ ಆಸ್ಪತ್ರೆ ಮತ್ತು ಕೋಲಾರ ಟಿ.ಬಿ. ಸೆಂಟರ್. ಎರಡೂ ಕೂಡ ಉತ್ತಮವಾದ ಸೇವೆ ಮಾಡುತ್ತಿವೆ. ಅಲ್ಲಿ ಪ್ರತ್ಯೇಕವಾಗಿ ಸಾರ್ವಜನಿಕರನ್ನು, ಬಡವರನ್ನು ಭೇಟಿ ಮಾಡಿ ಕೇಳಿದೆ; ಅವರೂ ಕೂಡ, ಆಸ್ಪತ್ರೆಗಳು ಚೆನ್ನಾಗಿ ಕೆಲಸ ಮಾಡುತ್ತಿದೆ ಎಂದೂ, ಅಲ್ಲಿನ ವೈದ್ಯರುಗಳಲ್ಲಿ ಹೊಂದಾಣಿಕೆ ಇದೆ ಎಂದೂ ಹಾಗೂ ಎಲ್ಲ ಔಷಧಿಗಳೂ ಬಡವರಿಗೆ ಹೋಗುತ್ತಿವೆ ಎಂದು ಎಲ್ಲರೂ ಮೆಚ್ಚಿಗೆಯ ಮಾತುಗಳನ್ನು ಆಡಿದ್ದನ್ನು ಕೇಳಿ ನನಗೆ ಬಹಳ ಸಂತೋಷವಾಯಿತು. ಆ ಮೆಚ್ಚಿಗೆಯನ್ನು ತಮ್ಮ ಮೂಲಕ ಮಾನ್ಯ ಸದಸ್ಯರುಗಳೆಲ್ಲರಿಗೂ ತಿಳಿಸಬಯಸುತ್ತೇನೆ ಅದೇ ರೀತಿ ಎಲ್ಲ ಆಸ್ಪತ್ರೆಗಳು ಕೆಲಸ ಮಾಡಿದರೆ ವೈದ್ಯಕೀಯ ವೃಂದವನ್ನು ದೇವರು ಎಂದು ತಿಳಿದುಕೊಳ್ಳುತ್ತಾರೆ. ಆ ಸಂದರ್ಭದಲ್ಲಿ, ಶಾಸಕರೂ ಕೂಡ ನನ್ನ ಜೊತೆಯಲ್ಲಿದ್ದರು; ಅವರು ಹೇಳಿದರು, ಆ ಆಸ್ಪತ್ರೆ ಇನ್ನೂ ಹೆಚ್ಚಿನ ಹಾಸಿಗೆಗಳನ್ನು ಹೊಂದಬೇಕು ಎಂದು. ಸಾಮಾನ್ಯವಾಗಿ ಎಲ್ಲ ಜಿಲ್ಲಾ ಆಸ್ಪತ್ರೆಗಳಲ್ಲೂ ೨೫೦ ಹಾಸಿಗೆಗಳನ್ನು ಇರಬೇಕೆಂದು ಅಷ್ಟನ್ನು ಈಗಾಗಲೇ ಎಲ್ಲ ಕಡೆಗೂ ಒದಗಿಸಲಾಗಿದೆ. ಆದರೂ ಕೂಡ ಕೋಲಾರದ ಆಸ್ಪತ್ರೆಗೆ ಇನ್ನೂ ಹೆಚ್ಚು ಹಾಸಿಗೆಗಳನ್ನು ಒದಗಿಸಬೇಕೆಂದು ಹೇಳುತ್ತಿದ್ದಾರೆ ಮತ್ತು ಹೊರ ರೋಗಿಗಳ ಬ್ಲಾಕ್ ಒಂದು ಬೇಕೆಂದು ಹೇಳುತ್ತಾರೆ. ಸಹಾಯ ಮಾಡಬೇಕೆಂದೇನೋ ಅನ್ನಿಸುತ್ತದೆ: ಆದರೆ ಹಣದ ಸೌಲಭ್ಯಕ್ಕನುಗುಣವಾಗಿ

ಹೆಚ್ಚಿನ ಸೌಲಭ್ಯವನ್ನು ಒದಗಿಸಬೇಕೆಂದು ಇಚ್ಛೆ. ಅದಕ್ಕೆ ಶಾಸಕರೂ ಸಹಕರಿಸಬೇಕು. ಏಕೆಂದರೆ, ಸಾರ್ವಜನಿಕರು ವಂತಿಗೆ ಕೊಡುವುದಾದರೆ ಸರ್ಕಾರಕ್ಕೆ ಸಲೀಸಾಗುತ್ತದೆ. ವಂತಿಗೆ ಬಂದರೆ ಅದಕ್ಕೆ ನಾವೂ ಕೂಡ ವಂತಿಗೆ ಕೊಡಬೇಕೆಂಬುದು ಸ್ವಾಭಾವಿಕ. ಆ ರೀತಿ ಸಹಕರಿಸಬೇಕೆಂದು ಹೇಳುತ್ತೇನೆ. ಅಲ್ಲಿಗೆ ಸಹಾಯ ಮಾಡಬೇಕೆಂದು ಮನಸ್ಸಿದೆ ಮತ್ತು ತುಂಬ ಸಹಾನುಭೂತಿ ಇದೆ. ಒಟ್ಟಿನಲ್ಲಿ, ಅಲ್ಲಿಗೆ ಏನೇನು ಸೌಲಭ್ಯಗಳು ಬೇಕೋ ಅವೆಲ್ಲವನ್ನು ಒದಗಿಸುವುದಕ್ಕೆ ಪ್ರಯತ್ನಿಸುತ್ತೇನೆಂದು ಹೇಳಬಯಸುತ್ತೇನೆ.

೧೦-೩೦ ಎ.ಎಂ.

ಇನ್ನು ಲೆಪ್ರಸಿ ಕಂಟ್ರೋಲ್ ವಿಷಯದಲ್ಲಿ ಹೇಳುವುದಾದರೆ, ನಮ್ಮಲ್ಲಿರತಕ್ಕ ೧೯ ಜಿಲ್ಲೆಗಳ ಪೈಕಿ ೧೪ರಲ್ಲಿ ಈ ರೋಗ ಉಲ್ಬಣವಾಗಿದೆ. ಸಾಮಾನ್ಯವಾಗಿ ಅಂಕಿ ಅಂಶಗಳನ್ನು ತೆಗೆದುಕೊಂಡಾಗ ೧೦೦೦ಕ್ಕೆ ೬ರಂತೆ ಈ ಕಾಯಿಲೆ ಜನಗಳಲ್ಲಿ ಇರುವುದು ಕಂಡುಬಂದಿದೆ. ಭಾರತ ಸರ್ಕಾರದವರು, ನಿಯಮಕ್ಕನುಸಾರವಾಗಿ ಕನಿಷ್ಟ ಪಕ್ಷ ೨ ಸಾವಿರದ ಇಸವಿಯೊಳಗೆ ಈ ರೋಗವನ್ನು ಸಂಪೂರ್ಣವಾಗಿ ನಿರ್ಮೂಲ ಮಾಡಬೇಕೆಂಬ ಉದ್ದೇಶವನ್ನು ಇಟ್ಟುಕೊಂಡಿದ್ದಾರೆ. ಅದೇ ರೀತಿ ನಮ್ಮ ರಾಜ್ಯದಲ್ಲೂ ಕೂಡ ಈ ಇಲಾಖೆ ಸಂಪೂರ್ಣ ದಕ್ಷತೆಯಿಂದ ಕೆಲಸ ಮಾಡುತ್ತಿದೆ. ನಮ್ಮಲ್ಲಿ ೨೧ ಲೆಪ್ರಸಿ ಕಂಟ್ರೋಲ್ ಸೆಂಟರ್ಸ್, ೬೧೫ ಸರ್ವೆ ಎಜುಕೇಷನ್ ಮತ್ತು ಟ್ರೀಟ್‌ಮೆಂಟ್ ಸೆಂಟರ್ಸ್, ೪೦ ಅರ್ಬನ್ ಸೆಂಟರ್ಸ್, ೪ ಲೆಪ್ರಸಿ ಟ್ರೈನಿಂಗ್ ಸೆಂಟರ್ಸ್ ೯ ರೀ ಕನ್‌ಸ್ಟ್ರಕ್ಷನ್ ಸರ್ವೆ ಯೂನಿಟ್ಸ್ ಜೊತೆಗೆ ಡಿಸ್ಟ್ರಿಕ್ಟ್ ಲೆಪ್ರಸಿ ಆಫೀಸರ್ಸ್ ಕೆಲಸ ಮಾಡುತ್ತಿವೆ. ಅವೆಲ್ಲವೂ ದಕ್ಷತೆಯಿಂದ ಕೆಲಸ ಮಾಡಿ ಇವತ್ತಿನ ದಿವಸ ರೋಗ ಹರಡದಂತೆ ನೋಡಿಕೊಳ್ಳುತ್ತಿವೆ. ಇರತಕ್ಕ ರೋಗಸ್ಥರಿಗೆ ಹೆಚ್ಚು ಸೌಕರ್ಯವನ್ನು ಒದಗಿಸಬೇಕೆಂದು ಕೆಲಸ ಮಾಡುವುದಕ್ಕೆ ಇಲಾಖೆ ದಕ್ಷತೆಯಿಂದ ಕೆಲಸ ಮಾಡುವುದರ ಜೊತೆಗೆ ಭಾರತ ಸರ್ಕಾರದವರು ಕೊಡತಕ್ಕ ವಂತಿಗೆಯನು ಹಾಗೂ ಸೌಕರ್ಯವನ್ನು ಉಪಯೋಗಿಸಿಕೊಂಡು ಕೆಲಸ ಮಾಡಲಿಕ್ಕೆ ಪ್ರಯತ್ನ ಮಾಡುತ್ತಿದ್ದೇವೆ.

ಇನ್ನು ವಿಕ್ಟೋರಿಯ ಆಸ್ಪತ್ರೆಯ ಬಗ್ಗೆ ಮಾನ್ಯ ಆರ್ಮುಗಂ ಅವರು ಅನೇಕ ವಿಷಯಗಳನ್ನು ಪ್ರಸ್ತಾಪ ಮಾಡಿದ್ದಾರೆ. ಇದು ಬಹಳ ಹಳೆಯ ಆಸ್ಪತ್ರೆ; ಮತ್ತು ಪ್ರಖ್ಯಾತವಾದ ಆಸ್ಪತ್ರೆಯೂ ಹೌದು. ಅಲ್ಲಿ ೭೭೫ ಒಳ ರೋಗಿಗಳ ಹಾಸಿಗೆಗಳಿವೆ. ಸಾಮಾನ್ಯವಾಗಿ ಬೆಂಗಳೂರಿನಲ್ಲಿ, ಇದರ ಜೊತೆಗೆ ವಾಣಿವಿಲಾಸ ಆಸ್ಪತ್ರೆಯಲ್ಲಿ ೬೦೫ ಹಾಸಿಗೆಗಳೂ, ಮಿಂಟೋ ಆಸ್ಪತ್ರೆಯಲ್ಲಿ ೨೬೫ ಹಾಸಿಗೆಗಳೂ ಎಸ್. ಡಿ. ಎಸ್. ಸ್ಯಾನಿಟೋರಿಯಂನಲ್ಲಿ ೪೭೦ ಹಾಸಿಗೆಗಳೂ ಹಾಗೂ ಇನ್ನೂ ಇತರೆ ಆಸ್ಪತ್ರೆಗಳಲ್ಲಿ ೫೯೦ ಹಾಸಿಗೆಗಳು ಇವೆ. ಮಾನ್ಯ ಆರ್ಮುಗಂರವರು ಹೇಳಿದ್ದು, ವಿಕ್ಟೋರಿಯ ಆಸ್ಪತ್ರೆಯ ವಾತಾವರಣ ಸರಿಯಾಗಿಲ್ಲ: ಅಲ್ಲಿ ವಾಹನಗಳಿಂದ ಆಗತಕ್ಕ ತೊಂದರೆಯನ್ನು ತಪ್ಪಿಸಬೇಕು ಎಂದು. ಅಲ್ಲಿ ಸುತ್ತಮುತ್ತ ರಸ್ತೆಗಳಿದ್ದು ವಿಪರೀತ ವಾಹನಗಳ ಸಂಚಾರದಿಂದಾಗಿ ತೊಂದರೆಗಳಿವೆ. ಆಟೋರಿಕ್ಷಾದಲ್ಲಿ, ಕಾರಿನಲ್ಲಿ ಹೋಗತಕ್ಕ ಜನಗಳಿಗೆ ಏನಾದರೂ ಅಪಘಾತ ಸಂಭವಿಸಿ ತೊಂದರೆಯಾದವರು ಅಲ್ಲಿನ ಎಮರ್ಜನ್ಸಿ ವಾರ್ಡಿಗೆ ಹೋಗಬೇಕೆಂಬುದು ಸ್ವಾಭಾವಿಕ. ಹಾಗಿರುವಾಗ, ಈಗ ಒಂದು ಯೋಜನೆಯನ್ನು ಸರ್ಕಾರ ಪರಿಶೀಲಿಸುತ್ತಿದೆ. ಒಂದು ದೊಡ್ಡ ಬಡಾವಣೆಯಲ್ಲಿ ಈ ಒಂದು ಆಸ್ಪತ್ರೆಯ ಸೌಕರ್ಯವನ್ನು ಏರ್ಪಡಿಸಿ ಅನೇಕ ಇಲಾಖೆಗಳನ್ನು ಅಲ್ಲಿಗೆ ವರ್ಗಾಯಿಸುವುದಾದರೆ, ನಿಜವಾಗಿ ಹೆಚ್ಚಿನ ಸೌಕರ್ಯವನ್ನು ಒದಗಿಸುವುದಕ್ಕೆ ಅನುಕೂಲವಾಗುತ್ತದೆಂಬುದು ಸರ್ಕಾರದ ಯೋಜನೆಯಲ್ಲಿದೆ. ಇದಕ್ಕಾಗಿ ೪ ಕೋಟಿ ರೂಪಾಯಿಗಳ ಒಂದು ಮಾಸ್ಟರ್ ಪ್ಲಾನ್ ತಯಾರಾಗಿದೆ. ಅದಕ್ಕೆ ಹಣವನ್ನು ಒದಗಿಸಬೇಕೆಂಬುದು ಕೂಡ ಸರ್ಕಾರದ ಪರಿಶೀಲನೆಯಲ್ಲಿದೆ. ಈ ಮಧ್ಯೆ ಹಣದ ಸೌಲಭ್ಯ ಯಾವ ರೀತಿ ಇದೆ ಎಂಬುದನ್ನು ಯೋಚಿಸಬೇಕಾಗಿದೆ. ಗ್ರಾಮಾಂತರ ಪ್ರದೇಶಗಳಲ್ಲಿ ಹೆಚ್ಚು ಹೆಚ್ಚು ಆಸ್ಪತ್ರೆಗಳನ್ನು ತೆರೆಯುತ್ತಾ ಇರತಕ್ಕ ಕಾಲದಲ್ಲಿ ಇಲ್ಲಿ ತೆರೆಯತಕ್ಕ ಆಸ್ಪತ್ರೆಗೆ ಅಗತ್ಯ ಇರುವಷ್ಟು ಹಣವನ್ನು ಸಾರ್ವಜನಿಕರು ವಂತಿಗ ರೂಪದಲ್ಲಿ ಒದಗಿಸುವುದಾದರೆ ಬಹಳ ಸಂತೋಷ. ಈ ಒಂದು ಕಾರ್ಯ ಆದಷ್ಟು ಬೇಗ ಆದರೆ ಬಹಳ ಒಳ್ಳೆಯದು. ಈ ಒಂದು ಮಾಸ್ಟರ್ ಪ್ಲಾನ್ ಕಾರ್ಯಗತವಾಗಬೇಕಾದರೆ ಸಾರ್ವಜನಿಕರ ಒಂದು ಉದಾರ ಕೊಡುಗೆ ಅತ್ಯಗತ್ಯ. ಅದಕ್ಕೆ ಬೆಂಗಳೂರಿನಲ್ಲಿ ಶ್ರೀಮಂತರಿಗೇನೂ ಕಡಿಮೆಯಿಲ್ಲ; ಬೇಕಾದಷ್ಟು ಮಂದಿ ದಾನಿಗಳು ಇದ್ದಾರೆ. ಅವರೆಲ್ಲ ಮುಂದೆ ಬಂದು ಕೊನೇ ಪಕ್ಷ ಅರ್ಧ ಭಾಗ ಹಣವನ್ನು ಒದಗಿಸಿದರೆ ಉಳಿದ ಹಣವನ್ನು ಸರ್ಕಾರ ಹಾಕಿ ಆದಷ್ಟು ಜಾಗ್ರತೆ ಈ ಒಂದು ಕಾರ್ಯವನ್ನು ಪೂರ್ಣಗೊಳಿಸುವುದಕ್ಕೆ ಸಾಧ್ಯವಾಗುತ್ತದೆ. ಬೆಂಗಳೂರಿನಂಥ ಕಲ್ಯಾಣ ನಗರದಲ್ಲಿರತಕ್ಕವರಲ್ಲಿ ಹಣ ಇದೆ ಮತ್ತು ಕೊಡತಕ್ಕ ಹೃದಯ ಕೂಡ ಇದೆ.

ಆದ್ದರಿಂದ, ಈ ಒಂದು ಕೆಲಸ ಯಶಸ್ವಿಯಾಗಲಿಕ್ಕೆ, ಸಾರ್ಥಕವಾಗಲಿಕ್ಕೆ ಕೊಡುಗೈ ದಾನಿಗಳು ಸಹಕರಿಸಬೇಕೆಂದು ಪ್ರಾರ್ಥಿಸಿಕೊಳ್ಳುತ್ತೇನೆ. ಎರಡನೆಯದಾಗಿ, ಎಕ್ಸರೇ ಫಿಲಮ್ಸ್ ವಿಷಯವಾಗಿ ಹೇಳಿದರು; ಇದು ಒದಗುತ್ತಿಲ್ಲವಾದ್ದರಿಂದ ಬಹಳ ತೊಂದರೆಯಾಗುತ್ತಿದೆ ಎಂದರು. ಕಳೆದ ೧೨ ತಿಂಗಳಲ್ಲಿ ಈ ತೊಂದರೆ ಇರಲಿಲ್ಲ, ಆದರೆ ಈಗ ಪ್ರಾರಂಭವಾಗಿದೆ. ಇದಕ್ಕೆ ಕಾರಣ ಇಷ್ಟೆ: ಹಣದ ಕೊರತೆ ಅಲ್ಲ; ಹಣವನ್ನು ದೊಡ್ಡ ದೊಡ್ಡ ಆಸ್ಪತ್ರೆಗಳಿಗೆ ಒದಗಿಸಿದ್ದೇವೆ; ಅಗತ್ಯ ಕಂಡಾಗ ಎಕ್ಸ್‌ರೇ ಫಿಲಂಗಳನ್ನು ಕೊಳ್ಳಲಿಕ್ಕೆ ಆಸ್ಪತ್ರೆಗಳಿಗೆ ಅಧಿಕಾರ ಇದೆ. ಆದರೆ ಎಕ್ಸ್‌ರೇ ಫಿಲಂ ಮ್ಯಾನ್ಯುಫ್ಯಾಕ್ಚರ್ ಮಾಡತಕ್ಕ ಇಂಡಸ್ಟ್ರಿ ಏನಿದೆ ಅದು ಮುಷ್ಕರಕ್ಕೆ ಒಳಪಟ್ಟು ಈಗ ಅಲ್ಲಿ ಉತ್ಪಾದನೆಯಾಗುತ್ತಿಲ್ಲವಾದ್ದರಿಂದ ಸರಬರಾಜು ಮಾಡುವುದಕ್ಕೆ ತೊಂದರೆಯಾಗಿದೆ ಎಂದು, ನಾನು ವಿಚಾರಿಸಿದಾಗ ತಿಳಿದು ಬಂತು. ಆದರೂ ಕೂಡ, ಇತ್ತೀಚಿನ ದಿನಗಳಲ್ಲಿ ಬೇರೆ ಕಡೆಯಿಂದ ತರಿಸಿ ಸರಬರಾಜು ಮಾಡುವುದಕ್ಕೆ ಒಪ್ಪಿಕೊಂಡಿದ್ದಾರೆಂದು ಕೇಳಿದ್ದೇನೆ. ಈ ಒಂದು ಎಕ್ಸ್‌ರೇ ಫಿಲಂಗಳ ಕೊರತೆಯನ್ನು ಆದಷ್ಟು ಬೇಗ ಹೋಗಲಾಡಿಸುವುದಕ್ಕೆ ಪ್ರಯತ್ನಿಸುತ್ತೇನೆ ಹಣದ ಕೊರತೆಯಿಂದ ಮಾತ್ರ ಇದು ನಿಂತಿಲ್ಲವೆಂದು ಸ್ಪಷ್ಟಪಡಿಸುತ್ತೇವೆ.

ಇನ್ನು ಮೆಡಿಕಲ್ ಎಜುಕೇಷನ್ ಬಗ್ಗೆ ಹೇಳುವುದಾದರೆ, ಇದಕ್ಕೆ ಇನ್ನೂ ದಕ್ಷತೆಯನ್ನು ಹೆಚ್ಚಿಸಬೇಕು. ಇವತ್ತಿನ ದಿವಸ ಸರ್ಕಾರ ೪ ಮೆಡಿಕಲ್ ಕಾಲೇಜುಗಳನ್ನು ನಡೆಸುತ್ತಿದೆ, ಮತ್ತು ಖಾಸಗಿಯವರು ೫ ಮೆಡಿಕಲ್ ಕಾಲೇಜುಗಳನ್ನು ನಡೆಸುತ್ತಿದ್ದಾರೆ. ಸರ್ಕಾರಿ ಕಾಲೇಜುಗಳಲ್ಲಿ ೩೫೩ ವಿದ್ಯಾರ್ಥಿಗಳಿಗೆ ಪ್ರವೇಶಾವಕಾಶ ಇದೆ; ಖಾಸಗೀ ಕಾಲೇಜುಗಳಲ್ಲಿ ೫೩೫ ವಿದ್ಯಾರ್ಥಿಗಳಿಗೆ ಇದೆ. ಪೋಸ್ಟ್ ಗ್ರಾಜುಯೇಟ್ ಕೋರ್ಸ್‌ನಲ್ಲಿ ೩೯೦ ವಿದ್ಯಾರ್ಥಿಗಳಿಗೆ ಅವಕಾಶ ಕಲ್ಪಿಸಿ ಕೊಟ್ಟಿದ್ದೇವೆ. ಖಾಸಗೀ ಕಾಲೇಜುಗಳಲ್ಲಿರತಕ್ಕ ಸೀಟುಗಳಲ್ಲಿ ೨೦೨ ಸೀಟುಗಳನ್ನು ಪ್ಯೂರ್ಲಿ ಮೆರಿಟ್ ಮೇಲೆ ಕರ್ನಾಟಕದವರಿಗೆ ಕಳೆದ ವರ್ಷ ಒದಗಿಸಿಕೊಡಲಾಗಿದೆಯೆಂಬುದು ಹೆಮ್ಮೆಯ ಮಾತು. ಈ ಎಲ್ಲ ಕಾಲೇಜುಗಳನ್ನು ರಾಷ್ಟ್ರೀಕರಣ ಮಾಡಬೇಕೆಂಬ ಮಾತನ್ನು ನಾನು ಒಪ್ಪುತ್ತೇನೆ. ಆದರೆ ಕಾರ್ಯಗತ ಮಾಡತಕ್ಕ ಕಾಲದಲ್ಲಿ ಅನೇಕ ವಿಷಯಗಳನ್ನು ಪರಿಶೀಲಿಸಬೇಕಾಗುತ್ತದೆ; ಕಾಂಪನ್‌ಸೇಷನ್ ಕೊಡಬೇಕಾಗಿ ಬಂದ ಕಾಲದಲ್ಲಿ ಏಕಗಂಟಿನಲ್ಲಿ ಕೊಡುವುದು ಸರ್ಕಾರಕ್ಕೆ ಕಷ್ಟವಾಗಬಹುದು. ಇದೂ ಅಲ್ಲದೆ, ಪ್ರತಿಯೊಂದು ಕಾಲೇಜನ್ನು ನಡೆಸಬೇಕಾದರೆ ಸುಮಾರು ೩೦–೪೦ ಲಕ್ಷ ರೂಪಾಯಿಯಾದರೂ ಬೇಕು. ಇವೆಲ್ಲವನ್ನು ನಾವು ಗಮನದಲ್ಲಿಟ್ಟುಕೊಂಡು ರಾಷ್ಟ್ರೀಕರಣ ಮಾಡತಕ್ಕ ಪಾಲಿಸಿಯನ್ನು ಯೋಚನೆ ಮಾಡಬೇಕಾಗಿದೆ. ಆದ್ದರಿಂದ, ಆ ಬಗ್ಗೆ ಹಂತಹಂತವಾಗಿ ಯೋಚಿಸೋಣ, ಒಂದೇ ಸಾರಿ ಮಾಡುತ್ತೇವೆಂದು ಹೇಳುವುದಕ್ಕೆ ಅಷ್ಟು ಸಾಮರ್ಥ್ಯ ಇಲ್ಲ. ಇದಕ್ಕೆ ಕಾರಣ ಏನೆಂದರೆ ೧೯೭೬ರಲ್ಲಿ ಹಿಂದಿನ ಮಾನ್ಯ ಆರೋಗ್ಯ ಮಂತ್ರಿಗಳು ಈ ಬಗ್ಗೆ ಒಂದು ಪಾಲಿಸಿ ಸ್ಟೇಟ್‌ಮೆಂಟ್ ಮಾಡಿದ್ದಾರೆ. ಅವರು ಹೇಳಿರುವುದು, ಹಂತಹಂತವಾಗಿ ಈ ಕಾಲೇಜುಗಳ ಮೇಲೆ ಹಿಡಿತ ಇಟ್ಟುಕೊಂಡು ಕೊನೇ ಹಂತವಾಗಿ ತೆಗೆದುಕೊಳ್ಳತಕ್ಕ ಪ್ರಯತ್ನ ಮಾಡುತ್ತೇವೆಂದು ಹೇಳಿದ್ದಾರೆ. ಅದೇ ರೀತಿ, ಈಗಲೂ ಕೂಡ ಕರ್ನಾಟಕದವರಿಗೆ ಹೆಚ್ಚು ಪ್ರಯೋಜನವಾಗುವ ರೀತಿಯಲ್ಲಿ ಕಾನೂನುಗಳನ್ನು ಸಡಿಲಿಸಿ ಸೀಟುಗಳನ್ನು ಒದಗಿಸಲಿಕ್ಕೆ ಪ್ರಯತ್ನಿಸುತ್ತೇವೆ. ಮೂರನೆಯದಾಗಿ, ಮೆಡಿಕಲ್ ಯೂನಿವರ್ಸಿಟಿಯನ್ನು ಸ್ಥಾಪಿಸಬೇಕೆಂದು ಹೇಳಿದ್ದಾರೆ. ಹಿಂದೆ ಕೂಡ ಈ ಬಗ್ಗೆ ಈ ಸದನದಲ್ಲಿ ಚರ್ಚೆಯಾಗಿ ಅಂಗೀಕಾರವಾಗಿತ್ತು. ಆದರೆ ಮೇಲ್ಮನೆಯಲ್ಲಿ ಆ ವಿಚಾರವನ್ನು ಮಂಡಿಸಲಿಲ್ಲವಾದ ಕಾರಣ ಅದು ಹಾಗೇ ಉಳಿದಿದೆ. ಅದಕ್ಕೆ ಇಂಡಿಯನ್ ಮೆಡಿಕಲ್ ಕೌನ್ಸಿಲ್‌ನವರು ವಿಶ್ವವಿದ್ಯಾನಿಲಯದವರು, ಭಾರತ ಸರ್ಕಾರದವರು, ಯು.ಜಿ.ಸಿ.ಯವರು ಹೀಗೆ ಇವರೆಲ್ಲರೂ ಕೂಡ ಆ ಕಾಲದಲ್ಲಿ ಒಪ್ಪಲಿಲ್ಲ. ಅದಕ್ಕೆ ಹಣದ ತೊಂದರೆ ಇರುವುದಲ್ಲದೆ ಇನ್ನಿತರ ತಾಂತ್ರಿಕ ಕಾರಣಗಳಿವೆ. ಆದ್ದರಿಂದ, ಈಗ ಅದು ಯಾವ ಘಟ್ಟವನ್ನು ತಲುಪಿಲ್ಲ. ಆದರೂ ಕೂಡ, ಈಗಲೂ ಆ ಬಗ್ಗೆ ಪ್ರಯತ್ನ ನಡೆಸಬಹುದು. ಬೇರೆ ರಾಜ್ಯಗಳಲ್ಲಿ ಕೂಡ ಎಲ್ಲಿ ಮೆಡಿಕಲ್ ಕಾಲೇಜುಗಳು ಜಾಸ್ತಿ ಇವೆ ಅಂಥಲ್ಲಿ ಮೆಡಿಕಲ್ ಯೂನಿವರ್ಸಿಟಿಯನ್ನು ಸ್ಥಾಪಿಸಬೇಕೆಂದು ಪ್ರಯತ್ನಿಸುತ್ತಿದ್ದಾರೆ. ನಾವೂ ಕೂಡ ಪ್ರಯತ್ನವನ್ನು ಕೈಬಿಟ್ಟಿಲ್ಲ, ಪ್ರಯತ್ನ ಮಾಡುತ್ತಿದ್ದೇವೆ. ಮೆಡಿಕಲ್ ಯೂನಿವರ್ಸಿಟಿ ಆದ ಕಾಲಕ್ಕೆ ನಿಜವಾಗಿಯೂ ಮೆಡಿಕಲ್ ಎಜುಕೇಷನ್ನಿನ ದಕ್ಷತೆ ಹೆಚ್ಚಿ ಇನ್ನೂ ಹೆಚ್ಚು ಹೆಚ್ಚಿನ ಸಮರ್ಥನೀಯ ಸೌಕರ್ಯವನ್ನು ನಮ್ಮ ರಾಜ್ಯದಲ್ಲಿ ಒದಗಿಸುವುದಕ್ಕೆ ಅನುಕೂಲವಾಗುತ್ತದೆಂದು ಹೇಳಬಯಸುತ್ತೇನೆ.

ನಮ್ಮ ಬೆಳಗಾಂ ಆಸ್ಪತ್ರೆಯ ಬಗ್ಗೆ ನಮ್ಮ ಮಾನ್ಯ ಸದಸ್ಯರಾದ ನಯೀಕ್ ಅವರು ಅನೇಕ ವಿಷಯಗಳನ್ನು ಪ್ರಸ್ತಾಪ ಮಾಡಿದರು. ಬೆಳಗಾಂ ಆಸ್ಪತ್ರೆಗೂ ನಾನು ಭೇಟಿ ಕೊಟ್ಟಿದ್ದೇನೆ. ಅಲ್ಲಿ ಅವಶ್ಯಕವಾಗಿ ವೈದ್ಯರ ಅಗತ್ಯತೆ ಏನಿತ್ತು ಅದನ್ನು ಆದಷ್ಟು ಪೂರೈಕೆ ಮಾಡಿದ್ದೇವೆ. ಅಲ್ಲಿಗೆ ನಾವು ಪ್ಯಾರಾ ಮೆಡಿಕಲ್ ಸ್ಟಾಫನ್ನು ಒದಗಿಸಿಕೊಟ್ಟಿದ್ದೇವೆ, ನೀರಿನ ಸೌಲಭ್ಯವನ್ನೂ ಒದಗಿಸಿದ್ದೇವೆ. ಈ ಒಂದು ಸರ್ಜಿಕಲ್ ಬ್ಲಾಕ್‌ನಲ್ಲಿ ಒಂದು ಎಕ್ಸ್ ರೇ ಯಂತ್ರ ೨೮-೧೦-೧೯೭೮ ರಿಂದ ೧೮-೧೦-೧೯೭೮ರ ವರೆಗೆ ಕೆಲಸ ಮಾಡಲಿಲ್ಲ. ಈ ಕಾರಣದಿಂದ ಇಡೀ ಸರ್ಜಿಕಲ್ ಬ್ಲಾಕನ್ನೇ ಕೆಲವು ದಿವಸ ಮುಚ್ಚಿದ್ದರು ಎಂದು ಒಂದು ಆಪಾದನೆ ಇದೆ. ಇದಕ್ಕೆ ಕಾರಣವೇನೆಂದರೆ ಒಬ್ಬ ರೋಗಿಗೆ ಟಿಟಾನಸ್ ಕಾಯಿಲೆ ಇದೆಯೋ ಎಂಬುದನ್ನು ಕಂಡುಹಿಡಿಯುವುದಕ್ಕಾಗಿ ಅದನ್ನು ಅಲ್ಲಿ ಇಟ್ಟುಕೊಂಡಿದ್ದರಲ್ಲದೇ, ಅದನ್ನು ಪರೀಕ್ಷೆ ಮಾಡುವುದಕ್ಕೋಸ್ಕರ ಕೆಲವು ದಿವಸ ಮುಚ್ಚಿದ್ದರೇ ಹೊರತು ಬೇರೆ ಇನ್ನಾವ ಕಾರಣದಿಂದಲೂ ಅಲ್ಲ. ಅದನ್ನು ಮುಚ್ಚಿದ್ದರೂ ಕೂಡ ಅಲ್ಲಿ ಬೇರೆ ಸೌಕರ್ಯಗಳು ಇತ್ತು. As a precautionary measure the closure of the operation theatres was inevitable. Three operation theatres were working even then but now all the four operation theatres are working at Belgaum Hospital. ಒಟ್ಟಿನಲ್ಲಿ ಹೇಳುವುದಾದರೆ ಈಗ ಬೆಳಗಾಂ ಆಸ್ಪತ್ರೆಗೆ ಏನೇನು ಸೌಕರ್ಯಗಳನ್ನು ಒದಗಿಸಬೇಕಾಗಿತ್ತೋ ಅವೆಲ್ಲಾ ಸೌಕರ್ಯಗಳನ್ನು ನಾವು ಒದಗಿಸಿದ್ದೇವೆ. ಬೆಳಗಾಂ ಕಾಲೇಜಿನಲ್ಲಿ ನಾವು ಒಂದು ಪಿ.ಜಿ. ಕೋರ್ಸನ್ನು ಪ್ರಾರಂಭ ಮಾಡಿದ್ದೇವೆ. ಆ ಭಾಗದ ಎಲ್ಲಾ ವೈದ್ಯಕೀಯ ವಿದ್ಯಾರ್ಥಿಗಳಿಗೆ ಅಲ್ಲಿ ಪ್ರವೇಶ ದೊರೆತು, ಅಲ್ಲಿ ಹೆಚ್ಚು ಜನ ಪರಿಣತರಾಗಿ ಹೊರಬಂದರೆ ಜನರಿಗೆ ಹೆಚ್ಚಿನ ವೈದ್ಯಕೀಯ ಸೌಲಭ್ಯಗಳನ್ನು ಒದಗಿಸುವುದಕ್ಕೆ ಅದರಿಂದ ಸಾಧ್ಯವಾಗುತ್ತದೆ. ಹೀಗೆ ನಾವು ಅಲ್ಲಿಗೆ ಎಲ್ಲಾ ವಿಧದ ಸೌಲಭ್ಯವನ್ನು ಒದಗಿಸಿದ್ದೇವೆ ಎಂದು ಹೇಳುವುದಕ್ಕೆ ಬಯಸುತ್ತೇನೆ.

ಇನ್ನು ಸಿ ಅಂಡ್ ಆರ್ ರೂಲ್ಸ್ ಬಗ್ಗೆ ಅನೇಕ ಮಾನ್ಯ ಸದಸ್ಯರುಗಳು ತಮ್ಮ ಅಮೂಲ್ಯವಾದ ಸಲಹೆಗಳನ್ನು ನೀಡಿದ್ದಾರೆ. ಈಗ ಸರ್ಕಾರದವರು ಬಹಳ ಕಾಲದಿಂದ ಫೈನಲೈಸ್ ಆಗದೇ ನಿಂತಿದ್ದಂಥ ಈ ಸಿ ಅಂಡ್ ಆರ್ ರೂಲ್ಸನ್ನು ಫೈನಲೈಸ್ ಮಾಡುವುದಕ್ಕೆ ಪ್ರಯತ್ನ ಮಾಡುತ್ತಿದ್ದಾರೆ. ದೇಶೀಯ ವೈದ್ಯ ಪದ್ಧತಿಯ ಕಾಲೇಜುಗಳಲ್ಲಿ ಕೆಲಸಮಾಡತಕ್ಕಂಥ ಟೀಚಿಂಗ್ ಸ್ಟಾಫ್ ಏನಿದೆ ಅವರ ಬಗ್ಗೆಯೂ ಕೂಡ ನಾವು ಈಗಾಗಲೇ ಸಿ ಅಂಡ್ ಆರ್ ರೂಲ್ಸನ್ನು ಫೈನಲೈಸ್ ಮಾಡಿದ್ದೇವೆ. ಮತ್ತೆ ನಾನ್ ಟೀಚಿಂಗ್ ಕೇಡರ್‌ನಲ್ಲಿ ೬ ಇಲಾಖೆಗಳಲ್ಲಿ ಇವತ್ತು ಸಿ ಅಂಡ್ ಆರ್ ರೂಲ್ಸನ್ನು ಫೈನಲೈಸ್ ಮಾಡಿದ್ದೇವೆ. ಇನ್ನುಳಿದ ಇಲಾಖೆಗಳಲ್ಲಿ ಯಾವ ಕೆಲಸವೂ ಆಗದೇ ನಿಂತಿದ್ದು, ಈ ರೂಲ್ಸನ್ನು ಫೈನಲೈಸ್ ಮಾಡಿದರೆ ಯಾರು ಯಾವ ಸ್ಥಾನದಲ್ಲಿ ಇರಬೇಕು ಎಂಬುದನ್ನು ತೀರ್ಮಾನ ಮಾಡುವುದಕ್ಕೆ ಸಾಧ್ಯವಾಗುತ್ತದೆ. ಈ ವಿಚಾರದಲ್ಲಿ ಸಿ ಅಂಡ್ ಆರ್ ರೂಲ್ಸನ್ನು ಫೈನಲೈಸ್ ಮಾಡುವುದಕ್ಕೆ ಪ್ರಯತ್ನ ನಡೆದಿದೆ. ಇನ್ನು ೩ ತಿಂಗಳಲ್ಲಿ ಈ ಒಂದು ಪ್ರಯತ್ನವನ್ನು ಯಶಸ್ವಿಯಾಗಿ ಮಾಡಿ ಮುಗಿಸುವುದಕ್ಕೆ ಸಾಧ್ಯವಾಗುತ್ತದೆ ಎಂದು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಪ್ರತಿ ಜಿಲ್ಲೆಯಲ್ಲಿ ಆರೋಗ್ಯ ವೈದ್ಯಾಧಿಕಾರಿಗಳು ಕಡಿಮೆ ಸಂಖ್ಯೆಯಲ್ಲಿ ಇರುವುದರಿಂದ ಅವರು ತಾಲ್ಲೂಕು ಮಟ್ಟದ ಆಸ್ಪತ್ರೆಗಳ ಮತ್ತು ಪಿ.ಎಚ್.ಸಿ.ಗಳ ಮಧ್ಯೆ ಕೆಲಸ ಮಾಡುವುದಕ್ಕೆ ಸಾಧ್ಯವಿಲ್ಲದಾಗಿದೆ. ಇದಕ್ಕಾಗಿ ಸಬ್‌ಡಿವಿಜನ್ ಮಟ್ಟದಲ್ಲಿ ೪೮ ಪೋಸ್ಟ್‌ಗಳನ್ನು ಕ್ರಿಯೇಟ್ ಮಾಡಿ, ಆ ಜಾಗಗಳಿಗೆ ಈಗಾಗಲೇ ಅವರನ್ನು ನೇಮಕ ಮಾಡಿದ್ದೇವೆ. ಅವರು ತಾಲ್ಲೂಕು ಮಟ್ಟದಲ್ಲಿ ಕೆಲಸ ಮಾಡುತ್ತಿದ್ದಾರೆ. ಹೀಗೆ ತಾಲ್ಲೂಕು ಮಟ್ಟದಲ್ಲಿರತಕ್ಕಂಥ ಆಸ್ಪತ್ರೆಗಳಿಗೂ ಮತ್ತು ಪಿ.ಎಚ್.ಸಿ.ಗಳಿಗೂ ಮಧ್ಯೆ ಇರತಕ್ಕಂಥ ಅವರು ಅಲ್ಲಿಗೆ ಏನೇನು ಸೌಕರ್ಯಗಳು ಬೇಕೋ ಆ ಸೌಕರ್ಯಗಳನ್ನೆಲ್ಲಾ ಒದಗಿಸುತ್ತಿದ್ದಾರೆ, ಮತ್ತು ಅಲ್ಲಿ ಅವರು ವೈದ್ಯರ ಅಭಾವವನ್ನು ತಪ್ಪಿಸುವುದಾಗಲೀ, ಔಷಧಗಳ ಸರಬರಾಜು ಹಾಗೂ ಇನ್ನಿತರ ಮೇಲ್ವಿಚಾರಣೆ ಇವೆಲ್ಲವುಗಳಲ್ಲಿ ಪಾಲ್ಗೊಂಡು ಈಗಾಗಲೇ ಕೆಲಸ ಮಾಡುತ್ತಿದ್ದಾರೆ. ಇನ್ನು ಕುಮಾರಿ ಪ್ರಮೀಳಾರವರು ಈ ಬಗ್ಗೆ ಅನೇಕ ವಿಚಾರಗಳನ್ನು ಪ್ರಸ್ತಾಪ ಮಾಡಿದರು. ಬೆಂಗಳೂರಿನ ಡೆಂಟಲ್ ಕಾಲೇಜುಗಳಲ್ಲಿ, ಡೆಂಟಲ್ ಹಾಸ್ಪಿಟಲ್‌ಗಳಲ್ಲಿ ಕೆಲವು ಸೌಕರ್ಯಗಳು ಕಡಿಮೆಯಾಗಿವೆ ಎಂದು ಹೇಳಿದರು. ಇವತ್ತಿನ ದಿವಸ ಯಾರಾದರೂ ಸಂತೋಷವಾಗುತ್ತದೆ, ಬೆಂಗಳೂರಿನಲ್ಲಿನ ಡೆಂಟಲ್ ಕಾಲೇಜು, ಡೆಂಟಲ್ ಹಾಸ್ಪಿಟಲ್‌ಗಳು ಉನ್ನತ ಮಟ್ಟದಲ್ಲಿ ಕೆಲಸ ಮಾಡುತ್ತಿವೆ, ಅವು ಆಲ್ ಇಂಡಿಯಾ ಖ್ಯಾತಿಯನ್ನು ಪಡೆದಿವೆ ಎಂದು ಹೇಳಿದರೂ ತಪ್ಪಿಲ್ಲ. ಅವರೂ ಅಲ್ಲಿ ಯಾರಾದರು ವೈದ್ಯರು ಅದಕ್ಷತೆಯಿಂದ, ಅಜಾಗರೂಕತೆಯಿಂದ ಕೆಲಸ ಮಾಡಿದ್ದರೆ

ಅದನ್ನು ಕೂಡಲೇ ಸರ್ಕಾರದ ಗಮನಕ್ಕೆ ತಂದರೆ ಅದನ್ನು ವಿಚಾರಮಾಡಿ ಸೂಕ್ತ ಕ್ರಮ ಕೈಕೊಳ್ಳುವುದಕ್ಕೆ ಸರ್ಕಾರಕ್ಕೆ ಸಹಾಯಕವಾಗುತ್ತದೆ ಎಂದು ಹೇಳಬಯಸುತ್ತೇನೆ. ಕುಮಾರಿ ಪ್ರಮೀಳಾರವರು ಇನ್ನೊಂದು ವಿಚಾರವನ್ನು ಹೇಳಿದರು, ಏನೆಂದರೆ ಅಲ್ಲಿ ಎಲ್ಲರಿಗೂ ಹೆಲ್ತ್ ಚೆಕ್-ಅಪ್ ಆಗಬೇಕು ಎಂದು. ಅದು ಬಹಳ ಒಳ್ಳೆಯ ಸಲಹೆ. ಅದನ್ನು ವಿಚಾರಮಾಡೋಣ ಅದಲ್ಲದೇ ಅವರು ಅಲ್ಲಿ ಹೆಲ್ತ್ ಇನ್‌ಷ್ಯೂರೆನ್ಸ್ ಸ್ಕೀಮನ್ನು ಜಾರಿಗೆ ಕೊಡಬೇಕು ಎಂದು ಹೇಳಿದ್ದಾರೆ. ಅದರೂ ಸಹ ಒಳ್ಳೆಯ ಸಲಹೆಯಾಗಿದೆ. ಇದನ್ನು ಕಾರ್ಯರೂಪಕ್ಕೆ ತರಬೇಕಾದರೆ ಎಷ್ಟು ಹಣ ಬೇಕಾಗುತ್ತದೆ ಎಂಬುದನ್ನು ತಾವು ಯೋಚನೆ ಮಾಡಬೇಕಾಗಿದೆ. ಇವೆಲ್ಲವನ್ನೂ ನಾವು ತೀವ್ರವಾಗಿ ಪರಿಶೀಲನೆ ಮಾಡಿ ಯೋಗ್ಯ ಕಾರ್ಯಕ್ರಮವನ್ನು ತೆಗೆದುಕೊಳ್ಳುತ್ತೇವೆಂದು ನಾನು ಅವರಿಗೆ ಹೇಳುತ್ತೇನೆ. ಇದು ಅಲ್ಲದೇ ಅವರು ಮಾತನಾಡತಕ್ಕಂಥ ಕಾಲದಲ್ಲಿ ಕ್ಯಾನ್ಸರ್ ಆಸ್ಪತ್ರೆಗಳಿಗೆ ಲೇಡಿ ಗೈನಕಾಲಾಜಿಸ್ಟರನ್ನು ಹಾಕುವಂಥ ಅವಶ್ಯಕತೆ ಇಲ್ಲ ಎಂದು ಹೇಳಿದ್ದಾರೆ. ನನಗೆ ತಿಳಿದ ಮಟ್ಟಿಗೆ ಅಲ್ಲಿ ಅವರ ಅವಶ್ಯಕತೆ ಇದೆ. ಏಕೆಂದರೆ ಈ ಒಂದು ರೋಗ ಗಂಡಸರಿಗೇ ಬರತಕ್ಕಂಥಾದ್ದಲ್ಲ, ಹೆಂಗಸರಿಗೂ ಬರುತ್ತಿದೆ. ಈ ಒಂದು ಸಂದರ್ಭದಲ್ಲಿ ಅವರಿಗೆ ಚಿಕಿತ್ಸೆ ಮಾಡಲು ಮಹಿಳಾ ವೈದ್ಯರನ್ನು ಹಾಕಿದರೆ, ಅವರನ್ನು ಹಾಕುವುದು ಬೇಡ ಎಂದು ಹೇಳಿದರೆ ಇದು ನನಗೆ ಸಮಂಜಸವೆನಿಸುವುದಿಲ್ಲ. ಆದ್ದರಿಂದ ಅಲ್ಲಿರತಕ್ಕಂಥ ಮಹಿಳಾ ರೋಗಿಗಳಲ್ಲಿ ಕಂಡುಬಂದಿರತಕ್ಕಂಥ ಈ ಒಂದು ಬ್ರೆಸ್ಟ್ ಕ್ಯಾನ್ಸರ್‌ನ್ನು ಪರೀಕ್ಷೆ ಮಾಡಿ ಅವರಿಗೆ ಯೋಗ್ಯ ಚಿಕಿತ್ಸೆ ಮಾಡುವುದಕ್ಕೆ ಮಹಿಳಾ ವೈದ್ಯರನ್ನು ನಾವು ಒದಗಿಸಿದ್ದೇವೆ. ಇನ್ನು ನಮ್ಮ ರಾಜ್ಯದಲ್ಲಿ ಪ್ರೈವೇಟ್ ನರ್ಸಿಂಗ್ ಹೋಮ್‌ಗಳು ಜಾಸ್ತಿಯಾಗುತ್ತಿವೆ ಅಲ್ಲಿ ಡಾಕ್ಟರುಗಳು ಜನರಿಂದ ಹಣದ ಸುಲಿಗೆಯನ್ನು ಮಾಡುತ್ತಿದ್ದಾರೆ, ಇದನ್ನು ತಡೆಯಬೇಕು ಎಂದು ಅನೇಕ ಮಾನ್ಯ ಸದಸ್ಯರು ಹೇಳಿದ್ದಾರೆ. ಈಗ ಸ್ವಾಭಾವಿಕವಾಗಿ ನಮ್ಮ ರಾಜ್ಯದಲ್ಲಿ ಅವರ ಹಾವಳಿ ಕಡಿಮೆಯಾಗಿದೆ ಎಂದು ನಾನು ಕೇಳಿದ್ದೇನೆ. ಈ ವಿಚಾರದಲ್ಲಿ ನರ್ಸಿಂಗ್ ಹೋಮ್ ಆಕ್ಟ್ ಎಂದು ಇದೆ. ಇದನ್ನು ಜಾರಿಗೆ ಕೊಡತಕ್ಕಂಥ ಕಾಲದಲ್ಲಿ ಅನೇಕ ತೊಂದರೆಗಳು ಬಂದುದರಿಂದ ಈ ಬಗ್ಗೆ ಪರಿಶೀಲನೆ ಮಾಡಲು ಒಂದು ಸೆಲೆಕ್ಟ್ ಕಮಿಟಿಯನ್ನು ನೇಮಕ ಮಾಡಿ, ಈಗಾಗಲೇ ಆ ಕಮಿಟಿಯವರು ಒಂದು ರಿಪೋರ್ಟನ್ನು ಕೊಟ್ಟಿದ್ದಾರೆ. ಅದನ್ನು ಅಸೆಂಬ್ಲಿಯಲ್ಲಿ ಮಂಡಿಸಿ ಅದಕ್ಕೆ ಅಂಗೀಕಾರ ದೊರಕಿದ ಮೇಲೆ, ನರ್ಸಿಂಗ್‌ಹೋಮ್ ಆಕ್ಟ್ ಜಾರಿಗೆ ಬಂದಮೇಲೆ ಇವರ ಒಂದು ಹಾವಳಿ ತಪ್ಪಿ, ನರ್ಸಿಂಗ್‌ಹೋಮ್‌ಗಳಲ್ಲಿ ಏನು ಹಣದ ಸುಲಿಗೆಯಾಗುತ್ತಿದೆ ಎಂದು ಹೇಳುತ್ತಿದ್ದೀರಿ ಅದು ಕಡಿಮೆಯಾಗುತ್ತದೆ ಎಂದು ಹೇಳುವುದಕ್ಕೆ ಬಯಸುತ್ತೇನೆ. ಅನೇಕ ಮಾನ್ಯ ಸದಸ್ಯರು ನಮ್ಮಲ್ಲಿ ಗೆಸ್ಟ್ರೋ ಆಪರೇಷನ್‌ಗೆ ಬೇಕಾದಂಥ ಸೌಕರ್ಯಗಳು ಇಲ್ಲ, ಹೊರಗಡೆ ಹೋಗಿ ಅಪಾರ ಹಣ ಖರ್ಚು ಮಾಡುತ್ತಿದ್ದೇವೆ ಎಂಬುದಾಗಿ ಹೇಳಿದರು. ಈ ಸಂದರ್ಭದಲ್ಲಿ ನಾನು ಹೇಳುವುದೇನೆಂದರೆ ನಮ್ಮ ಮೇಜರ್ ಆಸ್ಪತ್ರೆಗಳಲ್ಲಿ ಅಂದರೆ ವಿಕ್ಟೋರಿಯಾ, ಲೇಡಿ ಕರ್ಜನ್ ಅಂಡ್ ಬೋರಿಂಗ್ ಹಾಸ್ಪಿಟಲ್‌ಗಳಲ್ಲಿ ಈ ಒಂದು ಸೌಕರ್ಯ ಇದೆ. ಯಾರಿಗಾದರೂ ಅಂತಹ ಖಾಯಿಲೆ ಇದ್ದರೆ ದಯವಿಟ್ಟು ಅವರಿಗೆ ಸೂಚನೆ ಕೊಟ್ಟು ಅಂತಹವರು ಆಸ್ಪತ್ರೆಗಳಿಗೆ ಹೋಗಿ ಚಿಕಿತ್ಸೆಯನ್ನು ಪಡೆದುಕೊಳ್ಳಲಿ ಎಂದು ಹೇಳಬಯಸುತ್ತೇನೆ. ಇನ್ನು ಶ್ರೀಮಾನ್ ನದಾಫ್‌ರವರು ಕೆ.ಎಂ.ಸಿ. ಆಸ್ಪತ್ರೆಯ ವಿಚಾರದಲ್ಲಿ ಅನೇಕ ವಿಷಯಗಳನ್ನು ಪ್ರಸ್ತಾಪ ಮಾಡಿದ್ದಾರೆ. ಅಲ್ಲಿ ಆಸ್ಪತ್ರೆಯಲ್ಲಿ ಅನೇಕ ಸೌಕರ್ಯಗಳು ಇಲ್ಲದೇ ಇರುವುದರಿಂದ ಜನಗಳಿಗೆ ಯಾವ ಅನುಕೂಲಗಳು ಸಿಕ್ಕುತ್ತಾ ಇಲ್ಲ ಎನ್ನತಕ್ಕಂಥ ಮಾತನ್ನು ಅವರು ಹೇಳಿದ್ದಾರೆ. ಅದನ್ನು ನಾನು ಒಪ್ಪುವುದಿಲ್ಲ. ನಾನು ಈ ಇಲಾಖೆಯನ್ನು ವಹಿಸಿಕೊಂಡಮೇಲೆ ೨-೩ ಸಲ ಅಲ್ಲಿಗೆ ಭೇಟಿ ಕೊಟ್ಟಿದ್ದೇನೆ. ಅಲ್ಲಿ ಇರತಕ್ಕಂಥ ನೀರಿನ ಕೊರತೆಯನ್ನು ನಾವು ಈಗಾಗಲೇ ತಪ್ಪಿಸಿದ್ದೇವೆ; ಮತ್ತು ಇತರ ಸೌಕರ್ಯವನ್ನು ಕೊಟ್ಟಿದ್ದೇವೆ. ಇನ್ನು ಅಲ್ಲಿ ಕಾಲೇಜಿನಲ್ಲಿ ಅನೇಕ ಪೋಸ್ಟ್‌ಗಳು ಖಾಲಿ ಇದೆ ಎಂದು ಅವರು ಹೇಳಿದ್ದಾರೆ. ಈ ವಿಚಾರದಲ್ಲಿ ಅವರು ಬೆಂಗಳೂರು, ಮೈಸೂರು ಹುಬ್ಬಳ್ಳಿ ಮತ್ತು ಬಳ್ಳಾರಿಗಳಲ್ಲಿ ಮೆಡಿಕಲ್ ಕಾಲೇಜುಗಳು ಇವೆ ಎಂಬುದನ್ನು ಅವರು ಮರೆತಿದ್ದಾರೆ. ಈ ಬೆಂಗಳೂರು ಮತ್ತು ಮೈಸೂರು ಮೆಡಿಕಲ್ ಕಾಲೇಜುಗಳಲ್ಲಿ ಹೆಚ್ಚು ಜನರು ಕೆಲಸ ಮಾಡುತ್ತಿದ್ದಾರೆ. ಅಂತಹವರನ್ನು ಈ ಹುಬ್ಬಳ್ಳಿ ಮತ್ತು ಬಳ್ಳಾರಿ ಕಾಲೇಜುಗಳಿಗೆ ಕಳಿಸುವುದರಿಂದ ಅಲ್ಲಿ ಉತ್ತಮವಾದ ವೈದ್ಯಕೀಯ ಸೌಲಭ್ಯಗಳನ್ನು ಒದಗಿಸಿಕೊಡುವುದಕ್ಕೆ ಸಾಧ್ಯವಾಗುತ್ತದೆ. ಈ ವಿಚಾರದಲ್ಲಿ ಮಾನ್ಯ ಸದಸ್ಯರು ನಮ್ಮ ಜೊತೆಯಲ್ಲಿ ಸಹಕರಿಸಿದರೆ ಅವರನ್ನು ಒತ್ತಾಯ ಮಾಡಿ ಅಲ್ಲಿಗೆ ಕಳಿಸುವುದಕ್ಕೆ ಅನುಕೂಲವಾಗುತ್ತದೆ.

ಶ್ರೀ ಎಂ. ಎಂ. ನದಾಫ್.—ಅವರನ್ನು ಬೆಂಗಳೂರಿನಿಂದ ಹುಬ್ಬಳ್ಳಿಗೆ ಟ್ರಾನ್ಸ್‌ಫರ್ ಮಾಡುವುದಕ್ಕೆ ನಮ್ಮಿಂದ ಯಾವ ರೀತಿಯ ಸಹಕಾರ ಬೇಕು.

ಶ್ರೀ ಎಂ. ಮಲ್ಲಪ್ಪ.—ಇದರಲ್ಲಿ ನಿಮ್ಮ ಸಹಕಾರವೂ ಬೇಕಾಗುತ್ತದೆ. ಇವತ್ತಿನ ದಿವಸ ಬೇರೆ ಕಡೆಗಳಲ್ಲಿರತಕ್ಕಂಥ ಎಲ್ಲಾ ವೈದ್ಯರುಗಳೂ ಬೆಂಗಳೂರಿಗೆ ಟ್ರಾನ್ಸ್‌ಫರ್ ಮಾಡಿಕೊಡಿ ಎಂದು ಕೇಳುತ್ತಿದ್ದಾರೆ. ಅವರನ್ನು ಕೇಳಿ ಅಲ್ಲಿಗೆ ಕಳಿಸುವುದಕ್ಕೆ ಸಾಧ್ಯ ಇದೆ. ಆ ದೃಷ್ಟಿಯಿಂದ ನಾನು ಹೇಳಿದೆ. ಇನ್ನು ಅವರು ಅಲ್ಲಿ ಎಕ್ಸ್‌ರೇ ಯಂತ್ರಗಳು ಕೆಟ್ಟುಹೋಗಿವೆ. ಇದರ ಕಡೆಗೆ ಸರ್ಕಾರದವರು ನಿಗಾ ತೆಗೆದುಕೊಂಡಿಲ್ಲ ಎಂದು ಹೇಳಿದರು. ಅಲ್ಲಿ ೪ ಎಕ್ಸ್‌ರೇ ಯಂತ್ರಗಳು ಕೆಟ್ಟುಹೋಗಿ ಹಾಗೆಯೇ ಉಳಿದಿದ್ದವು. ಅವುಗಳನ್ನು ರಿಪೇರಿ ಮಾಡಿದಮೇಲೆ ಈಗ ಅವು ಚೆನ್ನಾಗಿ ಕೆಲಸಮಾಡುತ್ತಿವೆ. ಅಲ್ಲದೇ ಅಲ್ಲಿಗೆ ಇನ್ನೂ ೩ ಯಂತ್ರಗಳನ್ನು ಒದಗಿಸಿದ್ದೇವೆ. ಇನ್ನು ಮೆಡಿಕಲ್ ವಿದ್ಯಾರ್ಥಿಗಳಿಗೋಸ್ಕರ ಹಾಸ್ಟಲ್ ಬಿಲ್ಡಿಂಗನ್ನು ನಾವು ಕಂಪ್ಲೀಟ್ ಮಾಡುತ್ತಿದ್ದೇವೆ. ಅಲ್ಲಿಗೆ ಪರ್ಮನೆಂಟಾಗಿ ಒಬ್ಬರು ಪ್ರಿನ್ಸಿಪಾಲರನ್ನು ನಾವು ಈಗಾಗಲೇ ಹಾಕಿದ್ದೇವೆ. ಹೀಗೆ ಹಂತಹಂತವಾಗಿ ಇವೆಲ್ಲಾ ಸೌಕರ್ಯಗಳನ್ನೂ ನಾವು ಒದಗಿಸಿಕೊಡುತ್ತಿದ್ದೇವೆ, ಇದರಲ್ಲಿ ಈ ಕಾಲೇಜು ಇನ್ನೂ ಹೆಚ್ಚು ಸಮರ್ಥನೀಯವಾಗಿ ಕೆಲಸ ಮಾಡಬೇಕೆಂಬುದೇ ನನ್ನ ಆಸೆ. ಈ ಬಗ್ಗೆ ನಾವು ಎಲ್ಲಾ ಪ್ರಯತ್ನಗಳನ್ನೂ ಮಾಡುತ್ತಿದ್ದೇವೆ. ಬೆಂಗಳೂರು, ಮೈಸೂರು, ಹುಬ್ಬಳ್ಳಿ ಮತ್ತು ಬಳ್ಳಾರಿ ಕಾಲೇಜುಗಳಲ್ಲಿ ಇನ್ನೂ ಏನೇನು ಕೊರತೆಗಳು ಇವೆಯೆಂದು ಹೇಳುತ್ತಿದ್ದೀರೋ ಅವೆಲ್ಲಾ ಕೊರತೆಗಳನ್ನು ನೀಗುವುದಕ್ಕೆ ಇನ್ನು ೨–೩ ವರ್ಷಗಳಲ್ಲಿ ಸಾಧ್ಯವಾಗುತ್ತದೆ ಎಂಬುದನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಇನ್ನು ಮಾನ್ಯ ಸದಸ್ಯರೊಬ್ಬರು ಎಸ್.ಎನ್.ಆರ್. ಆಸ್ಪತ್ರೆಯ ಬಗ್ಗೆ ಹೇಳಿದ್ದಾರೆ. ಅಲ್ಲಿ ಈಗ ೨೫೦ ಹಾಸಿಗೆಗಳು ಇವೆ. ಇದು ಕಡಿಮೆ ಎಂದು ಅವರು ಹೇಳುತ್ತಿದ್ದಾರೆ. ಆದರೆ ನಾವು ಇದಕ್ಕೆ ಜಿಲ್ಲಾ ಮಟ್ಟದ ಆಸ್ಪತ್ರೆಗೆ ಏನು ಕೊಡುತ್ತೇವೆಯೋ ಅದನ್ನೇ ಕೊಟ್ಟಿದ್ದೇವೆ, ಅದನ್ನು ಇನ್ನೂ ಹೆಚ್ಚಿಸುವುದಕ್ಕೆ ಕಷ್ಟವಾಗುತ್ತದೆ. ಈ ಬಗ್ಗೆ ಮಾನ್ಯ ಸದಸ್ಯರು ಬಹಳ ಪ್ರಯತ್ನ ಮಾಡುತ್ತಿದ್ದಾರೆ. ಅವರ ಪ್ರಯತ್ನ ಫಲಕಾರಿಯಾಗಲಿ ಎಂದು ಆಶಿಸುತ್ತೇನೆ.

ಈಗ ಶಿವಮೊಗ್ಗದಲ್ಲಿ ಕ್ಯಾಸನೂರ್ ಫಾರೆಸ್ಟ್ ಡಿಸೀಸ್ ಹರಡುತ್ತಾ ಇದೆ. ಇದನ್ನು ತಡೆಗಟ್ಟುವುದಕ್ಕೆ ನಮ್ಮ ಇಲಾಖೆಯವರು ಪರಿಣಾಮಕಾರಿಯಾಗಿ ಕೆಲಸ ಮಾಡುತ್ತಿದ್ದಾರೆ. ಹೋದವರ್ಷ ಈ ರೋಗದ ಸಂಖ್ಯೆ ಎಷ್ಟಿತ್ತೋ ಅದು ಈಗ ಕಡಿಮೆಯಾಗಿದೆ, ಆದ್ದರಿಂದ ಇವತ್ತು ನಾವು ಈ ಬಗ್ಗೆ ಉತ್ತಮವಾದ ಮಾರ್ಗವನ್ನು ಅನುಸರಿಸಿದ್ದೇವೆ ಎಂಬುದನ್ನು ತಾವು ಒಪ್ಪಲೇಬೇಕು. ಸಾಗರದಲ್ಲಿ ೧.೪೦ ಸಾವಿರ ರೂಪಾಯಿಗಳ ವೆಚ್ಚದಲ್ಲಿ ಈ ಬಗ್ಗೆ ಒಂದು ವಾರ್ಡನ್ನು ಕಟ್ಟುವುದಕ್ಕೆ ಯೋಚನೆ ಮಾಡಿದ್ದೇವೆ. ಇದಕ್ಕೆ ಸರ್ಕಾರದ ಅಂಗೀಕಾರ ದೊರೆತಿದೆ. ಬಜೆಟ್‌ನಲ್ಲಿ ಸಹ ಈ ಕೆಲಸ ಸೇರಿದೆ. ಇದನ್ನು ನಾವು ಮಾಡಿಕೊಡುತ್ತೇವೆ. ಮಾನ್ಯ ಸದಸ್ಯರಾದ ಕಡಿದಾಳ್ ದಿವಾಕರ್‌ರವರು ಆಲಮಟ್ಟಿಯಲ್ಲಿ ಒಂದು ಕೆ.ಎಫ್.ಡಿ. ಯೂನಿಟ್ಟನ್ನು ಕಟ್ಟಿದ್ದಾರೆ. ಅದರ ಅವಶ್ಯಕತೆ ಇರಲಿಲ್ಲ ಎಂದು ಹೇಳಿದ್ದಾರೆ. ಅದನ್ನು ಹಿಂದೆ ಯಾವಾಗಲೋ ಕಟ್ಟಿದ್ದಾರೆ. ಇವತ್ತು ಅದರ ಅವಶ್ಯಕತೆ ಇದೆಯೆಂದು ಹೇಳಿದ್ದಾರೆ. ಇದರಿಂದ ಆ ಭಾಗದಲ್ಲಿ ಕ್ಯಾಸನೂರ್ ಫಾರೆಸ್ಟ್ ಡಿಸೀಸನ್ನು ಕಂಟ್ರೋಲ್ ಮಾಡುವುದಕ್ಕೆ ಅವಕಾಶವಾಗಿದೆ. ಇದರ ಬಗ್ಗೆ ನಾನು ಹೆಚ್ಚಿಗೆ ಹೇಳುವುದಿಲ್ಲ. ಒಟ್ಟಿನಲ್ಲಿ ಅಲ್ಲಿ ಅದರ ಅವಶ್ಯಕತೆ ಇರುವುದರಿಂದ ಸರ್ಕಾರ ಅದರ ಅಭಿವೃದ್ಧಿಯ ಬಗ್ಗೆ ಸೂಕ್ತ ಕಾರ್ಯಕ್ರಮವನ್ನು ತೆಗೆದುಕೊಳ್ಳುತ್ತದೆ ಎಂದು ಹೇಳಬಯಸುತ್ತೇನೆ,

ಇನ್ನು ಶಿವಮೊಗ್ಗದಲ್ಲಿ ಒಂದು ಫಾರ್ಮಸಿಯನ್ನು ಕಟ್ಟುವ ಬಗ್ಗೆ ನಾನು ಈಗಾಗಲೇ ಉತ್ತರ ಹೇಳಿದ್ದೇನೆ, ೧೯೭೪–೭೫ನೇ ಸಾಲಿಗೆ ೩ ಲಕ್ಷ ೭೦ ಸಾವಿರ ರೂ.ಗಳ ವೆಚ್ಚದಲ್ಲಿ ಒಂದು ಫಾರ್ಮಸಿಯನ್ನು ಪ್ರಾರಂಭ ಮಾಡಬೇಕು ಎನ್ನುವುದರ ಬಗ್ಗೆ ಸರ್ಕಾರ ಒಂದು ಕಾರ್ಯಕ್ರಮವನ್ನು ಹಾಕಿಕೊಂಡಿದೆ. ಅವರು ಇನ್ನೊಂದು ಮಾತನ್ನು ಹೇಳಿದ್ದಾರೆ. ಆರೋಗ್ಯ ಇಲಾಖೆಗೆ ತಾಂತ್ರಿಕ ಪರಿಜ್ಞಾನವುಳ್ಳವರನ್ನು ಕಮೀಷನರನ್ನಾಗಿ ನೇಮಿಸಬೇಕೆಂದು ಹೇಳಿದರು. ಒಂದು ವೇಳೆ ಹಾಗೆ ಮಾಡಿದ್ದಾದರೆ, ಮುಂದಕ್ಕೆ ಆರೋಗ್ಯ ಸಚಿವರೂ ಸಹ ತಾಂತ್ರಿಕ ಪರಿಜ್ಞಾನವುಳ್ಳವರೇ ಆಗಬೇಕೆಂದು ಕೇಳುವರೇನೋ. ಸರ್ಕಾರದ ಮಟ್ಟದಲ್ಲಿ ಆಡಳಿತ ತೀರ್ಮಾನವನ್ನು ತೆಗೆದುಕೊಳ್ಳುವವರು ಇವರು. ಆಡಳಿತ ಸಂಬಂಧವಾದ ಅಭಿಪ್ರಾಯಗಳನ್ನು ಕೊಡಲು ತಾಂತ್ರಿಕ ಪರಿಜ್ಞಾನವಿರುವವರೇ ಇರಬೇಕೆಂದೇನಿಲ್ಲ. ಅಲ್ಲದೆ, ಸಾಮಾನ್ಯವಾಗಿ ಎಲ್ಲ ಇಲಾಖೆಗಳಲ್ಲಿಯೂ ಆಡಳಿತ ಸಂಬಂಧವಾದ ತೀರ್ಮಾನ ತೆಗೆದುಕೊಳ್ಳುವುದಕ್ಕೆ ಕಮಿಷನರ್ ಇರುವ ಹಾಗೆ ನಮ್ಮ ಇಲಾಖೆಯಲ್ಲೂ ಇದ್ದಾರೆ. ಆದುದರಿಂದ, ಇದರ ಅವಶ್ಯಕತೆ ಇಲ್ಲವೆನ್ನುವುದು ನನ್ನ ಅಭಿಪ್ರಾಯ.

ಮಲ್ಲಾಡಹಳ್ಳಿಯ ಅನಾಥಾಶ್ರಮದ ಕುರಿತು ಮಾನ್ಯ ಸದಸ್ಯರು ಮಾತನಾಡಿದ್ದಾರೆ. ನಾನೂ ಕೂಡ ಅಲ್ಲಿಗೆ ಹೋಗಿದ್ದೆ ಆ ಆಶ್ರಮದಲ್ಲಿ ಆಯುರ್ವೇದ ಔಷಧಿ ಕ್ರಮವನ್ನನುಸರಿಸಿ ಅಲ್ಲಿನ ಭಾಗದ ಜನರಿಗೆ ಚಿಕಿತ್ಸೆ ನೀಡಲಾಗುತ್ತಿದೆ. ಅವರು ಅಭಿನಂದನೀಯ ಕೆಲಸವನ್ನು ಮಾಡುತ್ತಿದ್ದಾರೆ. ಒಂದು ಕಾಸೂ ಕೂಡ ಪಡೆಯದೆ ಲಕ್ಷಾಂತರ ಜನಕ್ಕೆ ಅವರು ಔಷಧೋಪಚಾರವನ್ನು ನೀಡುತ್ತಿದ್ದಾರೆ. ಜನರಲ್ಲಿ ಅವರ ಬಗ್ಗೆ ನಂಬಿಕೆ ಇದೆ, ವಿಶ್ವಾಸವಿದೆ, ಅಲ್ಲಿಗೆ ಹೋಗುತ್ತಾರೆ. ಆದರೆ, ಸರ್ಕಾರ ಅವರಿಗೆ ಎಷ್ಟರ ಮಟ್ಟಿಗೆ ಸಹಾಯ ಮಾಡಬೇಕಿತ್ತೋ ಅಷ್ಟರಮಟ್ಟಿಗೆ ಮಾಡುತ್ತಿಲ್ಲ. ಅವರಿಗೆ ಹೆಚ್ಚು ಸೌಕರ್ಯವನ್ನು ಒದಗಿಸಬೇಕಾಗಿದೆ. ಕಾನೂನು ಚೌಕಟ್ಟಿನೊಳಗೆ ಅವರಿಗೆ ಎಷ್ಟು ಸಹಾಯ ಮಾಡಬಹುದೋ ಅಷ್ಟನ್ನೂ ಮಾಡಬೇಕೆಂಬಾಸೆ ನನಗಿದೆ. ಅಲ್ಲಿ ಸುಮಾರು ೩೩ ಲಕ್ಷ ರೂಪಾಯಿಗಳ ವೆಚ್ಚದ ಕಟ್ಟಡ ಕಟ್ಟಲು ಸರ್ಕಾರದಿಂದ ಮಂತಿಗೆಯನ್ನು ಕೇಳುತ್ತಿದ್ದಾರೆ. ಅದಕ್ಕೆ ಕಾನೂನು ಪ್ರಕಾರ ಎಷ್ಟನ್ನು ಒದಗಿಸಬೇಕೋ ಅಷ್ಟನ್ನು ಒದಗಿಸುವುದರ ಜೊತೆಗೆ ಈ ಬಗ್ಗೆ ಭಾರತ ಸರ್ಕಾರಕ್ಕೂ ಶಿಫಾರಸ್ಸು ಮಾಡಿ, ಅಲ್ಲಿಂದಲೂ ಸಹಾಯ ಬರುವಂತೆ ಮಾಡೋಣ. ಏಕೆಂದರೆ, ಭಾರತ ಸರ್ಕಾರದವರು ಆಯುರ್ವೇದ ಅಭಿವೃದ್ಧಿಗೆ ಎಲ್ಲ ಸೌಕರ್ಯ ನೀಡುತ್ತೇವೆ ಮತ್ತು ಹಣ ಒದಗಿಸುತ್ತೇವೆ ಎಂದು ಹೇಳುತ್ತಿದ್ದಾರೆ. ಅವರೂ ಇದಕ್ಕೆ ಹಣ ಒದಗಿಸಿದರೆ, ಬಹಳ ಸಂತೋಷ. ದೇಶೀಯ ಔಷಧಿ ಪದ್ಧತಿ ಚೆನ್ನಾಗಿ ಬೆಳೆಯಬೇಕೆಂಬಾಸೆ ನನಗೂ ಕೂಡ ಇದೆ. ಅಂದಮಾತ್ರಕ್ಕೆ ಇಂಗ್ಲೀಷ್ ವೈದ್ಯದಲ್ಲಿ ನನಗೆ ನಂಬಿಕೆ ಇಲ್ಲವೆಂದಲ್ಲ. ಪ್ರಾಚೀನ ಔಷಧಿ ಪದ್ಧತಿಯಲ್ಲಿ ಜನರಿಗೆ ನಂಬಿಕೆಯಿದ್ದರೂ, ಅದು ಹೆಚ್ಚು ಬಳಕೆಯಲ್ಲಿಲ್ಲ. ಅಲ್ಲದೆ ಹಳ್ಳಿಗಾಡುಗಳಲ್ಲಿ ಆಯುರ್ವೇದ, ಯುನಾನಿ ಮತ್ತು ಹೋಮಿಯೋಪತಿ ಆಸ್ಪತ್ರೆಗಳನ್ನು ಸ್ಥಾಪನೆ ಮಾಡಿ ತನ್ಮೂಲಕ ಜನರಿಗೆ ಅನುಕೂಲ ಮಾಡಿಕೊಡುವ ಏರ್ಪಾಡು ಮಾಡಿದರೆ, ಜನರ ನಂಬಿಕೆಗೆ ಪಾತ್ರವಾದ ಚಿಕಿತ್ಸೆ ದೊರಕಿಸಿ ಕೊಡುವುದರಲ್ಲಿ ಆರೋಗ್ಯ ಇಲಾಖೆ ಸಾರ್ಥಕ ಪಡೆಯುತ್ತದೆಂದು ನನ್ನ ನಂಬಿಕೆ. ಅದರಂತೆ ಈಗಾಗಲೇ ಆರು ಹೊಸ ಆಸ್ಪತ್ರೆಗಳನ್ನು ಮಂಜೂರು ಮಾಡಲಾಗಿದೆ ಮತ್ತು ಈ ವರ್ಷ ಇನ್ನೂ ಎಂಟು ಆಸ್ಪತ್ರೆಗಳನ್ನು ಮಂಜೂರು ಮಾಡುವ ಅಭಿಪ್ರಾಯವಿದೆ. ಅಲ್ಲದೆ ಈಗಿರುವ ಎಲ್ಲ ಆಸ್ಪತ್ರೆಗಳಿಗೂ ಔಷಧಿಯನ್ನು ಒದಗಿಸುತ್ತಿದ್ದೇವೆ. ತಾಲ್ಲೂಕು ಬೋರ್ಡ್‌ನಿಂದ ಸರ್ಕಾರದ ವಶಕ್ಕೆ ತೆಗೆದುಕೊಂಡಿರುವ ೨೦೧ ಆಸ್ಪತ್ರೆಗಳಲ್ಲಿ ೭೫ ಆಸ್ಪತ್ರೆಗಳು ಆಯುರ್ವೇದಕ್ಕೆ ಸಂಬಂಧಪಟ್ಟಿವೆ. ಇವುಗಳನ್ನು ಆಯುರ್ವೇದಿಕ್ ಡೈರೆಕ್ಟರ್ ಅವರ ವಶಕ್ಕೆ ಕೊಟ್ಟು ಅಲ್ಲಿಗೆ ಹೆಚ್ಚು ಹೆಚ್ಚು ಔಷಧಿಗಳನ್ನು ಒದಗಿಸುವುದರ ಜೊತೆಗೆ ಒಳ್ಳೆಯ ಪರಿಣತ ವೈದ್ಯರನ್ನು ನೇಮಕ ಮಾಡಿ ತನ್ಮೂಲಕ ಅವುಗಳು ಜನರ ಸೇವೆ ಮಾಡಲು ಅನುಕೂಲವಾಗುವಂತೆ ಮಾಡಬೇಕೆಂಬ ಆಸೆ ನನಗಿದೆ. ದೇಶೀಯ ಔಷಧಿ ಪದ್ಧತಿಗೆ ನೀಡುತ್ತಿರುವ ಪ್ರೋತ್ಸಾಹಕ್ಕನುಗುಣವಾಗಿ ಈ ವರ್ಷವೇ ದಾವಣಗೆರೆ ಮತ್ತು ಬೆಂಗಳೂರಿನಲ್ಲಿ ತಲಾ ಒಂದೊಂದು ಪ್ರಕೃತಿ ಚಿಕಿತ್ಸಾ ಕೇಂದ್ರವನ್ನು ತೆರೆಯಬೇಕೆಂಬಾಸೆ ನನಗಿದೆ. ಈ ಬಗ್ಗೆ ಕಾರ್ಯಕ್ರಮವನ್ನೂ ಹಾಕಿಕೊಳ್ಳಲಾಗಿದೆ. ಈಗಾಗಲೇ ಜಯನಗರದಲ್ಲಿರುವ ಆಸ್ಪತ್ರೆ ಬಹಳ ಜನಾನುರಾಗಿಯಾಗಿದೆ. ನನ್ನ ಶಾಸಕ ಮಿತ್ರರು ಬಿಡುವು ಮಾಡಿಕೊಂಡು, ಅಲ್ಲಿಗೆ ಭೇಟಿ ಕೊಟ್ಟು, ಅಲ್ಲಿ ಹೇಗೆ ಸೌಕರ್ಯವನ್ನು ಕಲ್ಪಿಸಲಾಗಿದೆ ಎಂಬುದನ್ನು ನೋಡುವುದರ ಜೊತೆಗೆ ಸ್ವಲ್ಪ ಚಿಕಿತ್ಸೆಯನ್ನೂ ಪಡೆದರೆ ತಮ್ಮ ಆರೋಗ್ಯ ಹೆಚ್ಚುತ್ತದೆ, ತಮ್ಮ ಮನಸ್ಸು ಮತ್ತು ಶರೀರಕ್ಕೆ ಸಂತೋಷ ಸಿಗುತ್ತದೆಂದು ಹೇಳುತ್ತೇನೆ.

ಆಯುರ್ವೇದ ಔಷಧಿ ಪದ್ಧತಿಯು ನಮ್ಮ ರಾಜ್ಯದಲ್ಲಿ ಹೆಚ್ಚು ಬೆಳೆಯಲಿ ಎನ್ನುವುದು ನಮ್ಮ ಆಸೆಯಾಗಿದೆ. ಅಂತೆಯೇ, ಭಾರತ ಸರ್ಕಾರದವರಿಗೂ ಆಸೆ ಇದೆ. ಅವರು ಸಹಾಯ ಮಾಡುತ್ತಾರೆ. ನಮ್ಮ ಆಸೆಗನುಗುಣವಾಗಿ ಕೆಮ್ಮಣ್ಣುಗುಂಡಿ ಬಿಳಿಗಿರಿರಂಗನ ಬೆಟ್ಟ ಮತ್ತು ಕೊಡಚಾದ್ರಿಯಲ್ಲಿ ಗಿಡಮೂಲಿಕೆಗಳ ಉದ್ಯಾನವನವನ್ನು ಮಾಡಿ, ಅಲ್ಲಿ ಬೆಳೆಯುವ ಔಷಧಿಗಳನ್ನು ಪ್ರಯೋಗ ಮಾಡಿ ಜನಗಳಿಗೆ ಹೆಚ್ಚಿನ ರೀತಿಯಲ್ಲಿ ಸೌಕರ್ಯ ಒದಗಿಸುವುದಕ್ಕೆ ಏರ್ಪಾಡು ಮಾಡಲಾಗುವುದು.

ಆಯುರ್ವೇದ ಪದ್ಧತಿ ಬೆಳವಣಿಗೆಯ ಉದ್ದೇಶವನ್ನಿಟ್ಟುಕೊಂಡು ಸ್ಥಾಪನೆಯಾದ ಆಯುರ್ವೇದ ಕಾಲೇಜನ್ನು ಮುಚ್ಚಬೇಕೇ ಬೇಡವೆ ಎಂದು ಕಳೆದ ಮೂರು ವರ್ಷಗಳಿಂದಲೂ ಯೋಚಿಸಲಾಗುತ್ತಿತ್ತು. ಆದರೆ, ಜನರು ಆಯುರ್ವೇದದಲ್ಲಿ ಹೆಚ್ಚು ನಂಬಿಕೆಯನ್ನು ವ್ಯಕ್ತಪಡಿಸುತ್ತಿರುವ ಕಾಲದಲ್ಲಿ ಹಾಲಿ ಇರುವ ಆಸ್ಪತ್ರೆಗಳನ್ನು ಮುಚ್ಚುವುದು ಸರ್ವಥಾ ಸಾಧುವಲ್ಲವೆಂದು ಮನಗಂಡು, ಆ ಆಸ್ಪತ್ರೆಯನ್ನು ಖಾಯಂ ಮಾಡಿದ್ದೇವೆ. ಅಲ್ಲದೆ ಆಸ್ಪತ್ರೆಯ ಹಾಸಿಗೆ ಪ್ರಮಾಣವನ್ನು ಹೆಚ್ಚು ಮಾಡಬೇಕೆಂಬ ಯೋಚನೆ ಸರ್ಕಾರಕ್ಕಿದೆ. ಅಲ್ಲದೆ, ಅದರ ಪೂರ್ತವಾಗದೆ ಉಳಿದಿದ್ದ ಕಟ್ಟಡವನ್ನು ಪೂರ್ಣಗೊಳಿಸಲು ಮುಂದಿನ ಆಯವ್ಯಯದಲ್ಲಿ ಇದನ್ನು ಸೇರಿಸಲಾಗಿದೆ.

ಆಯುರ್ವೇದ ಪದ್ಧತಿಯು ಹೆಚ್ಚು ಸಮರ್ಥವಾಗಿ ಕೆಲಸ ಮಾಡಬೇಕಾದರೆ, ಸರ್ಕಾರ ಹೆಚ್ಚು ಹಣ ಒದಗಿಸಬೇಕಾಗುತ್ತದೆ. ಈಗ ಖರ್ಚು ಮಾಡುತ್ತಿರುವುದು ಬಹಳ ಕಡಿಮೆಯಾಗಿದೆ. ಎಲ್ಲರ ಸಹಕಾರದಿಂದ ಹೆಚ್ಚು ಹೆಚ್ಚು ಆಯುರ್ವೇದ ಆಸ್ಪತ್ರೆಗಳನ್ನು ತೆರೆದರೆ, ಅವು ಜನಸಾಮಾನ್ಯರ ಸೇವೆಯನ್ನು ಚೆನ್ನಾಗಿ ಮಾಡುತ್ತವೆನ್ನುವುದರಲ್ಲಿ ಯಾವ ಅನುಮಾನವೂ ಇಲ್ಲವೆಂದು ಹೇಳುತ್ತೇನೆ.

ಇನ್ನು ಕುಮಾರಸ್ವಾಮಿ ಕಬ್ಬಿಣ ಅದುರಿನಲ್ಲಿ ಬರುವ ನೀರನ್ನು ಕುಡಿಯುವುದಕ್ಕೆ ಅಥವಾ ಕೃಷಿಗೆ ಬಳಸುವ ಸಾಧ್ಯತೆ ಇದೆ ಎಂದು ಮಾನ್ಯ ರಾಮಭಟ್ ಅವರು ಹೇಳಿದ್ದಾರೆ ಈ ಬಗ್ಗೆ ತಜ್ಞರಿಂದ ಪರಿಶೀಲನೆ ಮಾಡಿಸಿ, ಅದು ಕುಡಿಯುವುದಕ್ಕೆ ಅಥವಾ ಕೃಷಿಗೆ ಯೋಗ್ಯವಾದ ನೀರೆಂದು ಅಭಿಪ್ರಾಯವಾದರೆ, ಆ ಬಗ್ಗೆ ಸೂಕ್ತ ಯೋಜನೆಗಳನ್ನು ಹಾಕಿ, ಅದನ್ನು ಕಾರ್ಯಗತ ಮಾಡಲು ಪ್ರಯತ್ನ ಮಾಡುತ್ತೇನೆ.

ಜನರ ಆರೋಗ್ಯ ಚೆನ್ನಾಗಿರಬೇಕಾದರೆ ಆಸ್ಪತ್ರೆಗಳನ್ನು ಕಟ್ಟುವುದರ ಮೂಲಕ ಮತ್ತು ಹೆಚ್ಚು ಹೆಚ್ಚು ಔಷಧಿಗಳನ್ನು ಒದಗಿಸುವುದರ ಮೂಲಕವೇ ವ್ಯವಸ್ಥೆ ಮಾಡಬೇಕೆನ್ನುವುದನ್ನು ನಾನು ಯುಕ್ತವೆಂದು ತಿಳಿದುಕೊಳ್ಳುವುದಿಲ್ಲ. ಶುದ್ಧವಾದ ಗಾಳಿ, ಒಳ್ಳೆಯ ಆಹಾರ ಮತ್ತು ಶುದ್ಧ ಕುಡಿಯುವ ನೀರು—ಈ ಮೂರು ಮನುಷ್ಯನನ್ನು ಹೆಚ್ಚು ಆರೋಗ್ಯವಂತನನ್ನಾಗಿ ಮಾಡುತ್ತವೆ. ನಗರಗಳಲ್ಲಿ ಕಾರ್ಖಾನೆಗಳನ್ನು ಸ್ಥಾಪಿಸುವುದರಿಂದ ಹವೆ ಕೆಟ್ಟು ಹೋಗುತ್ತದೆ, ಬಾಯಿಗೆ ರುಚಿಯಾಗಿರಲೆಂದು ಎಣ್ಣೆ ಮುಂತಾದ ವಸ್ತುಗಳನ್ನು ಬಳಸಿ ತಿನಸುಗಳನ್ನು ತಿನ್ನುವುದು ಅಷ್ಟು ಪೌಷ್ಟಿದಾಯಕವೂ ಅಲ್ಲ. ಆದುದರಿಂದ, ಎಲ್ಲಕ್ಕಿಂತ ಮುಖ್ಯವಾಗಿ ಜನರಿಗೆ ತಿಳುವಳಿಕೆ ಮಾಡುವುದು ಬಹು ಮುಖ್ಯ. ಆಹಾರ ಕಲಬೆರಕೆಯನ್ನು ತಪ್ಪಿಸಲು ಸರ್ಕಾರ ಕ್ರಮ ಕೈಗೊಂಡಿದೆ ; ಇದಕ್ಕೊಂದು ಇಲಾಖೆಯೇ ಇದೆ. ಇದರ ಜೊತೆಗೆ ಸ್ಥಳೀಯ ಸಂಸ್ಥೆಗಳು, ನಗರಸಭೆಗಳು ಸಹಕಾರ ನೀಡಿ ಹೆಚ್ಚು ನಿಗಾ ಇಟ್ಟು ಕೆಲಸ ಮಾಡಿದರೆ ಕಲಬೆರಕೆ ನಿಂತು, ಜನರು ಒಳ್ಳೆಯ ಆಹಾರ ಸೇವನೆಯಿಂದ ಎಷ್ಟೋ ಕಾಯಿಲೆಗಳನ್ನು ಕಡಿಮೆ ಮಾಡಿಕೊಳ್ಳಬಹುದು.

ನಮ್ಮ ರಾಜ್ಯದ ಆರೋಗ್ಯ ಇಲ್ಲಾಖೆಯಲ್ಲಿ ಗಣನೀಯ ಕೆಲಸಗಳನ್ನು ಮಾಡಲಾಗಿದೆ. ಅಂದ ಮಾತ್ರಕ್ಕೆ ಬೇರೆ ಕಡೆಗಳಲ್ಲಿ ಮಾಡಿಲ್ಲವೆಂದಲ್ಲ. ನಮ್ಮ ರಾಜ್ಯದಲ್ಲಿ ಪ್ಲೇಗ್ ಕಾಯಿಲೆಯೇ ಇಲ್ಲವೆನ್ನುವಷ್ಟು ನಿರ್ಮೂಲನವಾಗಿದೆ ; ಸಿಡುಬು ಕಾಯಿಲೆ ಇರುವುದನ್ನು ತೋರಿಸಿದರೆ ಒಂದು ಸಾವಿರ ರೂಪಾಯಿಗಳ ಬಹುಮಾನ ಕೊಡಲಾಗುವುದೆಂದು ಪ್ರಚಾರ ಮಾಡುವಷ್ಟರ ಮಟ್ಟಿಗೆ ಸಿಡುಬು ಕಾಯಿಲೆಯನ್ನು ನಿರೋಧಿಸಲಾಗಿದೆ. ಮಲೇರಿಯಾ ಕೂಡ ಹೆಚ್ಚು ಕಡಮೆ ನಿರ್ಮೂಲನವಾಗಿದೆ. ವ್ಯವಸ್ಥಿತವಾದ ಶುದ್ಧ ನೀರಿಲ್ಲದ ಕಡೆ ಕಾಲರಾ ಬರುವುದು ಸ್ವಾಭಾವಿಕ. ನಾವಿಂದು ಜನರಿಗ ಶುದ್ಧ ನೀರನ್ನು ಒದಗಿಸಬೇಕಾಗಿದೆ. ಈ ದಿಸೆಯಲ್ಲಿ ನಾವು ಇಟ್ಟಿರತಕ್ಕ ದೊಡ್ಡ ಹೆಜ್ಜೆ ಎಂದರೆ ; ಎಲ್ಲ ಗ್ರಾಮಾಂತರ ಪ್ರದೇಶಗಳಲ್ಲೂ ಕೊಳವೆ ಬಾವಿಗಳನ್ನು ತೆರೆದಿರುವುದು ಅವುಗಳೇನಾದರೂ ಕೆಟ್ಟುಹೋದರೆ, ದುರಸ್ತು ಮಾಡುವ ವ್ಯವಸ್ಥೆ ಕೂಡ ಇದೆ. ಮಾನ್ಯ ಮಲ್ಲಿಕಾರ್ಜುನಪ್ಪನವರು ಮಾತನಾಡುತ್ತಾ, ಅವರ ಭಾಗದಲ್ಲಿ ಖಾಯಿಲೆ ಇತ್ತು, ಆಸ್ಪತ್ರೆ ಇರಲಿಲ್ಲ ; ಆದರೆ ಅಲ್ಲಿಗೆ ಕುಡಿಯುವ ನೀರಿನ ವ್ಯವಸ್ಥೆಯಾದ ಮೇಲೆ ಅಲ್ಲಿದ್ದ ಖಾಯಿಲೆ ಕಡಮೆಯಾಯಿತೆಂದು ಹೇಳಿದರು. ಆದುದರಿಂದ, ನಾವಿಂದು ಜನರಿಗೆ ಶುದ್ಧವಾದ ನೀರನ್ನು ಒದಗಿಸಬೇಕು. ಸಾಧ್ಯವಾದರೆ ಇದರ ಬಗ್ಗೆ ನಿಯಮಗಳನ್ನು ಹಾಕಿ ಕ್ರಮಗಳನ್ನು ಕೈಗೊಂಡಿದ್ದೇ ಆದರೆ ಆರೋಗ್ಯಭಾಗ್ಯವನ್ನು ನಮ್ಮ ಜನತೆಗೆ ಕೊಡಲಿಕ್ಕೆ ಸಾಧ್ಯವಾಗುತ್ತದೆಂದು ಹೇಳುತ್ತೇನೆ.

ತುಮಕೂರು ಜನರಲ್ ಆಸ್ಪತ್ರೆ ಬಗ್ಗೆ ಮಾನ್ಯ ಶಿವನಂಜಪ್ಪನವರು ಮಾತನಾಡಿದ್ದಾರೆ. ಸ್ವಾಮಿ ಈ ಆಸ್ಪತ್ರೆ ಬಹಳ ಚೆನ್ನಾಗಿ ಕೆಲಸ ಮಾಡುತ್ತಿದೆ, ಯಾವ ಆಸ್ಪತ್ರೆಗಳು ಚೆನ್ನಾಗಿ ಕೆಲಸ ಮಾಡುತ್ತಿಲ್ಲ ಅಂದರೆ ಏನು ಪ್ರಯೋಜನ? ಚೆನ್ನಾಗಿ ಕೆಲಸ ಮಾಡುವ ಆಸ್ಪತ್ರೆಗಳನ್ನು ಕೂಡ ಚೆನ್ನಾಗಿ ಕೆಲಸ ಮಾಡುತ್ತಿಲ್ಲವೆಂದು ಹೇಳುವುದು ಸರಿಯಲ್ಲ. ಇನ್ನು ಪರಿಣಾಮಕಾರಿಯಾಗಿ ಕೆಲಸ ಮಾಡುವಂತೆ ಉತ್ತಮಪಡಿಸುವುದಕ್ಕೆ ವ್ಯವಸ್ಥೆ ಮಾಡುತ್ತೇನೆ. ಅಧಿಕಾರಿಗಳ ಮಾತನ್ನು ಕೇಳಿ ನಾನು ಹೇಳುತ್ತಿಲ್ಲ ; ಮೂರು ಸಲ ಈ ಆಸ್ಪತ್ರೆಗೆ ಹೋಗಿದ್ದೇನೆ. ಒಬ್ಬಿಬ್ಬರು ಒಳ್ಳೆಯ ಕೆಲಸ ನಡೆಯುತ್ತಿಲ್ಲವೆಂದು ಹೇಳಬಹುದು ; ಆದರೆ, ಸಾಮಾನ್ಯವಾಗಿ ತುಮಕೂರು ಜನರಲ್ ಆಸ್ಪತ್ರೆಯಲ್ಲಿ ಜನಾನುರಾಗಿಗಳಾದ ವೈದ್ಯರುಗಳಿದ್ದಾರೆ ; ಅಲ್ಲಿ ಉತ್ತಮ ಮಟ್ಟದ ವೈದ್ಯಕೀಯ ಸೇವೆ ದೊರೆಯುತ್ತದೆಂದು ಅಲ್ಲಿನ ಜನತೆಯಿಂದ ತಿಳಿದಿದೆ. ಇನ್ನು ಉತ್ತಮ ಮಟ್ಟದ ವೈದ್ಯಕೀಯ ಸೇವೆ ದೊರಕಿಸಿಕೊಡುವುದಕ್ಕೆ ಪ್ರಯತ್ನ

ಮಾಡುತ್ತೇನೆ. ವೈದ್ಯರು ಜಾಗ್ರತೆಯಾಗಿ ಕೆಲಸ ಮಾಡದಿದ್ದರೆ; ಉದಾಸೀನ ಪ್ರವೃತ್ತಿ ಮಾಡಿದರೆ ಅಂಥ ವಿಷಯಗಳನ್ನು ನನ್ನ ಗಮನಕ್ಕೆ ತಂದರೆ ಅವುಗಳನ್ನು ಬಗೆಹರಿಸುವುದಕ್ಕೆ ಪ್ರಯತ್ನ ಮಾಡುತ್ತೇನೆ.

೧೧-೦೦ ಎ.ಎಂ.

ಮಾನ್ಯ ಫರ್ನಾಂಡೀಸ್‌ರವರು ೨೫ ಪೈಸೆ ವಸೂಲು ಮಾಡುವುದರಿಂದ ತೊಂದರೆಯಾಗುತ್ತದೆಂದು ತಿಳಿಸಿದರು. ಆಸ್ಪತ್ರೆಗಳಲ್ಲಿ ಸಾರ್ವಜನಿಕರಿಂದ ವಿಚಾರ ಮಾಡಿದ್ದೇನೆ; ೨೫ ಪೈಸೆ ಕೊಡುವುದರಿಂದ ನಿಮಗೆ ತೊಂದರೆಯಾಗುತ್ತದೆಯೆ ಎಂದು; ತೊಂದರೆ ಏನೂ ಇಲ್ಲ; ಕ್ಯೂನಲ್ಲಿ ನಿಂತುಕೊಳ್ಳುವುದೇ ತೊಂದರೆಯೆಂದು ತಿಳಿಸಿದರು. ಸರ್ಕಾರಕ್ಕೆ ಇದರಿಂದ ಒಂದೂವರೆ ಕೋಟಿ ರೂಪಾಯಿಗಳು ಉತ್ಪನ್ನ ಬರುತ್ತದೆ; ಸ್ವಾಮಿ, ಕಟ್ಟಡಗಳು ಬೇಕು; ಎಕ್ಸರೇ ಯಂತ್ರಗಳು ಬೇಕು; ಔಷಧಿಗಳು ಬೇಕು; ಡಾಕ್ಟರುಗಳು ಬೇಕು; ಮಹಿಳಾ ವೈದ್ಯರುಗಳು ಬೇಕೆಂದು ಬೇಡಿಕೆ ಇರುವಾಗ, ನ್ಯಾಯವಾದ ರೀತಿಯಲ್ಲಿ ಜನತೆಯ ಕಲ್ಯಾಣಕ್ಕೆ ಈ ಹಣವನ್ನು ಖರ್ಚು ಮಾಡುತ್ತೇವೆ; ಕೆರೆಯ ನೀರನ್ನು ಕೆರೆಗೆ ಚೆಲ್ಲುತ್ತಿದ್ದೇವೆ; ಇದು ಒಂದು ಒಳ್ಳೆಯ ಮಾರ್ಗವೆಂದು ತಿಳಿದುಕೊಳ್ಳಲಾಗಿದೆ.

ವೆಂಕಟೇಶ್ವರ ಇ.ಎನ್.ಟಿ. ಆಸ್ಪತ್ರೆ ಬಗ್ಗೆ ಹೇಳಿದ್ದಾರೆ. ಇದನ್ನು ಹಿಂದಿನ ಸರ್ಕಾರದವರು ಮಾಡಿದ್ದಾರೆ. ಸುಮಾರು ೩.೭೬ ಸಾವಿರ ರೂಪಾಯಿ ವೆಚ್ಚದಲ್ಲಿ ಮಾಡಲಾಗಿದೆ. ಅರ್ಧ ಭಾಗ ಡೊನೇಷನನ್ನು ವಂತಿಗೆ ರೂಪದಲ್ಲಿ ಕೊಟ್ಟಿದ್ದಾರೆ. ಆದಕ್ಕಾಗಿ ದಾನಿಗಳ ಹೆಸರಿನಲ್ಲಿ ಕಟ್ಟಬೇಕೆಂದು ಹಿಂದಿನ ಸರ್ಕಾರ ತೀರ್ಮಾನ ಮಾಡಿತ್ತು. ಇದರಿಂದ ಯಾರಿಗೂ ತೊಂದರೆಯಾಗಿಲ್ಲ, ಮಾಡಿರತಕ್ಕ ಕಾರ್ಯ ಒಳ್ಳೆಯದೆಂದು ಹೇಳುವುದಕ್ಕೆ ಇಚ್ಛೆಪಡುತ್ತೇನೆ.

ಕಮ್ಯೂನಿಟಿ ಹೆಲ್ತ್ ವರ್ಕರ್ಸ್ ಸ್ಕೀಮು ಹೊಸದಾಗಿ ಬಂದಾಗ ಕರ್ನಾಟಕ ರಾಜ್ಯ ಮೊದಲು ಒಪ್ಪಿರಲಿಲ್ಲ. ಎಲ್ಲಾ ರಾಜ್ಯಗಳು ಭಾರತದ ನೀತಿ ನಿಯಮವನ್ನು ಅನುಸರಿಸಿ ಒಪ್ಪಿಕೊಂಡಿದ್ದವು. ಪ್ರತಿ ಸಾವಿರ ಪ್ರಜಾ ಸಂಖ್ಯೆ ಇರತಕ್ಕ ಪ್ರದೇಶಗಳಲ್ಲಿ ಕಮ್ಯೂನಿಟಿ ಹೆಲ್ತ್ ವರ್ಕರ್ಸ್‌ಗಳನ್ನು ನೇಮಕ ಮಾಡಿ ಅವರುಗಳಿಗೆ ಕಿಟ್ಟು ಕೊಟ್ಟುಬಿಟ್ಟು ಅವರ ಮೂಲಕ ಇಂಜಕ್ಷನ್ ಔಷಧಿಗಳನ್ನು ಕೊಡುವ ವ್ಯವಸ್ಥೆ ಇದ್ದುದರಿಂದ ಇದರಿಂದ ಜನಗಳ ಮೇಲೆ ಅಪಘಾತವಾಗಬಹುದೆಂದು ನಿರೀಕ್ಷಿಸಿ ಮೊದಲು ಒಪ್ಪಿಗೆ ಕೊಟ್ಟಿರಲಿಲ್ಲ. ಆದರೆ, ಈಗ ಅವರಿಗೆ ಔಷಧಿ ಮತ್ತಿತರ ಸಲಕರಣೆಗಳನ್ನು ಸಾಗಿಸುವುದಕ್ಕೆ ಕಿಟ್ಟು ಬ್ಯಾಗ್ ಕೊಟ್ಟು, ಮಲೇರಿಯಾ ಮತ್ತಿತರ ಸಣ್ಣ ಸಣ್ಣ ಕಾಯಿಲೆಗಳ ಬಗ್ಗೆ ಒಂದೆರಡು ಗಂಟೆಗಳ ಕಾಲ ಜನಗಳನ್ನು ನೋಡಿ ಅಲ್ಲಿಯೇ ಗುಳಿಗೆ ಮಾತ್ರೆಗಳನ್ನು ಕೊಟ್ಟು ಬರತಕ್ಕ ವ್ಯವಸ್ಥೆ ಇದರಿಂದ ಮಾಡಲಾಗಿದೆ. ಅವನಿಗೆ ಕೊಡತಕ್ಕದ್ದು ಕೇವಲ ೫೦ ರೂಪಾಯಿಗಳು; ಸುಮಾರು ೧೧೧ ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಇದು ಜಾರಿಯಲ್ಲಿದೆ. ಅಲ್ಲಿಗೆ ಒಬ್ಬರು ಅಡಿಷನ್ ಡಾಕ್ಟರುಗಳನ್ನು ನೇಮಕ ಮಾಡುವುದಕ್ಕೆ ಪ್ರಾವಿಷನ್ ಇದೆ. ಇದಕ್ಕೆ ಸಂಬಂಧಿಸಿದ ಹಣವನ್ನು ಭಾರತ ಸರ್ಕಾರದವರೇ ಕೊಡುತ್ತಾರೆ. ಇದರ ಒಂದು ಸೌಕರ್ಯವನ್ನು ಜನತೆ ಪಡೆಯುವಂತೆ ಆಗಬೇಕೆಂದು ಹೇಳುತ್ತೇನೆ. ಅವರಿಗೆ ಇಂಜಕ್ಷನ್ ಕೊಡುವುದಕ್ಕೆ ಬರುವುದಿಲ್ಲ; ಹಾಗೆ ಹೀಗೆ ಅಲ್ಲಗಳೆಯುವುದು ಬೇಡ. ಇದು ಉತ್ತಮವಾದ ಯೋಜನೆ ಎನ್ನುವುದು ನನ್ನ ನಂಬಿಕೆ.

ಮೆಡಿಕಲ್ ಎಜುಕೇಷನ್ ರೀ ಓರಿಯಂಟ್ ಆಗಬೇಕೆಂದು ಸಲಹೆ ಕೊಟ್ಟಿದ್ದಾರೆ. ಭಾರತ ಸರ್ಕಾರದ ನೀತಿ ಕೂಡ ಇದೆ ಆಗಿದೆ. ಮೂರು ಮೂರು ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಅಳವಡಿಸಿಕೊಂಡು ಪ್ರತಿವಾರ ಹೋಗಿ ವೈದ್ಯಕೀಯ ಸೇವೆ ಕೊಡಬೇಕೆನ್ನುವ ಗುರಿ ಇದೆ. ಇದಕ್ಕಾಗಿ ಮೂರು ಕಾಲೇಜು ಗಳನ್ನು ಅಳವಡಿಸಿಕೊಂಡಿದ್ದೇವೆ. ಬೆಂಗಳೂರು, ಮೈಸೂರು ಮತ್ತು ಹುಬ್ಬಳ್ಳಿಯಲ್ಲಿ. ಇದಲ್ಲದೆ, ನಮ್ಮ ರಾಜ್ಯದಲ್ಲಿರತಕ್ಕ ಎಲ್ಲಾ ಕಾಲೇಜುಗಳಿಗೂ ಈ ಒಂದು ಸ್ಕೀಮನ್ನು ಜಾರಿ ಮಾಡಿ, ಗ್ರಾಮಾಂತರ ಪ್ರದೇಶಕ್ಕೆ ಇವರು ಹೋಗಿ ಅಲ್ಲಿನ ಜನಗಳ ಸಂಪರ್ಕ ಪಡೆದು, ಅವರಿಗಿರತಕ್ಕ ತೊಂದರೆ ಏನು ಎನ್ನುವುದನ್ನು ಕಂಡುಹಿಡಿದು ಅದನ್ನು ಬಗೆಹರಿಸಲಿಕ್ಕೆ ಪ್ರಯತ್ನಪಡಬೇಕಾಗುವುದು. ಈ ದಿಸೆಯಲ್ಲಿ ನಾವು ದಿಟ್ಟವಾದ ಹೆಜ್ಜೆಯನ್ನು ಇಟ್ಟಿದ್ದೇವೆಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛೆಪಡುತ್ತೇನೆ.

ಸ್ವಾಮಿ, ೧೯೭೯ನೇ ಇಸವಿ ಅಂತರರಾಷ್ಟ್ರೀಯ ಮಕ್ಕಳ ವರ್ಷ, ಈ ವರ್ಷದಲ್ಲಿ ಮಕ್ಕಳ ಅಭಿವೃದ್ಧಿಗಾಗಿ ನಾವು ಹೆಚ್ಚು ಶ್ರಮಿಸಬೇಕು. ಮಾನ್ಯ ಗುಂಡೂರಾಯರಿಗೆ ನಾನು ಆಭಾರಿಯಾಗಿದ್ದೇನೆ, ಅವರು ಮಕ್ಕಳ ವರ್ಷದಲ್ಲಿ ಮಕ್ಕಳಿಗೆ ಕೊಡುಗೆ ನೀಡಿದ್ದಾರೆ. ೬ ವರ್ಷದ ವರೆಗಿನ ಮಕ್ಕಳು ಬಸ್ಸುಗಳಲ್ಲಿ ಉಚಿತವಾಗಿ ಪ್ರಯಾಣ ಮಾಡುವುದಕ್ಕೆ ಅವಕಾಶ ಮಾಡಿಕೊಟ್ಟಿದ್ದಾರೆ. ಇವತ್ತು ನಾವು ಮಕ್ಕಳ

ಆರೋಗ್ಯವನ್ನು ಕಾಪಾಡಬೇಕು; ಮಕ್ಕಳಿಗೆ ಹೆಚ್ಚಿನ ಪ್ರೋತ್ಸಾಹ ಕೊಡಬೇಕು; ಅವರ ಭವಿಷ್ಯವನ್ನು ಚೆನ್ನಾಗಿರುವಂತೆ ಮಾಡಬೇಕಾದುದು ನಮ್ಮೆಲ್ಲರ ಕರ್ತವ್ಯ. ಈ ಸಮಯದಲ್ಲಿ ರವೀಂದ್ರನಾಥ್ ಟಾಗೂರ್‌ರವರು ಹೇಳಿರತಕ್ಕ ಒಂದು ಮಾತನ್ನು ಇಲ್ಲಿ ಉದಹರಿಸುವುದಕ್ಕೆ ಇಚ್ಛೆಪಡುತ್ತೇನೆ.

> "There is nothing more primeval than the child. There have been so many changes in man according to place, time and tradition but the child remains to-day exactly as he was hundred and thousands of years ago and he is as new and tender and as innocent and sweet as he was on the very first day".

ಇವತ್ತು ನಮ್ಮ ರಾಜ್ಯದಲ್ಲಿ ಮಕ್ಕಳಿಗಾಗಿ ಬೇಕಾದಷ್ಟು ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದೇವೆ. ಮಕ್ಕಳಿಗೆ ಚುಚ್ಚುಮದ್ದುಗಳನ್ನು ಕೊಡುವುದರ ಮೂಲಕ ಸಾಂಕ್ರಾಮಿಕ ರೋಗಗಳು ಬರದಂತೆ ತಡೆಯುವುದು. ಈ ದಿಸೆಯಲ್ಲಿ ನಾವು ಹಾಕಿರತಕ್ಕಂಥ ಯೋಜನೆ ಸಾರ್ಥಕವಾಗಿದೆಯೆಂದು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಈ ವಿಚಾರದಲ್ಲಿ ಎಲ್ಲರೂ ಕೂಡ ಸಹಕಾರ ಮನೋಭಾವನೆಯಿಂದ ಕೆಲಸ ಮಾಡುತ್ತಿದ್ದಾರೆ.

ಕುಟುಂಬ ಯೋಜನೆ ಬಗ್ಗೆ ಸಾರ್ಥಕ ರೀತಿಯಲ್ಲಿ ಪರಿಣಾಮಕಾರಿಯಾಗಿ ಕೆಲಸ ಮಾಡುವಂತಾಗ ಬೇಕು. ಜನಸಂಖ್ಯೆಯನ್ನು ನಿಯಂತ್ರಣ ಮಾಡದೇ ಇದ್ದರೆ, ಎಷ್ಟು ಆಸ್ಪತ್ರೆಗಳನ್ನು ಕಟ್ಟಲಿ, ಎಷ್ಟು ಔಷಧಿಗಳನ್ನು ಕೊಡಲಿ, ಅದರಿಂದ ಉಪಯೋಗವಿಲ್ಲದಂತಾಗುತ್ತದೆ; ಇದರಿಂದ ಯಾವುದೇ ರೀತಿಯ ಕ್ಷೇಮವಿಲ್ಲದಂತಾಗುತ್ತದೆನ್ನುವುದು ನನ್ನ ನಂಬಿಕೆ. ಈ ಇಲಾಖೆಗೆ ಮಾತ್ರ ನಿಯಂತ್ರಣ ಮಾಡತಕ್ಕ ಹೊಣೆ ಇದೆಯೆಂದು ಯಾರು ತಿಳಿಯಬಾರದು. ಎಲ್ಲ ಇಲಾಖೆಗಳ, ಸಮಾಜದ, ಸಾರ್ವಜನಿಕರ, ಶಾಸಕರ ಹೊಣೆ ಇದರಲ್ಲಿದೆ; ಇದು ಅವರ ಆದ್ಯಕರ್ತವ್ಯವೆಂದು ತಿಳಿದುಕೊಂಡಿದ್ದೇನೆ. ಎಲ್ಲರೂ ಸಹಕರಿಸಿ ಜನಸಂಖ್ಯೆ ನಿಯಂತ್ರಣ ಕಾರ್ಯವನ್ನು ಯಶಸ್ವಿಯಾಗಿ ಜಾರಿಗೆ ತಂದರೆ ನಮ್ಮ ಭವಿಷ್ಯ ಉತ್ತಮ ವಾಗುತ್ತದೆ. ಹಿಂದೆ ಈ ಕೆಲಸದಲ್ಲಿ ಏನೇನು ನಡೆಯಿತೆನ್ನುವುದನ್ನು ಮರೆತು ಜನಸಂಖ್ಯೆ ನಿಯಂತ್ರಣ ಕಾರ್ಯದಲ್ಲಿ ಎಲ್ಲರೂ ಸಹಕಾರ ನೀಡಿ ಈ ಕಾರ್ಯವನ್ನು ಮಾಡಬೇಕೆಂದು ಪ್ರಾರ್ಥನೆ ಮಾಡಿ ಕೊಳ್ಳುತ್ತೇನೆ.

ಸ್ವಾಮಿ, ೧೯೭೮ನೇ ಇಸವಿ Aluna Ata declaration ಎಲ್ಲ ದೇಶಗಳವರು ಒಂದು ತೀರ್ಮಾನ ಕೈಗೊಂಡಿದ್ದಾರೆ. ಎಲ್ಲ ರಾಷ್ಟ್ರಗಳು ತೀರ್ಮಾನ ಮಾಡಿರತಕ್ಕಂಥಾದ್ದು ಬರುವ ಎರಡು ಸಾವಿರ ವರ್ಷದೊಳಗಡೆ ಜನರಿಗೆ ಅವರ ಸಾಮಾನ್ಯ ಆರೋಗ್ಯಮಟ್ಟವನ್ನು ಕಾಪಾಡಲಿಕ್ಕೆ ಏನೇನು ಅನುಕೂಲಗಳನ್ನು ಮಾಡಬೇಕೋ ಆ ದಿಸೆಯಲ್ಲಿ ದಿಟ್ಟ ಹೆಜ್ಜೆಯನ್ನು ಇಡಬೇಕು ಎನ್ನುವ ತೀರ್ಮಾನ ಕೈಗೊಂಡಿದ್ದಾರೆ. ಇದರಲ್ಲಿ ಭಾರತ ದೇಶವೂ ಭಾಗಿಯಾಗಿತ್ತು. ಮಕ್ಕಳ ಆರೋಗ್ಯವನ್ನು ಕಾಪಾಡುವುದರ ಮೂಲಕ, ಸಾಮಾನ್ಯ ಜನರ ಆರೋಗ್ಯಮಟ್ಟವನ್ನು ಸಾಧಿಸಬಹುದಲ್ಲದೆ; ಜನಸಂಖ್ಯೆ ನಿಯಂತ್ರಣ ಹತೋಟಿಯನ್ನು ಸಾಧಿಸಬಹುದು. ನಮ್ಮ ರಾಜ್ಯದಮಟ್ಟಿಗೆ ಹೇಳುವುದಾದರೆ ಮೊದಲಿನಿಂದಲೂ ಪರಿ ಣಾಮಕಾರಿಯಾದ ಕೆಲಸವನ್ನು ಈ ಇಲಾಖೆ ಮಾಡಿದೆ. ನಮ್ಮಲ್ಲಿ ಸುಮಾರು ೨,೦೦೦ ವಿವಿಧ ಆಸ್ಪತ್ರೆಗಳು ಇವೆ; ಭಾರತದ ಇತರ ರಾಜ್ಯಗಳಿಗೆ ಹೋಲಿಸಿ ಹೇಳುವುದಾದರೆ ನಮ್ಮಲ್ಲಿ ಹೆಚ್ಚಿಗೆ ಆಸ್ಪತ್ರೆಗಳಿವೆ. ಹೆಚ್ಚಿಗೆ ವೈದ್ಯರುಗಳಿದ್ದಾರೆ. ದಾದಿಯರು ಕೂಡ ಹೆಚ್ಚಿಗೆ ಸಂಖ್ಯೆಯಲ್ಲಿದ್ದಾರೆ. ಪರಿಣಾಮಕಾರಿಯಾಗಿ ಸಮರ್ಥ ರೀತಿಯಲ್ಲಿ ಹೆಚ್ಚಿನ ಸೇವೆ ಸಲ್ಲಿಸುವಂತ ನಂಬಿಕೆ ನನಗಿದೆ. ಕಳೆದ ವರ್ಷ ೨೫ ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಸ್ಥಾಪನೆ ಮಾಡಿದ್ದೇವೆ. ನಮ್ಮಲ್ಲಿ ಇನ್ನು ೫೦೦ ಪ್ರಾಥಮಿಕ ಆರೋಗ್ಯಕೇಂದ್ರಗಳನ್ನು ಸ್ಥಾಪನೆ ಮಾಡಲಿಕ್ಕೆ ಅವಕಾಶ ಇದೆ. ಹಣಕಾಸಿನ ಸೌಲಭ್ಯವನ್ನು ನೋಡಿಕೊಂಡು ಈ ಕೆಲಸವನ್ನು ಪರಿ ಣಾಮಕಾರಿಯಾಗಿ ಮಾಡಬೇಕೆಂಬುದೇ ನನ್ನ ಇಚ್ಛೆಯಾಗಿದೆ. ಪ್ರತಿ ವರ್ಷ ೧೫–೨೦–೨೫ ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಸ್ಥಾಪನೆ ಮಾಡಿಕೊಂಡು ಹೋಗಬೇಕೆಂಬುದು ಸರ್ಕಾರದ ನೀತಿಯಾಗಿದೆ. ಭಾರತ ಸರ್ಕಾರದಿಂದ ಈ ದಿಸೆಯಲ್ಲಿ ಹೆಚ್ಚಿನ ಸಹಾಯ ದೊರೆಯುವುದೆಂಬ ನಿರೀಕ್ಷೆ ಕೂಡ ನಮಗೆ ಇದೆ. ಈ ಎಲ್ಲ ಸೌಲಭ್ಯವನ್ನು ಅನುಸರಿಸಿ ಗ್ರಾಮಾಂತರ ಪ್ರದೇಶದ ಜನತೆಗೆ ೧೦೦ಕ್ಕೆ ೮೦ರಷ್ಟು ವಾಸ ಮಾಡತಕ್ಕ ಹಳ್ಳಿ ಗಾಡಿನ ಜನತೆಗೆ ಹೆಚ್ಚಿನ ವೈದ್ಯಕೀಯ ಸೇವೆಯನ್ನು ಒದಗಿಸಬೇಕೆಂಬುದೇ ಸರ್ಕಾರದ ಗುರಿಯಾಗಿದೆ.

ಇದನ್ನು ಯಾರು ಅಲ್ಲಗಳೆಯುವಂತಿಲ್ಲ. ಹೆಚ್ಚು ಹೆಚ್ಚು ಪರಿಣಾಮಕಾರಿಯಾದ ಯೋಜನೆಗಳನ್ನು ಗ್ರಾಮಾಂತರ ಮಟ್ಟದಲ್ಲಿ ಜಾರಿಗೊಳಿಸಿ, ಗ್ರಾಮಾಂತರ ಜನತೆಯ ಮನೆ ಬಾಗಿಲುಗಳಿಗೆ ವೈದ್ಯಕೀಯ ಸೌಕರ್ಯಗಳನ್ನು ಪರಿಣಾಮಕಾರಿಯಾದ ರೀತಿಯಲ್ಲಿ ಒದಗಿಸುವುದಕ್ಕೆ ವ್ಯವಸ್ಥೆ ಮಾಡುತ್ತಿದ್ದೇವೆ.

ಸಾಮಾನ್ಯವಾಗಿ ಸದಸ್ಯರುಗಳು ಕೊಟ್ಟಂತ ಸಲಹೆಗಳನ್ನು ಅವಲೋಕಿಸಿ ಅವುಗಳನ್ನು ಕಾರ್ಯಗತ ಮಾಡುವುದಕ್ಕೆ ಸಕ್ರೀಯ ಪ್ರಯತ್ನ ಮಾಡುತ್ತೇನೆಂದು ಹೇಳಿ, ನನಗೆ ಇಷ್ಟು ಕಾಲಾವಕಾಶ ಕೊಟ್ಟಿದ್ದಕ್ಕಾಗಿ ಅಧ್ಯಕ್ಷರನ್ನು ವಂದಿಸಿ ಈ ಬೇಡಿಕೆಗೆ ಎಲ್ಲ ಸದಸ್ಯರು ಸಂಪೂರ್ಣ ಬೆಂಬಲವನ್ನು ಕೊಡಬೇಕೆಂದು ಹೇಳಿ, ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಹೆಚ್. ಡಿ. ಚೌಡಯ್ಯ.—ಸ್ವಾಮಿ, ಮಾನ್ಯ ಮಂತ್ರಿಗಳು ಅವರ ಉತ್ತರವನ್ನು ಜನರಲೈಸ್ ಮಾಡಿ ಹೇಳಿದ್ದಾರೆ ಅಂದರೆ ತಪ್ಪಾಗಲಾರದು. ನಾನು ಮಾತನಾಡತಕ್ಕ ಕಾಲದಲ್ಲಿ ನಾಲ್ಕೈದು ವಿಷಯಗಳನ್ನು ಪ್ರಸ್ತಾಪ ಮಾಡಿದ್ದೆ. ಅದರ ಬಗ್ಗೆ ಒಂದಕ್ಕೂ ಉತ್ತರವನ್ನು ಕೊಡಲಿಲ್ಲ. ಅದರಲ್ಲಿ ಮೊದಲನೆಯದು ಅಂದರೆ ಇತ್ತೀಚೆಗೆ ತಾವು ತೆಗೆದುಕೊಂಡಿರುವ ತಾಲ್ಲೂಕು ಬೋರ್ಡ್ ಮತ್ತು ಮುನಿಸಿಪಾಲಿಟಿ ಆಸ್ಪತ್ರೆಗಳಿಗೆ ಅವರೇ ಇನ್ನೂ ೫ ವರ್ಷಗಳ ಕಾಲ ವೆಚ್ಚ ತುಂಬ ಬೇಕೆಂದು ಆಜ್ಞೆ ಮಾಡಿದೆ ಅದನ್ನು ಪುನರ್ವಿಮರ್ಶೆ ಮಾಡುವ ಬಗ್ಗೆ ಹೇಳಿದ್ದೆ. ಈಗ ಅವರಿಗೆ ಸಾಮರ್ಥ್ಯವಿಲ್ಲ ಎಂದು ಅವರಿಂದ ತೆಗೆದುಕೊಂಡಿರುವಾಗ ಅವರೇ ಇನ್ನೂ ೫ ವರ್ಷ ವೆಚ್ಚ ತುಂಬ ಬೇಕೆಂದು ಹೇಳಿದರೆ ಹೇಗೆ ? ಇನ್ನು ಎರಡನೆಯದಾಗಿ ಈ ಎಕ್ಸರೇ ಪ್ಲಾಂಟ್ ೧೭೭ ತಾಲ್ಲೂಕುಗಳಲ್ಲಿ ೯೧ ಕಡೆ ಇದೆ ಎಂದು ಹೇಳಿದ್ದೀರಿ. ಆದರೆ ಇದು ಈಕ್ವಿಟಬಲ್ ಡಿಸ್ಟ್ರಿಬ್ಯೂಷನ್ ಇಲ್ಲ ಎಂದು ನಮ್ಮ ಆಪಾದನೆ. ಈಗ ನಮ್ಮ ಮಂಡ್ಯ ಜಿಲ್ಲೆ ಹೆಡ್‌ಕ್ವಾರ್ಟರ್ಸ್‌ನಲ್ಲಿ ಬಿಟ್ಟರೆ ಬೇರೆ ಕಡೆ ಎಲ್ಲಿಯೂ ಇಲ್ಲ ಇನ್ನು ಗ್ರಾಮಾಂತರ ಪ್ರದೇಶಗಳಿಗೆ ಔಷಧಿ ಸರಬರಾಜು ಮಾಡುವ ಬಗ್ಗೆ ಹೇಳಬೇಕು ಅಂದರೆ ತಾವು ಆರೂವರೆ ಸಾವಿರ ರೂಪಾಯಿ ಔಷಧಿಯನ್ನು ಒದಗಿಸುತ್ತಿದ್ದೀರಿ. ಅದನ್ನು ಲೆಕ್ಕ ಹಾಕಿದರೆ ಒಂದು ದಿವಸಕ್ಕೆ ಹದಿನಾರೂವರೆ ರೂಪಾಯಿ ಆಗುತ್ತದೆ, ಇದನ್ನು ಜಾಸ್ತಿ ಮಾಡಬೇಕು ಎಂದು ಹೇಳಿದ್ದೆ. ಇನ್ನು ಮಲೇರಿಯಾ ವರ್ಷೇ ವರ್ಷೇ ಕಡಿಮೆಯಾಗುತ್ತಿದೆ ಎಂದು ಹೇಳಿದಿರಿ ಇಲ್ಲಿ ಸ್ಥಳದ ಜನಗಳ ಅಭಿಪ್ರಾಯ ಏನಾಗಿದೆ ಅಂದರೆ ಹೋದ ವರ್ಷಕ್ಕಿಂತಲೂ ಈ ವರ್ಷ ಜಾಸ್ತಿಯಾಗಿದೆ. ಇದನ್ನು ಸಬ್‌ಸ್ಟ್ಯಾನ್ಸಿಯೇಟ್ ಮಾಡಬೇಕಾದರೆ ತಮ್ಮಲ್ಲಿ ಫ್ಯಾಕ್ಟ್ ಇದ್ದರೆ ಹೇಳಬೇಕು. ಇನ್ನು ಮಂಡ್ಯ ಜಿಲ್ಲೆಯಲ್ಲಿ ಆ್ಯಂಟಿ ಮಲೇರಿಯ ಮೇಜರ್ಸ್ ಔಷಧಿಗಳ ಕೇಂದ್ರವನ್ನು ಓಪನ್ ಮಾಡಿಸುತ್ತಿದ್ದೇವೆಂದು ಹೇಳಿದ್ದೀರಿ. ದೇ ಆರ್ ನಾಟ್ ಏಬಲ್ ಟು ಫರ್‌ನಿಷ್ ದಿ ಲಿಸ್ಟ್. ಅದರ ಬಗ್ಗೆ ತಮ್ಮ ಹತ್ತಿರ ಲಿಸ್ಟ್ ಇದ್ದರೆ ದಯಮಾಡಿ ಕೊಡಬೇಕು ಎಂದು ಹೇಳುತ್ತೇನೆ.

ಶ್ರೀ ಪಿ. ರಾಂದೇವ್.—ಮಾನ್ಯ ಮಂತ್ರಿಗಳು ತುಂಬಾ ಸೊಗಸಾಗಿ ಉತ್ತರ ಕೊಟ್ಟಿದ್ದಾರೆ. ಆದುದರಿಂದ ಅವರಿಗೆ ನನ್ನ ಧನ್ಯವಾದಗಳು. ಈಗ ನಾನು ಎರಡು ವಿಚಾರಗಳನ್ನು ಮಾತ್ರ ಕೇಳಬೇಕಾಗಿದೆ. ಇತ್ತೀಚೆಗೆ ಪತ್ರಿಕೆಯಲ್ಲಿ ಒಂದು ವಿಚಾರ ಬಂದಿತ್ತು. ಕಂಟೋನ್‌ಮೆಂಟ್‌ನ ಒಂದು ಖಾಸಗಿ ನರ್ಸಿಂಗ್ ಹೋಮ್‌ನಲ್ಲಿ ಒಬ್ಬರು ಸತ್ತು ಹೋದಮೇಲೆ ಹಣ ವಾಪಸ್ಸು ಕೊಡಬೇಕಾದರೆ ಬಿಲ್ ಚುಗ್ತ ಮಾಡದೆ ಕೊಡುವುದಿಲ್ಲ ಎನ್ನುವ ಮಾತನ್ನು ಆಡಿ, ಕಮಿಷನರ್ ಆಫ್ ಪೋಲಿಸ್ ಅವರು ಇಂಟರ್‌ಫಿಯರ್ ಮಾಡಿದರು ಕೊಡದೆ ಇರುವುದು ತಮ್ಮ ಗಮನಕ್ಕೆ ಬಂದಿದೆಯೋ ? ಇನ್ನು ಖಾಸಗಿ ನರ್ಸಿಂಗ್ ಹೋಮ್‌ಗಳ ಬಗ್ಗೆ ಒಂದು ಕಾನೂನು ಮಾಡಿದಿರಿ. ಆ ಕಾನೂನನ್ನು ಸಂಪೂರ್ಣವಾಗಿ ಜಾರಿಗೆ ತರತಕ್ಕದ್ದರ ಬಗ್ಗೆ ಏನು ಕ್ರಮ ತೆಗೆದುಕೊಂಡಿದ್ದೀರಿ, ಇನ್ನು ಈ ಸಾರಿ ಮಕ್ಕಳ ವರ್ಷ ಎಂದು ಶಹಬಾಷ್‌ಗಿರಿ ಕೊಟ್ಟಿದ್ದೀರಿ. ಇವೊತ್ತು ಫ್ಯಾಮಿಲಿ ಪ್ಲಾನಿಂಗ್ ಸರಿಯಾಗಿ ಆಗುತ್ತಿಲ್ಲ ಎಂದು ಎಲ್ಲ ಕಡೆಯಿಂದ ವರದಿ ಬಂದಿದೆ. ಈ ವರ್ಷ ಮಕ್ಕಳಿಗೆ ಉತ್ತಮ ಸೌಲಭ್ಯ ಕೊಡಬೇಕಾಗಿರುವುದರಿಂದ. ಈ ವರ್ಷ ಮಕ್ಕಳಿಲ್ಲದ ವರ್ಷ ಎಂದು ಆಚರಿಸಲಿಕ್ಕೆ ಸಾಧ್ಯವೇ ? ಇದನ್ನು ಚೈನಾದಲ್ಲಿ ಮಾಡಿದ್ದಾರೆ.

ಶ್ರೀ ಎಸ್. ಎಸ್. ಅರಕೇರಿ.—ಸ್ವಾಮಿ, ಮಾನ್ಯ ಮಂತ್ರಿಗಳು ಎರಡು ಪಾಯಿಂಟ್‌ಗಳ ಬಗ್ಗೆ ವಿವರಣೆ ಕೊಡಲಿಲ್ಲ. ಈಗ ಬೇಸಿಕ್ ಹೆಲ್ತ್ ವರ್ಕರ್ಸ್ ೫೦೦ ಜನರನ್ನು ಸೆಲೆಕ್ಟ್ ಮಾಡಿ ಎರಡು ವರ್ಷ ಹಾಗೆ ಇಟ್ಟಿದ್ದಾರೆ, ಇನ್ನೂ ಅವರಿಗೆ ಆರ್ಡರ್ಸ್ ಹೋಗಿಲ್ಲ. ಇನ್ನು ನರ್ಸಿಂಗ್ ಸ್ಟ್ಯಾಫ್, ಮಲೇರಿಯಾ, ವಿಭಾಗಗಳು ಏನಿವೆ ಇವುಗಳಲ್ಲಿ ಬೇಸಿಕ್‌ನಿಂದ ಸರಿಯಾಗಿ ಹರಿಜನ ಗಿರಿಜನರನ್ನು ತುಂಬಿ ಕೊಟ್ಟಿಲ್ಲ. ಕಳೆದ ಹತ್ತು ವರ್ಷದಿಂದಲೂ ಹಾಗೆ ನಡೆಯುತ್ತಿದೆ. ಇನ್ನು ಹೊಸದಾಗಿ ಡೈರೆಕ್ಟರ್

ಬಂದಿರುವವರು ಹರಿಜನ ಗಿರಿಜನ ಡಾಕ್ಟರುಗಳಿಗೆ ಬಹಳ ಬಹಳ ಉದಾಸೀನವಾಗಿ ಬಿಹೇವ್ ಮಾಡಿ ಸಿಕ್ಕಲ್ಲಿ ಪೋಸ್ಟ್ ಮಾಡುತ್ತಿದ್ದಾರೆ. ಅವರ ಹೆಲ್ತ್ ಕುಂದುಕೊರತೆಗಳನ್ನು ಕೇಳದೆ ಒಂದು ಇನ್‌ಡಿಫರೆಂಟ್ ಆ್ಯಟಿಟ್ಯೂಡ್‌ನಲ್ಲಿ ನಡೆದುಕೊಳ್ಳುತ್ತಿದ್ದಾರೆ. What is the justification for that? I would like to know from the Government whether the new Director is being given instructions to behave properly with the SC/STs Doctors and other employees ?

SRI ABDUL LATHEEF.—The Hon. Minister desires my rich compliments for the pleasing reply. He has said No to my request. The need for expansion of this S.N.P. Hospital was done ten years back and we have not added any new buildings to the complexes. The need still there and the entire amount is not going to be spent in one year, I would request him at least to spare a little amount and see that the work gets started.

ಶ್ರೀ ಕಡಿದಾಳ್ ದಿವಾಕರ್.—ಸ್ವಾಮಿ, ಖಾಸಗಿ ಮೆಡಿಕಲ್ ಕಾಲೇಜುಗಳನ್ನು ರಾಷ್ಟ್ರೀಕರಣ ಗೊಳಿಸಬೇಕು ಎಂದು ಹೇಳಿದರೆ, ಅದರ ಬಗ್ಗೆ ಮಾನ್ಯ ಮಂತ್ರಿಗಳು ಚಕಾರ ಕೂಡ ಹೇಳಲಿಲ್ಲ. ಈಗ ಮಾನ್ಯ ಮಂತ್ರಿಗಳು ಅದರ ಬಗ್ಗೆ ತಿಳಿಸಬೇಕು. ಇನ್ನು ನಾನ್ ಪ್ರಾಕ್ಟೀಸಿಂಗ್ ಅಲೋಯೆನ್ಸ್ ಕೊಡಬೇಕು ಲೆಕ್ಚರರ್ಸ್ ಸ್ಟ್ರೈಕ್ ಮಾಡುತ್ತಾರೆಂದು ಪತ್ರಿಕೆಯಲ್ಲಿ ಬಂದಿದೆ ಎನ್ನುವುದನ್ನು ಹೇಳಿದರೆ ಅದರ ಬಗ್ಗೆ ಮಾನ್ಯ ಮಂತ್ರಿಗಳು ಗಮನ ಹರಿಸಲಿಲ್ಲ, ಇನ್ನು ಥ್ರೀಟೈರ್ ಸಿಸ್ಟಂ ಮಾಡಬೇಕೆಂದು ಹೇಳಿದ್ದೆ, ಡಿ.ಹೆಚ್.ಓ. ಮೆಡಿಕಲ್ ಆಫೀಸರ್ ಮಧ್ಯೆ ಇನ್ನೊಂದು ಕೇಡರ್ ಸೃಷ್ಟಿ ಮಾಡಬೇಕೆಂದು ಹೇಳಿದ್ದೆ. ಇನ್ನು ಲೋಕಲ್ ಕ್ಯಾಂಡಿಡೇಟ್ಸ್ ಪಿ.ಹೆಚ್.ಸಿ.ಗೆ ಹಾಕುವುದನ್ನು ಬಿಡಬೇಕೆಂದು ಹೇಳಿದ್ದೆ. ಅದರ ಬಗ್ಗೆ ತಿಳಿಸಬೇಕು. ಇನ್ನು ಪ್ರಿನ್ಸಿಪಾಲರುಗಳಿಗೆ, ಪ್ರೊಫೆಸರುಗಳಿಗೆ ಟೆಲಿಫೋನ್ಸ್ ಮತ್ತು ವೆಹಿಕಲ್ಸ್ ಕೊಡಬೇಕೆಂದು ಹೇಳಿದ್ದೆ. ಇನ್ನು ಪ್ಯಾಕೇಜ್ ಇಂಡೆಂಟ್ ಸ್ಕೀಮ್ ಬಗ್ಗೆ ತಿಳಿಸಿದ್ದೆ ಅದಕ್ಕೆ ಉತ್ತರ ಕೊಟ್ಟಿಲ್ಲ, ಇನ್ನು ಕಮಿಷನರ್ ಜೊತೆಗೆ ಸ್ಪೆಷಲ್ ಸೆಕ್ರೆಟರಿ ಅಪಾಯಿಂಟ್ ಮಾಡಬೇಕೆಂದು ಹೇಳಿದ್ದೆ. ಅದಕ್ಕೆ ಮಾನ್ಯ ಮಂತ್ರಿಗಳು ಉತ್ತರ ಕೊಡಲಿಲ್ಲ. ಆದುದರಿಂದ ಮಾನ್ಯ ಮಂತ್ರಿಗಳು ಈ ವಿಚಾರಗಳಿಗೆ ಉತ್ತರ ಹೇಳಬೇಕೆಂದು ಅಧ್ಯಕ್ಷರ ಮುಖಾಂತರ ಕೇಳಿಕೊಳ್ಳುತ್ತೇನೆ.

ಶ್ರೀ ಯು. ಬಿ. ಬೋರ್ಕರ್.—ಸ್ವಾಮಿ, ಮಾನ್ಯ ಮಂತ್ರಿಗಳು ತಮ್ಮ ಉತ್ತರದಲ್ಲಿ ಒಳ್ಳೆಯ ಡಾಕ್ಟರುಗಳು, ಕೆಟ್ಟ ಡಾಕ್ಟರುಗಳು ಎಂದು ಹೇಳಿದರು. ಅದನ್ನು ಅವರು ಯಾವ ಒಂದು ದೃಷ್ಟಿಯಿಂದ ಹೇಳಿದರು ಗೊತ್ತಾಗಲಿಲ್ಲ. ನಾನು ಅರ್ಥ ಮಾಡಿಕೊಂಡ ಹಾಗೆ ಕೆಟ್ಟ ಡಾಕ್ಟರು ಅಂದರೆ ಅವರ ಆ್ಯಟಿಟ್ಯೂಡ್, ಅವರ ವರ್ತನೆ, ಮೇಲೆ ಹೇಳಿದ್ದಾರೆಂದು ನಾನು ತಿಳಿದು ಕೊಂಡಿದ್ದೇನೆ. ಮೆಡಿಕಲ್ ಸ್ಟೂಡೆಂಟ್‌ಗಳಿಗೆ ಸೀಟು ಕೊಡುವಾಗಲೇ ಅವರ ಆ್ಯಟಿಟ್ಯೂಡ ಗುರುತಿಸಬಹುದು. ಈಗ ದಕ್ಷ ಅಧಿಕಾರಿಯನ್ನು ಮೆಡಿಕಲ್ ಸರ್ವೀಸ್‌ಗೆ ಹಾಕಿದ್ದೇವೆಂದು ಹೇಳಿದ್ದಾರೆ ಅದನ್ನು ನಾನು ಒಪ್ಪುತ್ತೇನೆ. ಆದರೆ ಅವರಿಂದ ಆ ರೀತಿಯ ಕೆಲಸವನ್ನು ಅಪೇಕ್ಷಿಪಡಿಸುತ್ತೀರಾ ? ಇನ್ನು ಆಟ್ಯಿಟ್ಯೂಡ್ ಕಲಿಸಲಿಕ್ಕೆ ಸೋಷಿಯಲ್ ಸೈನ್ಸ್ ಎಂದು ಹೇಳತಕ್ಕ ಪಾಠ ಕ್ರಮ ಅಳವಡಿಸುತ್ತೀರಾ ? ಒಂದು ವಾರಕ್ಕೆ ಒಂದು ಸಾರಿ ಅಥವಾ ೧೫ ದಿವಸಕ್ಕೆ ಒಂದು ಸಾರಿ ಅವರ ಆ್ಯಟಿಟ್ಯೂಡ್ ತಿದ್ದಲಿಕ್ಕೆ, ಅವರು ಸಮಾಜದಲ್ಲಿ ಯಾವರೀತಿ ನಡೆದುಕೊಳ್ಳಬೇಕು ಎನ್ನುವ ಬಗ್ಗೆ ಒಂದು ಸೋಷಿಯಲ್ ಸೈನ್ಸ್ ಪೀರಿಯಡ್ ಇಂಟ್ರಡ್ಯೂಸ್ ಮಾಡುತ್ತೀರಾ? ಆಯುರ್ವೇದಿಕ್ ಕಾಲೇಜಿನಲ್ಲಿ ವಿದ್ಯಾರ್ಥಿಗಳಿಗೆ ಕಾಲಕ್ಕೆ ಸರಿಯಾಗಿ ಸತ್ತ ಶವಗಳು ಸಾಕಷ್ಟು ಪ್ರಮಾಣದಲ್ಲಿ ಸಿಕ್ಕುತ್ತಿಲ್ಲವೆಂದು ಅಲ್ಲಿನ ವಿದ್ಯಾರ್ಥಿಗಳನ್ನು ನನ್ನಲ್ಲಿಗೆ ಬಂದು ಮನವಿಗಳನ್ನು ಕೊಟ್ಟಿದ್ದಾರೆ. ಆದ್ದರಿಂದ ಆ ವಿದ್ಯಾರ್ಥಿಗಳಿಗೆ ಅನುಕೂಲ ವಾಗುವಂತೆ ಶವಗಳನ್ನು ಸರಬರಾಜು ಮಾಡುವ ಕಡೆಗೆ ಸೂಕ್ತ ಗಮನ ಹರಿಸುತ್ತೀರಾ?

ಇನ್ನು ತಿಪಟೂರು ಆಸ್ಪತ್ರೆಗೆ ಕಳೆದ ೧೫ ದಿವಸಗಳ ಕೆಳಗೆ ಒಂದು ಅಪಘಾತಕ್ಕೆ ಸಂಬಂಧಪಟ್ಟಂತೆ ಹೋಗಿದ್ದೆ. ಆ ಆಸ್ಪತ್ರೆ ಕಟ್ಟಡ ಬಹಳ ದೊಡ್ಡದು. ರೋಗಿಗಳೂ ಕೂಡ ಬಹಳಷ್ಟು ಬರುತ್ತಿರುತ್ತಾರೆ. ಆದರೆ ಅಲ್ಲಿ ಸಾಕಷ್ಟು ಮಂಚಗಳು ಇಲ್ಲ. ನಾನು ಹೋದಾಗ ರೋಗಿಗಳು ನೆಲದಲ್ಲೇ ಮಲಗಿದ್ದರು.

ಇಷ್ಟೇ ಅಲ್ಲದೆ ಆ ಆಸ್ಪತ್ರೆಯಲ್ಲಿ ಒಬ್ಬರು ವೈದ್ಯರುಹಾಗೂ ಒಬ್ಬ ಅಸಿಸ್ಟೆಂಟ್ ಇಬ್ಬರು ಮಾತ್ರ ಇದ್ದರು. ಅಷ್ಟು ಜನಗಳನ್ನೂ ಇವರಿಬ್ಬರೇ ನೋಡಿಕೊಳ್ಳಬೇಕಾಗಿದೆ. ಆದ್ದರಿಂದ ಅಲ್ಲಿಗೆ ಇನ್ನೊಬ್ಬ ವೈದ್ಯರನ್ನು ನೇಮಿಸುವುದು ಒಳ್ಳೆಯದು ಎಂದು ಹೇಳಬಯಸುತ್ತೇನೆ.

ಇನ್ನು ನಮ್ಮ ಹೇರೂರಿನಲ್ಲಿ ಒಂದು ಎಸ್. ಎಂ. ಪಿ. ಸೆಂಟರ್ ಹಾಗೂ ಇನ್ನೊಂದು ಸಬ್ ಸೆಂಟರ್ ಇವೆ. ಒಂದೇ ಊರಿನಲ್ಲಿ ಈ ಎರಡೂ ಸೆಂಟರ್‌ಗಳು ಇರಬೇಕಾದ ಅವಶ್ಯಕತೆ ಇಲ್ಲ. ಇದರ ಬಗ್ಗೆ ನಾನು ಮಾನ್ಯ ಆರೋಗ್ಯ ಸಚಿವರಿಗೆ ಪತ್ರವನ್ನು ಬರೆದರೆ ಅದಕ್ಕೆ ಉತ್ತರವೇ ಇಲ್ಲ.

ಅಧ್ಯಕ್ಷರು.—ಈ ವಿಚಾರಗಳನ್ನೆಲ್ಲಾ ತಾವು ಕಾಗದದಲ್ಲಿ ಬರೆದು ಇತ್ಯರ್ಥ ಮಾಡಿಕೊಳ್ಳಬೇಕೇ ಹೊರತು ಇದನ್ನೆಲ್ಲಾ ಇಲ್ಲಿ ಹೇಳುತ್ತಾ ಕುಳಿತರೆ ಸಭೆಯ ಕಾರ್ಯಕಲಾಪಗಳನ್ನು ಮಾಡುವುದಕ್ಕೆ ತೊಂದರೆಯಾಗುತ್ತದೆ.

ಶ್ರೀ ಯು. ಬಿ. ಬೋರ್ಕರ್.—ಸ್ವಾಮಿ, ನಾನು ಪತ್ರವನ್ನು ಬರೆದಿದ್ದರೂ ಆರೋಗ್ಯ ಮಂತ್ರಿಗಳು ನನಗೆ ಉತ್ತರವನ್ನೇ ಕೊಟ್ಟಿಲ್ಲ. ಇನ್ನು 2 ಮಕ್ಕಳು ಬೇಕು ಮೂರು ಮಕ್ಕಳು ಸಾಕು ಎಂದು ಹೇಳುತ್ತಿದ್ದಿರಿ ಹರಿಜನರಿಗೆ 3ನೇ ಮಗು ಆದರೆ ಅದಕ್ಕೆ ಶಾಲೆಯಲ್ಲಿ ಸ್ಕಾಲರ್‌ಶಿಪ್ಪೇ ಕೊಡುತ್ತಿಲ್ಲ. ಆದ್ದರಿಂದ ಆ ಮಗುವಿಗೂ ಶಾಲೆಯಲ್ಲಿ ಸ್ಕಾಲರ್‌ಶಿಪ್ ಕೊಡುವಂತೆ ಮಾಡುತ್ತೀರಾ ?

ಶ್ರೀ ಎಂ. ಎಂ. ನದಾಫ್.—ಮಾನ್ಯ ಆರೋಗ್ಯ ಮಂತ್ರಿಗಳು ಮಾತನಾಡುತ್ತಾ ಹುಬ್ಬಳ್ಳಿ ಕೆ. ಎಂ. ಸಿ. ಆಸ್ಪತ್ರೆಗೆ ಹೆಚ್ಚು ಹೆಚ್ಚು ಹಾಸಿಗೆಗಳನ್ನು ಕೊಡುತ್ತೇವೆಂದು ಹೇಳಿರುವುದು ಸಂತೋಷಕರವಾದುದು. ಈಗ ಅಲ್ಲಿ ಸಾಕಷ್ಟು ಡಾಕ್ಟರ್‌ಗಳಿಲ್ಲ. ಆಸ್ಪತ್ರೆಗೆ ಬರತಕ್ಕ ರೋಗಿಗಳನ್ನೆಲ್ಲಾ ಒ. ಪಿ. ಡಿ ಯಲ್ಲೇ ಟ್ರೀಟ್‌ಮೆಂಟ್ ಕೊಟ್ಟು ಕಳುಹಿಸುತ್ತಿದ್ದಾರೆ ಹಿಂದೆ 1000 ಹಾಸಿಗೆಗಳು ಇದ್ದುದನ್ನು 8೫೦ಕ್ಕೆ ಇಳಿಸಿದ್ದೀರಿ ? ಇದಕ್ಕೆ ಕಾರಣವೇನು? ಈ ಆಸ್ಪತ್ರೆಗೆ ಒಬ್ಬ ಪ್ರೊಫೆಸರ್, ಒಬ್ಬ ಅಸಿಸ್ಟೆಂಟ್ ಪ್ರೊಫೆಸರ್‌ನ್ನು ನೇಮಕ ಮಾಡುತ್ತೀರಾ? ಕೆ. ಎಂ. ಸಿ. ಯೂನಿಟ್‌ನಲ್ಲಿದ್ದಂಥ ಸಲೇನ್ ಯೂನಿಟ್‌ನ್ನು ಏತಕ್ಕಾಗಿ ಬಂದ್ ಮಾಡಿದ್ದೀರಿ ಎಂಬುದನ್ನು ತಿಳಿಸಬೇಕು.

ಶ್ರೀ ಜಿ. ರಾಜೂಗೌಡ.—ಕೊಳ್ಳೇಗಾಲ ತಾಲ್ಲೂಕು ಆನಂಬಾಡಿಯಲ್ಲಿ ಗಿಡಮೂಲಿಕೆಗಳನ್ನು ಬೆಳೆಸಲು 200 ಎಕರೆ ಜಮೀನನ್ನು ಮಂಜೂರು ಮಾಡಿತ್ತು. ಇದರಿಂದ ಏನಾದರೂ ಉಪಯೋಗ ಆಗಿದೆಯೆ ?

ಅಧ್ಯಕ್ಷರು.—ತಮಗೆ ಯಾವ ವಿಷಯದ ಬಗ್ಗೆ ಸ್ಪಷ್ಟೀಕರಣ ಬೇಕೆಂಬುದನ್ನು ವಿಷದವಾಗಿ ಹೇಳಿ.

ಶ್ರೀಮತಿ ರೇಣುಕಾ ರಾಜೇಂದ್ರನ್.—ಫಾರ್‌ಸೆನಿಕ್ ಲ್ಯಾಬೋರೇಟರಿ ವಿಷಯದಲ್ಲಿ ಈಗ್ಗೆ ಒಂದು ತಿಂಗಳ ಹಿಂದೆ ಪತ್ರಿಕೆಯಲ್ಲಿ ಬಂದಿತ್ತು. ಅಲ್ಲಿನ ಅಧಿಕಾರಿಗಳು ಹೇಳವಾಗಿ ಮಿಸ್ಚೀಫ್ ಮಾಡುತ್ತಿದ್ದಾರೆ. ಇವತ್ತು ಯಾವುದೇ ಒಂದು ವಿಷಯವನ್ನು ನಿಮ್ಮ ಫಾರ್ಸೆನಿಕ್ ಲ್ಯಾಬೊರೇಟರಿಗೆ ಕಳುಹಿಸಿದರೆ, ಎಷ್ಟು ದಿವಸಗಳಲ್ಲಿ ಅದರ ಫಲಿತಾಂಶವನ್ನು ಕಳುಹಿಸಬೇಕೆಂದು ನಿಯಮವಿದೆ? ಅದರ ಪ್ರಕಾರ ಅಲ್ಲಿ ನಡೆದುಕೊಳ್ಳುತ್ತಿದ್ದಾರೆಯೆ?

ಶ್ರೀ ಜಿ. ಬಿ. ಶಂಕರರಾವ್.—ಸ್ವಾಮಿ, ಕೇಂದ್ರ ಸರ್ಕಾರ ಕಮ್ಯುನಿಟಿ ವರ್ಕರ್ಸ್ ನೇಮಕ ಮಾಡಬೇಕೆಂದು ಇದೆ. ಇವರನ್ನು ಗುರ್ತಿಸುವುದಕ್ಕೆ ತಾಲ್ಲೂಕುಬೋರ್ಡ್ ಅಥವಾ ವಿಧಾನಸಭಾ ಸದಸ್ಯರಿಗೆ ಅಧಿಕಾರವನ್ನು ಕೊಡುತ್ತೀರಾ ?

ಇನ್ನು ಗ್ರಾಮಾಂತರ ಪ್ರದೇಶದಲ್ಲಿರತಕ್ಕ ಆಸ್ಪತ್ರೆಗಳಿಗೂ, ಬೆಂಗಳೂರಿನಲ್ಲಿರತಕ್ಕ ಆಸ್ಪತ್ರೆಗಳಿಗೂ ಅಜಗಜಾಂತರ ವ್ಯತ್ಯಾಸವಿದೆ. ಇಲ್ಲಿನ ಆಸ್ಪತ್ರೆಗಳಲ್ಲಿ ಔಷಧಿ ಸಾಕಷ್ಟು ಸಿಕ್ಕಿದರೂ ಗ್ರಾಮಾಂತರ ಪ್ರದೇಶಗಳಲ್ಲಿರತಕ್ಕ ಆಸ್ಪತ್ರೆಗಳಲ್ಲಿ ಯಾವ ಔಷಧಿಯೂ ಸಿಕ್ಕುವುದಿಲ್ಲ. ಈ ಔಷಧಿಗಾಗಿ ಸಾಕಷ್ಟು ಹಣವನ್ನು ಬಡೆಜಟ್‌ನಲ್ಲಿ ಒದಗಿಸಿದ್ದೀರಿ. ಆದರೂ ಅದು ಪ್ರಯೋಜನಕ್ಕೆ ಬರುತ್ತಿಲ್ಲ. ಇವತ್ತು ಏನಾಗಿದೆ ಎಂದರೆ ಜಿಲ್ಲಾ ವೈದ್ಯಾಧಿಕಾರಿಗಳಿಗೇ ಈ ಔಷಧಿಗಳನ್ನು ಕೊಂಡುಕೊಳ್ಳುವಂತೆ ಅಧಿಕಾರ ಕೊಟ್ಟಿದ್ದೀರಿ. ಆದರೆ ಇವರು ಬೇಕಿಲ್ಲದ ಔಷಧಿಗಳನ್ನು ತಂದು ಪಿ. ಹೆಚ್. ಸಿ. ಸೆಂಟರ್‌ಗಳಲ್ಲಿ ತುಂಬುತ್ತಿದ್ದಾರೆ. ಇದರಿಂದ ಯಾವ ಉಪಯೋಗವು ಆಗದೆ ಅನವಶ್ಯಕವಾಗಿ ಹಣ ಖರ್ಚಾಗುತ್ತಿದೆ. ಆದ್ದರಿಂದ ಇದನ್ನು ತಡೆಗಟ್ಟಬೇಕು.

ಶ್ರೀ ರಮೇಶ್‌ಕುಮಾರ್.—ಕೋಲಾರ ಜಿಲ್ಲಾ ಆಸ್ಪತ್ರೆ ಬಗ್ಗೆ ಹೇಳಬೇಕೆಂದಿದ್ದೇನೆ. ಈ ಆಸ್ಪತ್ರೆಗೆ ಬರತಕ್ಕ ರೋಗಿಗಳನ್ನು ಅಡ್ಮಿಟ್ ಮಾಡಿಕೊಳ್ಳಲು ಜಾಗ ಇಲ್ಲದೇ ಇರುವುದರಿಂದ ಅವರನ್ನು ಔಟ್‌ಪೇಷಂಟ್ ವಿಭಾಗದಲ್ಲೇ ಟ್ರೀಟ್‌ಮೆಂಟ್ ಕೊಟ್ಟು ಕಳುಹಿಸುತ್ತಿದ್ದಾರೆ. ಈ ವಿಚಾರದಲ್ಲಿ ತಾವು ಗಮನಹರಿಸಿ ಆ ರೋಗಿಗಳನ್ನು ಇನ್‌ಪೇಷೆಂಟ್ಸ್ ಎಂದು ಸೇರಿಸಿಕೊಂಡು ಉಪಚಾರ ಮಾಡುವುದಕ್ಕೆ ವ್ಯವಸ್ಥೆ ಮಾಡುತ್ತೀರಾ ? ನಾನು ಈ ಆಸ್ಪತ್ರೆ ವಿಚಾರದಲ್ಲಿ ಟೀಕೆ ಮಾಡುತ್ತಿಲ್ಲ. ಅಲ್ಲದೆ ತಾವೂ ಕೂಡ ಈ ಆಸ್ಪತ್ರೆ ಬಗ್ಗೆ ಷಹಬಾಸ್‌ಗಿರಿ ಮಾತುಗಳನ್ನಾಡಿದ್ದೀರಿ.

ಶ್ರೀ ಎಂ. ಮಾದಯ್ಯ.—ಸ್ವಾಮಿ ಈ ಡಾಕ್ಟರ್ ಕೆಲಸಕ್ಕೆ ಸೇರುವವರು ಮೊದಲು ಎಂ.ಬಿ.ಬಿ.ಎಸ್. ಮಾಡಿಕೊಂಡಿದ್ದು, ಒಂದು ವರ್ಷಕಾಲ ತಮ್ಮ ನಿಯಮದ ಪ್ರಕಾರ ಹೌಸ್ ಸರ್ಜನ್ ಆಗಿ ಕೆಲಸ ಮಾಡಿರುತಾರೆ. ಅಂಥವರನ್ನು ಸರ್ಕಾರಿ ನೌಕರಿಗೆ ತೆಗೆದುಕೊಳ್ಳುವಾಗ ಇಂಟರ್‌ವ್ಯೂ ಮಾಡುವುದು ಸರಿಯೆ? ಈ ಡಾಕ್ಟರ್‌ಗಳನ್ನು ನೇಮಕ ಮಾಡುವಾಗ ಮೊದಲು ಯಾರು ಹೆಚ್ಚು ನಂಬರ್ ತೆಗೆದುಕೊಂಡು ಪಾಸ್ ಮಾಡಿರುತ್ತಾರೆ ಅಂಥವರನ್ನು ಕೆಲಸಕ್ಕೆ ತೆಗೆದುಕೊಳ್ಳಿ. ಈರೀತಿ ಕೆಲಸಕ್ಕ ತೆಗೆದುಕೊಳ್ಳುವಾಗ ಷೆಡ್ಯೂಲ್ಡ್ ಕ್ಯಾಸ್ಟ್‌ನವರಿಗೆ ಸರಿಯಾದ ಪ್ರಾತಿನಿಧ್ಯವನ್ನು ಕೊಟ್ಟಿಲ್ಲ. ಈ ಬ್ಯಾಕ್‌ಲಾಗ್‌ನ್ನು ಸರಿಪಡಿಸುವುದಕ್ಕೆ ಏನಾದರೂ ಸೂಕ್ತ ಕ್ರಮ ತೆಗೆದಕೊಳ್ಳುತ್ತೀರಾ ?

ಇನ್ನು ಬಡವರಿಗೋಸ್ಕರ ಸರಬರಾಜು ಮಾಡತಕ್ಕ ಔಷಧಿಗಳನ್ನು ಈ ಆಸ್ಪತ್ರೆ ವೈದ್ಯರುಗಳು ಯಾರು ದುಡ್ಡು ಕೊಡುತ್ತಾರೆ ಅಂಥವರಿಗೆ ಕೊಟ್ಟುಬಿಡುತ್ತಾರೆ. ನಿಜವಾಗಿ ಖಾಯಿಲೆ ಬೀಳತಕ್ಕ ಬಡವರಿಗೆ ಈ ಔಷಧಿಗಳು ಸಿಕ್ಕುತ್ತಿಲ್ಲ. ಇದರ ಬಗ್ಗೆ ಕೂಡ ಮಾನ್ಯ ಸಚಿವರು ಸೂಕ್ತ ಗಮನಹರಿಸಿ ಸೂಕ್ತ ಕ್ರಮ ತೆಗೆದುಕೊಳ್ಳಬೇಕು.

೧೧.೩೦ ಎ.ಎಂ.

ಶ್ರೀ ಎಸ್.ಆರ್. ಬೊಮ್ಮಾಯಿ.—ಸ್ವಾಮಿ ಬಡ್ಜೆಟ್‌ನಲ್ಲಿ ಕೊಟ್ಟಿರತಕ್ಕಂಥ ಅಂಕಿಸಂಖ್ಯೆಗಳನ್ನು ನೋಡಿದಾಗ ಬೆಂಗಳೂರು ನಗರದಲ್ಲಿ ಇರತಕ್ಕಂಥ ಆಸ್ಪತ್ರೆಗಳಿಗೆ ಕೊಟ್ಟಿರತಕ್ಕಂಥ ದುಡ್ಡು, ಖರ್ಚುಮಾಡುತ್ತಿರುವುದನ್ನು ನೋಡಿದರೆ ಮೈಸೂರು, ಹುಬ್ಬಳ್ಳಿ, ಮಂಗಳೂರು ಆಸ್ಪತ್ರೆಗಳಿಗೆ ಕೊಟ್ಟಿರತಕ್ಕಂಥಾದ್ದು ಬಹಳ ಕಡಿಮೆ ಇರುತ್ತದೆ. ಹಾಗೂಖರ್ಚು ಮಾಡಿರುಕ್ಕಂಥಾದ್ದು ಕೂಡ ಬಹಳ ಕಡಿಮೆ ಇರುತ್ತದೆ. ಪ್ರಾವಿಷನ್ ಏನು ಮಾಡಿರುತ್ತಾರೆ ಅಷ್ಟನ್ನೂ ಕೂಡ ಖರ್ಚುಮಾಡುತ್ತಾ ಇಲ್ಲ ನಾನು ಬೆಂಗಳೂರು ಆಸ್ಪತ್ರೆಗೂ ಹೋಗಿ ನೋಡಿದ್ದೇನೆ, ಹುಬ್ಬಳ್ಳಿ ಆಸ್ಪತ್ರೆಗೂ ಹೋಗಿನೋಡಿದ್ದೇನೆ, ಅಲ್ಲಿ ಯಾವಾಗಲೂ ಹೋಗಿ ನೋಡಿದರೂ ಸರಿಯಾದ ಇನ್‌ಸ್ಟ್ರುಮೆಂಟ್ಸ್ ಇರುವುದಿಲ್ಲ. ಎಕ್ಸ್‌ರೆ ಇರುವುದಿಲ್ಲ. ಏನಾದರೂ ದೋಷವಿದ್ದು ರಿಪೇರಿಯಲ್ಲಿಯೇ ಇರುತ್ತದೆ. ಆದ್ದರಿಂದ ಬೆಂಗಳೂರು ಆಸ್ಪತ್ರೆಯಲ್ಲಿ ಯಾವರೀತಿ ಎಲ್ಲ ಸುಸಜ್ಜಿತವಾಗಿ ಇರುತ್ತದೆ, ಅದೇರೀತಿಯಲ್ಲಿ ಎಲ್ಲ ಇನ್‌ಸ್ಟ್ರುಮೆಂಟ್ಸ್‌ಗಳು ಎಕ್ಸ್‌ರೆ ಉಳಿದ ಆಸ್ಪತ್ರೆಗಳಲ್ಲೂ ಇರುವಂತೆ ವ್ಯವಸ್ಥೆಯನ್ನು ಮಾಡಬೇಕೆಂದು ಹೇಳುತ್ತೇನೆ.

ಇನ್ನು ಹಣವನ್ನು ಸಾಕಷ್ಟು ಆಸ್ಪತ್ರೆಗಳಿಗೆ ಕೊಡಬೇಕು. ಕೊಟ್ಟ ಹಣವನ್ನು ಸರಿಯಾದರೀತಿಯಲ್ಲಿ ಖರ್ಚುಮಾಡಬೇಕು ಹುಬ್ಬಳ್ಳಿ ಆಸ್ಪತ್ರೆಯಲ್ಲಿ ಬಿಲ್ಡಿಂಗ್‌ಗಾಗಿ ಕೊಟ್ಟಂಥ ಹಣವನ್ನು ಖರ್ಚ್ ಮಾಡಲೇ ಇಲ್ಲ. ಟಿ.ಬಿ. ಆಸ್ಪತ್ರೆಯನ್ನು ಕಟ್ಟಲು ಕೊಟ್ಟಂಥ ದುಡ್ಡನ್ನು ಅವರು ಖರ್ಚು ಮಾಡಲೇ ಇಲ್ಲ ಹಿಂದಿನ ವರ್ಷ ಆಸ್ಪತ್ರೆಯ ಅಧಿಕಾರಿಗಳು ಎಲ್ಲ ವಿವರಗಳನ್ನು ಕಳುಹಿಸಿಕೊಟ್ಟರೂ ಅದು ಕಾಗದಪತ್ರಗಳ ಓಡಾಟದಲ್ಲಿಯೇ ಮುಗಿಯಿತು ಆದ್ದರಿಂದ ದಯವಿಟ್ಟು ದುಡ್ಡನ್ನು ಖರ್ಚುಮಾಡತಕ್ಕಂಥ ವ್ಯವಸ್ಥೆಯನ್ನು ಮಾಡುತ್ತೀರಾ ಎಂದು ಕೇಳುತ್ತೇನೆ.

ಎರಡನೆಯದಾಗಿ ಪೋಸ್ಟ್‌ಗ್ರಾಜ್ಯುಯೇಟ್ಸ್ ಪರಿಣತರು ಏನು ಇರುತ್ತಾರೆ ಅವರನ್ನೆಲ್ಲ ಬೆಂಗಳೂರು ಆಸ್ಪತ್ರೆಯಲ್ಲಿಯೇ ಇರಿಸಿಕೊಳ್ಳುತ್ತಿರುವಿರಿ ಅಲ್ಲದೆ ಅವರನ್ನು ಮೈಸೂರು ಹುಬ್ಬಳ್ಳಿಗೆ ಟ್ರಾನ್ಸ್‌ಫರ್ ಮಾಡಿದರೆ ಹೋಗುವುದೇ ಇಲ್ಲ, ಇನ್ನು ಅನೇಕ ದೃಷ್ಟಿಯಿಂದ ಎಲ್ಲಕಡೆಗೂ ಇಂಥ ಪರಿಣತರನ್ನು ಕಳುಹಿಸಿಕೊಟ್ಟು ಅನುಕೂಲವನ್ನು ಕಲ್ಪಿಸಬೇಕು. ಆಜ್ಞೆಯನ್ನು ಮಾಡಿದರೆ ಸಾಲದು, ಆಚರಣೆಗೆ ಬರುವಂಥರೀತಿಯಲ್ಲಿ ತಾವು ನೋಡಿಕೊಳ್ಳಬೇಕು.

ಇನ್ನು ಆಯುರ್‌ವೇದಿಕ್ ಕಾಲೇಜ್ ಇರೂತ್ತದೆ. ಅಲ್ಲಿ ವಿದ್ಯಾರ್ಥಿಗಳು ಬಹಳ ತೊಂದರೆಯನ್ನು ಪಡುತ್ತಿರುತ್ತಾರೆ. ಅಲ್ಲಿ ಲೈಬ್ರರಿಇಲ್ಲ, ಟೀಚಿಂಗ್ ಸ್ಟಾಫ್ ಇಲ್ಲ ಕೂಡಲೇ ಎಲ್ಲ ವ್ಯವಸ್ಥೆಯನ್ನು ಮಾಡಬೇಕು. ಸರ್ಕಾರ ತೆಗೆದು ಕೊಂಡು ಮಾಡಲು ಸಾಧ್ಯವಿಲ್ಲದ್ದರೆ ಪ್ರೈವೇಟ್ ಮ್ಯಾನೇಜ್‌ಮೆಂಟ್ ಮುಖಾಂತರವಾದರೂ ವ್ಯವಸ್ಥೆಯನ್ನು ಮಾಡುತ್ತೀರಾ ಎಂದು ಕೇಳುತ್ತೇನೆ.

ಇನ್ನು ಔಷಧಿಗಳನ್ನು ಸರಬರಾಜು ಮಾಡುವಬಗ್ಗೆ ಪದೇ ಪದೇ ಈ ಮನೆಯಲ್ಲಿ ಹೇಳುತ್ತಲೇ ಇರುತ್ತೇವೆ. ಎಲ್ಲಕಡೆಗೂ ಬೆಂಗಳೂರಿನಿಂದಲೇ ಹೋಗತಕ್ಕಂಥ ವ್ಯವಸ್ಥೆ ಇರುತ್ತದೆ. ಇದನ್ನು ಡಿಸೆಂಟ್ರಲೈಸ್ ಮಾಡುತ್ತೇವೆಂದು ಹೇಳಿದ್ದೀರಿ ಬೆಂಗಳೂರಿನಿಂದ ನೀವು ಕಳುಹಿಸಿಕೊಡುವಂಥ ಔಷಧಿಯು ಆಸ್ಪತ್ರೆಗಳನ್ನು ಮುಟ್ಟುವುದರೊಳಗೆ ರೋಗಿಯು ಆಸ್ಪತ್ರೆಯನ್ನು ಬಿಟ್ಟು ಹೋಗಿರುತ್ತಾನೆ ಇಲ್ಲ ಈ ಲೋಕವನ್ನೇ ಬಿಟ್ಟು ಹೋಗಿರುತ್ತಾನೆ. ಆದ್ದರಿಂದ ಕೂಡಲೇ ಡಿವಿಜನ್‌ವೈಸ್ ಡಿಸೆಂಟ್ರಲೈಸ್ ಮಾಡತಕ್ಕಂಥ ವ್ಯವಸ್ಥೆಯನ್ನು ಆಚರಣೆಯಲ್ಲಿ ತರಬೇಕೆಂದು ಹೇಳುತ್ತೇನೆ.

ಇನ್ನು ಸರ್ಕಾರಿ ವೈದ್ಯರಿಗೆ ನಾನ್‌ಪ್ರಾಕ್ಟೀಸಿಂಗ್ ಅಲೋಯನ್ಸ್ ಎಂದು ಕೊಡುವ ವಿಚಾರ ಏನು ಇರುತ್ತದೆ, ಆ ವಿಚಾರದಬಗ್ಗೆ ಒಂದು ಖಚಿತವಾದ ಅಭಿಪ್ರಾಯವನ್ನು ಕೊಡಬೇಕು. ಕೊಡುತ್ತಾರೊ ಇಲ್ಲವೋ ತಿಳಿದಿಲ್ಲ. ಉಳಿದ ಸರಕಾರಗಳು ನಾನ್‌ಪ್ರಾಕ್ಟೀಸಿಂಗ್ ಅಲೋಯನ್ಸ್ ಎಂದು ಕೊಡುತ್ತಿರು ತ್ತಾರೆ. ಆದ್ದರಿಂದ ನಮ್ಮ ಸರ್ಕಾರದವರು ಆ ರೀತಿಯ ಒಂದು ವ್ಯವಸ್ಥೆಯನ್ನು ಮಾಡಬೇಕೆಂದು ಹೇಳುತ್ತೇನೆ.

ಶ್ರೀ ಎಂ. ಮಲ್ಲಪ್ಪ.—ಶ್ರೀಮಾನ್ ಬೊಮ್ಮಾಯಿ‌ರವರು ಹಣವನ್ನು ಅಲಾಟ್‌ಮಾಡತಕ್ಕಂಥ ಕಾಲದಲ್ಲಿ ಬೆಂಗಳೂರು ನಗರಕ್ಕೆ ಎಷ್ಟು ಹಣವನ್ನು ಕೊಡುತ್ತಾರೋ ಅಷ್ಟೇ ಹಣವನ್ನು ಬೇರೆ ಬೇರೆ ಆಸ್ಪತ್ರೆಗಳಿಗೂ ಕೊಡಬೇಕೆಂದು ಹೇಳಿರುತ್ತಾರೆ. ಬೆಂಗಳೂರು ಜನಸಂಖ್ಯೆಗೆ ಅನುಗುಣವಾಗಿ ಆಸ್ಪತ್ರೆಗಳು ಇರುತ್ತವೆ. ಅದಕ್ಕೆ ತಕ್ಕಂಥ ಹಣವನ್ನು ಒದಗಿಸಬೇಕಾಗಿರುತ್ತದೆ. ಮತ್ತು ಬೆಂಗಳೂರಿನಲ್ಲಿರತಕ್ಕಂಥ ಆಸ್ಪತ್ರೆಗಳಿಗೆ ಇಡಿ ರಾಜ್ಯದ ಜನರು ಇಲ್ಲಿಗೆ ಬರುತ್ತಾರೆ. ಹೆಚ್ಚಿನ ಮಟ್ಟದ ಪರಿಣತರ ಸೇವೆಯನ್ನು ಪಡೆಯಲು ಇಚ್ಛಿಪಡುತ್ತಾರೆ. ಆ ದೃಷ್ಟಿಯಿಂದ ಇಲ್ಲಿಯ ಆಸ್ಪತ್ರೆಗಳನ್ನು ಉನ್ನತ ಮಟ್ಟದಲ್ಲಿ ಏರಿಸಬೇಕೆಂಬುದನ್ನು ಅವರು ಒಪ್ಪಿಕೊಳ್ಳುತ್ತಾರೆಂದು ತಿಳಿದುಕೊಳ್ಳುತ್ತೇನೆ.

ಇನ್ನು ಆಸ್ಪತ್ರೆಗಳಿಗೆ ಕೊಡತಕ್ಕಂಥ ಅಗತ್ಯತೆಗಳಬಗ್ಗೆ ಹೇಳಿರುತ್ತಾರೆ, ಅದನ್ನು ನಾವು ಒಪ್ಪಿಕೊಳ್ಳುತ್ತೇವೆ. ಎಕ್ಸ್‌ರೆ ಯಂತ್ರದಬಗ್ಗೆ ಹೇಳಿದರು, ಮಾನ್ಯ ಬೊಮ್ಮಾಯಿಯವರು ಇತ್ತೀಚೆಗೆ ಹುಬ್ಬಳ್ಳಿ ಆಸ್ಪತ್ರೆಗೆ ಹೋಗಿಲ್ಲವೆಂದು ಕಾಣುತ್ತದೆ ಅಲ್ಲಿರುವ ಯಾವ ಎಕ್ಸ್‌ರೇ ಯಂತ್ರವೂ ಕೆಟ್ಟಿಲ್ಲ. ನಾಲ್ಕು ವರ್ಷದಿಂದ ಕೆಟ್ಟಿದ್ದ ಎಕ್ಸ್‌ರೇಯಂತ್ರವನ್ನು ರಿಪೇರಿಮಾಡಲಾಗಿದೆ. ಮತ್ತೆ ಮೂರು ಹೆಚ್ಚಿಗೆ ಎಕ್ಸ್‌ರೇ ಯಂತ್ರವನ್ನು ಕೊಟ್ಟಿರುತ್ತದೆ. ಅಲ್ಲಿ ನೀರಿನ ವ್ಯವಸ್ಥೆಯನ್ನೂ ಕೂಡ ಉತ್ತಮಪಡಿಸಲಾಗಿದೆ. ಟಿ. ಬಿ. ಬಾಗಕ್ಕೂ ಏನೇನು ಸೌಕರ್ಯಗಳು ಬೇಕಾಗಿರುತ್ತದೋ ಅದನ್ನೆಲ್ಲವನ್ನು ಅತಿಶೀಘ್ರವಾಗಿ ಒದಗಿಸಲು ಪ್ರಯತ್ನಮಾಡುತ್ತೇನೆ.

ಇನ್ನು ನಾನ್‌ಪ್ರಾಕ್ಟೀಸಿಂಗ್ ಅಲೋಯನ್ಸ್‌ಬಗ್ಗೆ ಹೇಳಿದರು. ಅದನ್ನು ಅಂಗೀಕರಿಸುವುದು ಬಹಳ ಸುಲಭ ಆದರೆ ಅದನ್ನು ಕಾರ್ಯಗತಮಾಡುವುದು ಅಂದರೆ ಅವರಿಗೆ ಎಷ್ಟು ಹಣವನ್ನು ಕೊಡಬೇಕು ಎನ್ನುವುದರಬಗ್ಗೆ ವಿಚಾರ ಮಾಡಬೇಕಾಗಿರುತ್ತದೆ. ಈ ಬಗ್ಗೆ ಒಂದು ಕಮಿಟಿಯನ್ನು ನೇಮಕ ಮಾಡಬೇಕಾಗಿರುತ್ತದೆ. ಚೀಫ್‌ಸೆಕ್ರೆಟರಿಯವರ ಅಧ್ಯಕ್ಷತೆಯಲ್ಲಿ ಹೆಲ್ತ್‌ಕಮಿಷನರ್. ಡೈರೆಕ್ಟರ್ ಇವರನ್ನೊಳಗೊಂಡ ಕಮಿಟಿಯನ್ನು ನೇಮಕಮಾಡಿ ಅವರು ಮತ್ತು ಮೆಡಿಕಲ್ ಅಸೋಷಿಯೇಷನ್ ಅವರು, ಟೀಚರ್ಸ್ ಅಸೋಷಿಯೇಷನ್‌ರವರು ಏನು ಅಭಿಪ್ರಾಯಪಡುತ್ತಾರೋ ಆ ಬಗ್ಗೆ ಒಂದು ಅಂತಿಮ ತೀರ್ಮಾನವನ್ನು ಕೈಗೊಳ್ಳಬೇಕೆಂದು ಸರ್ಕಾರ ಕಾರ್ಯಕ್ರಮ ಹಾಕಿಕೊಂಡಿದೆ.

ಇನ್ನು ಶ್ರೀ ಜಿ. ಬಿ. ಶಂಕರ್‌ರಾವ್‌ರವರು ಹೇಳಿದರು ಕಮ್ಯುನಿಟಿ ವರ್ಕ್‌ರ್ಸ್ ೧೦೦೦ ಜನಕ್ಕೂ ಹೆಚ್ಚು ಇರುತ್ತಾರೆ, ಒಬ್ಬ ಆರೋಗ್ಯ ಕಾರ್ಯಕರ್ತನನ್ನು ನೇಮಕ ಮಾಡತಕ್ಕಂಥಾ ಕಾಲದಲ್ಲಿ ಸಂಬಂಧಪಟ್ಟ ಪಂಚಾಯತಿ ಬೋರ್ಡ್‌ನವರ ಸಲಹೆಯನ್ನು ತೆಗೆದುಕೊಂಡು ಮಾಡತಕ್ಕಂಥಾದ್ದು ಸೂಕ್ತವೆಂದು ಹೇಳಿರುತ್ತಾರೆ. ನಾನಾದರೂ ಹೇಳುವುದೇನೆಂದರೆ ನಾನು ನೀವು ಪ್ರಜಾಪ್ರಭುತ್ವದಲ್ಲಿ ನಂಬಿಕೆ ಇರತಕ್ಕಂಥವರಾಗಿರುತ್ತೇವೆ. ಅವರೂ ಕೂಡ ಓಟನ್ನು ಪಡೆದು ಬಂದಿರತಕ್ಕಂಥವರೇ ಆಗಿರುತ್ತಾರೆ. ಶಾಸಕರು, ಪಂಚಾಯತಿ ಬೋರ್ಡ್‌ನವರು, ಸಾರ್ವಜನಿಕ ಮುಖಂಡರು ಇಂಥ ಕಾರ್ಯಕರ್ತರು ಸರಿಯಾಗಿ ಕೆಲಸ

ಮಾಡುತ್ತಿಲ್ಲ, ಅಸಮರ್ಥರಿರುತ್ತಾರೆಂದು ಅಭಿಪ್ರಾಯಪಟ್ಟರೆ ಪುನರ್ ಆಲೋಚನೆ ಮಾಡುವುದಕ್ಕೆ ಯಾವ ಬಾಧಕವೂ ಇಲ್ಲವೆಂದು ಹೇಳುವುದಕ್ಕೆ ಇಚ್ಛೆಪಡುತ್ತೇನೆ.

ಶ್ರೀ ರಮೇಶ್‌ಕುಮಾರ್ ಅವರು ಕೋಲಾರ ಟಿ ಬಿ. ಆಸ್ಪತ್ರೆಯ ಬಗ್ಗೆ ಮಾತನಾಡುತ್ತಾ ಹಾಸಿಗೆಗಳ ಸಂಖ್ಯೆಯನ್ನು ಜಾಸ್ತಿಮಾಡಬೇಕೆಂದು ಹೇಳಿದರು. ಇದನ್ನು ಒದಗಿಸಬೇಕಾಗಿರುವುದು ಭಾರತ ಸರ್ಕಾರದವರು. ಅವರೇ ಇದಕ್ಕೆ ಬೇಕಾದ ಔಷಧಿಗಳನ್ನು ಕೂಡ ಒದಗಿಸುತ್ತಿದ್ದಾರೆ. ಸಾಮಾನ್ಯವಾಗಿ ಈ ರೋಗಕ್ಕೆ ಒಳಗಾದವರನ್ನು ಬೇರೆಯವರು ಮುಟ್ಟಲು ಅಸಹ್ಯಪಡುವುದರಿಂದ ರೋಗ ಮತ್ತಷ್ಟು ಉಲ್ಬಣವಾಗುವ ಪರಿಸ್ಥಿತಿ ಇರುತ್ತದೆ. ಆದ್ದರಿಂದ ಮನೆಯಲ್ಲಿಯೇ ಟ್ರೀಟ್‌ಮೆಂಟ್ ಕೊಡಲು ಸಾಧ್ಯವಿರುತ್ತದೆ. ಆಸ್ಪತ್ರೆಗೆ ಸೇರಲೇಬೇಕು ಎನ್ನುವ ಸಂದರ್ಭವಿದ್ದರೆ ಮಾತ್ರ ಆಸ್ಪತ್ರೆಯಲ್ಲಿ ಉಪಚಾರ ಪಡೆಯುವುದಕ್ಕೆ ಎಲ್ಲ ಸೌಕರ್ಯಗಳನ್ನು ಒದಗಿಸುತ್ತೇವೆ ಅದೇರೀತಿ ಡೋಮಿಸೈಲರಿ ಟ್ರೀಟ್‌ಮೆಂಟ್ ಕೊಡಲು ಎಲ್ಲೆಲ್ಲಿ ಅನುಕೂಲವಿರುತ್ತದೆ ಅಲ್ಲಿ ಎಲ್ಲ ಸೌಕರ್ಯಗಳನ್ನು ಕೊಡಲಿಕ್ಕೆ ಪ್ರಯತ್ನ ಮಾಡುತ್ತೇನೆ.

ಶ್ರೀ ಚೌಡಯ್ಯನವರು ಅನೇಕ ವಿಷಯಗಳನ್ನು ಪ್ರಸ್ತಾಪ ಮಾಡಿದರು. ತಾಲ್ಲೂಕು ಅಭಿವೃದ್ಧಿ ಮಂಡಳಿಯ ಆಸ್ಪತ್ರೆಗಳನ್ನು ಸರ್ಕಾರದವರು ತೆಗೆದುಕೊಂಡಮೇಲೆ ಐದು ವರ್ಷಗಳಿಂದ ಅವರಿಗೆ ಯಾವ ವಿಧವಾದ ಗ್ರಾಂಟನ್ನು ಕೊಟ್ಟಿಲ್ಲ, ಏತಕ್ಕೆ ಕೊಟ್ಟಿಲ್ಲವೆಂದು ಕೇಳಿದರು.

ಸ್ವಾಮಿ, ಹಿಂದೆ ಅವರಿಗೆ ಸರ್ಕಾರದಿಂದ ಏನು ಬಾಕಿ ಕೊಡಬೇಕಾಗಿತ್ತು ಅದನ್ನು ಕೊಡುವುದಿಲ್ಲ ಎಂಬ ಕಂಡೀಷನ್ ಇತ್ತು. ಈಗ ಅದನ್ನು ರದ್ದು ಮಾಡಿ ಅವರಿಗೆ ಏನೇನು ಕೊಡಬೇಕೋ ಅದನ್ನು ಕೊಡಬೇಕೆಂದು ತೀರ್ಮಾನ ಮಾಡಿದೆ. ೫ ವರ್ಷಗಳ ಕಾಲ ವಂತಿಕೆಯನ್ನು ಕೊಡಬೇಕೆಂದು ಯಾತಕ್ಕೆ ಹೇಳಿದ್ದೇವೆಂದರೆ ಸರ್ಕಾರ ವೈದ್ಯರುಗಳಿಗೆ ಮತ್ತು ಇತರ ಸಿಬ್ಬಂದಿ ವರ್ಗದವರಿಗೆ ವಾಸಕ್ಕೆ ಕಟ್ಟಡಗಳನ್ನು ಕಟ್ಟಿಸಿಕೊಡಬೇಕಾಗಿದೆ. ಕಟ್ಟಡಗಳನ್ನು ಕಟ್ಟಿಸಿದ ಮೇಲೆ ಅದರಿಂದ ಬರತಕ್ಕ ಬಾಡಿಗೆಯನ್ನು ಅವರೇ ತೆಗೆದುಕೊಂಡರೆ ಅವರ ಉತ್ಪನ್ನವೇ ಹೆಚ್ಚಾಗುತ್ತದೆ. ಆ ದೃಷ್ಟಿಯಿಂದ ಇದು ಸೂಕ್ತವೆಂದು ನಾನು ಭಾವಿಸುತ್ತೇನೆ, ಮತ್ತು ಮಾನ್ಯ ಸದಸ್ಯರಾದ ಚೌಡಯ್ಯನವರು ಮಂಡ್ಯ ಜಿಲ್ಲೆಗೆ ಒಂದು ಎಕ್ಸರೇ ಯಂತ್ರವನ್ನು ಕೊಟ್ಟಿಲ್ಲ ಎಂದು ಹೇಳಿದರು. ದಾಮಾಷ ಪ್ರಕಾರ ಹಂಚುವುದಕ್ಕೆ ಹೋದರೆ ಹಳೇ ಮೈಸೂರಿಗೆ ಕೊಡುವುದನ್ನೇ ನಿಲ್ಲಿಸಬೇಕಾಗುತ್ತದೆ. ಏಕೆಂದರೆ ಹೊಸ ಮೈಸೂರು ಭಾಗದಲ್ಲಿ ಇಲ್ಲಿರುವಷ್ಟು ಎಕ್ಸರೇ ಯಂತ್ರಗಳಿಲ್ಲ, ಆಸ್ಪತ್ರೆಗಳಿಲ್ಲ, ವೈದ್ಯರುಗಳಿಲ್ಲ. ಆದರೂ ಕೂಡ ಹಳೇ ಮೈಸೂರು ಭಾಗದಲ್ಲಿ ಹೆಚ್ಚು ಹೆಚ್ಚು ಸೌಲಭ್ಯವನ್ನು ನೀಡುತ್ತಿದ್ದೇವೆ. ಮಂಡ್ಯದಿಂದ ರಿಪೋರ್ಟ್ ತರಿಸಿದಾಗ ಜಿಲ್ಲೆಯ ಆರೋಗ್ಯಾಧಿಕಾರಿಗಳು ಕೇಳಿದರೆ ನಾವು ಕೊಡುತ್ತೇವೆ. ಎಲ್ಲೆಲ್ಲಿ ಅವಶ್ಯಕತೆ ಇದೆಯೋ ಅಲ್ಲೆಲ್ಲಾ ಎಕ್ಸ್‌ರೇ ಯಂತ್ರಗಳನ್ನು ಒದಗಿಸುವುದಕ್ಕೆ ಪ್ರಯತ್ನಪಡುತ್ತೇವೆ. ಈ ವರ್ಷ ಮಂಡ್ಯ ಜಿಲ್ಲೆಯನ್ನು ಮರೆಯುವುದಲ್ಲ ಎಂಬ ಮಾತನ್ನು ನಾನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಆಮೇಲೆ ಮಾನ್ಯ ಸದಸ್ಯರು ೬ ಸಾವಿರ ರೂಪಾಯಿನ ಔಷಧಿಗಳು ಕೊಡುತ್ತಿರುವುದು ಸಾಲದು ಎಂದು ಹೇಳಿದ್ದಾರೆ. ಎಲ್ಲಿಗೆ ಔಷಧಿಗಳು ಬೇಕು ಎಂಬುದನ್ನು ತಿಳಿಸಿದರೆ ಅಲ್ಲಿಗೆ ಕೊಡಲು ನಾವು ಏರ್ಪಾಡು ಮಾಡುತ್ತೇವೆ. ನಮ್ಮ ಮೆಡಿಕಲ್ ಸ್ಟೋರ್ಸ್‌ನಲ್ಲಿ ಸಾಕಷ್ಟು ದಾಸ್ತಾನು ಇದೆ. ಎಂಥ ಕಡೆ ಅವಶ್ಯಕತೆ ಇದೆ ಎಂದು ವೈದ್ಯಾಧಿಕಾರಿಗಳಿಂದ, ಜಿಲ್ಲಾ ವೈದ್ಯಾಧಿಕಾರಿಗಳಿಂದ ಬೇಡಿಕೆ ಬರುತ್ತದೋ ಅಲ್ಲೆಲ್ಲಾ ಸಾಕಷ್ಟು ಔಷಧಗಳನ್ನು ಒದಗಿಸುವುದಕ್ಕೆ ಪ್ರಯತ್ನ ಮಾಡುತ್ತೇವೆ. ಇನ್ನು ಮಲೇರಿಯಾ ಹಾವಳಿ ಬಗ್ಗೆ ಮಾನ್ಯ ಸದಸ್ಯರು ಹೇಳಿದ್ದಾರೆ, ಮಲೇರಿಯಾ ಮಂಡ್ಯ ಜಿಲ್ಲೆಯಲ್ಲಿ ಮಾತ್ರ ಹೆಚ್ಚಾಗುತ್ತಿದೆ, ಆದ್ದರಿಂದ ಟೀಮ್ ಆಫ್ ವರ್ಕರ್ಸ್ ಕಳಿಸಿ ಇದನ್ನು ಹತೋಟಿಗೆ ತರುವುದಕ್ಕೆ ಪ್ರಯತ್ನ ಮಾಡುತ್ತೇವೆ. Modified scheme for Malaria Control–ಕೂಡ ಜಾರಿಗೆ ಬರುತ್ತಿದೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ಸ್ವಾಮಿ, ಈ ಮನೆಯಲ್ಲಿ ಕುಳಿತಿರುವಾಗ ಮಾನ್ಯ ಸದಸ್ಯರಾಗಲೀ ಮಂತ್ರಿಗಳಾಗಲೀ ಎಲೆ ಅಡಿಕೆಯನ್ನು ಹಾಕಿಕೊಳ್ಳಬಹುದೇ? ಹಿಂದೆ ಒಂದು ಬಾರಿ ಶ್ರೀಮಾನ್ ವೈಕುಂಠ ಬಾಳಿಗಾ ಅವರು ಅಧ್ಯಕ್ಷರಾಗಿದ್ದಾಗ ಈ ಮನೆಯಲ್ಲಿ ಎಲೆ ಅಡಿಕೆಯನ್ನು ಹಾಕಿಕೊಳ್ಳುವುದು ಸರಿಯಲ್ಲ ಎಂದು ಹೇಳಿದ್ದಾರೆ. ಆದರೆ ಮಾನ್ಯ ಬಸವಲಿಂಗಪ್ಪನವರು ಇಲ್ಲಿ ಎಲೆ ಅಡಿಕೆ ಹಾಕಿಕೊಳ್ಳುತ್ತಿದ್ದಾರೆ.

ಶ್ರೀ ಕೆ. ಹೆಚ್. ರಂಗನಾಥ್,—ಹೊರಗಡೆಯಿಂದ ಹಾಕಿಕೊಂಡು ಬಂದು ಇಲ್ಲಿ ಅಗಿಯುತ್ತಿದ್ದಾರೆ.

ಅಧ್ಯಕ್ಷರು.—ಅವರ ಬಾಯಲ್ಲಿದ್ದರೆ ನಾನೇನೂ ಮಾಡುವುದಕ್ಕಾಗುವುದಿಲ್ಲ. (ನಗು)

ಶ್ರೀ ಎಂ. ಮಲ್ಲಪ್ಪ.—ಮಾನ್ಯ ಸದಸ್ಯರಾದ ಪಿ. ರಾಂದೇವ್ ಅವರು ಕೆಲವು ಖಾಸಗಿ ನರ್ಸಿಂಗ್ ಹೋಂನಲ್ಲಿ ಆಗಿರತಕ್ಕ ಅನಾಹುತಗಳ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ಆ ವಿಷಯ ಏನು ಎಂಬುದನ್ನು ನಾನು ವಿಚಾರಣೆ ಮಾಡುತ್ತೇನೆ, ಅವರು ಇಂಡಿವಿಜುಯಲ್ ಕೇಸ್ ಹೇಳಿದ್ದಾರೆ. ಆದ್ದರಿಂದ ಅದರ ಬಗ್ಗೆ ನನ್ನ ಹತ್ತಿರ ಈಗ ಮಾಹಿತಿ ಇಲ್ಲ. ಅದನ್ನು ನಾನು ನೋಡುತ್ತೇನೆ, ಮತ್ತು ಅವರು ಇನ್ನೊಂದು ಮಾತನ್ನು ಹೇಳಿದರು—ಈ ವರ್ಷವನ್ನು ಮಕ್ಕಳ ವರ್ಷ ಎಂದು ಮಾಡಿದ್ದಾರೆ, ಆದರೆ ಇದನ್ನು ಮಕ್ಕಳಿಲ್ಲದವರ ವರ್ಷ ಎಂದು ಮಾಡಬೇಕು ಎಂದು ಹೇಳಿದರು. ಅವರಿಗೆ ಇದನ್ನು ಹೇಳುವುದೇನೋ ಸುಲಭ. ಏಕೆಂದರೆ ಅವರು ಇದನ್ನು ೧೦೦ ಕ್ಕೆ ೧೦೦ ರಷ್ಟು ಪಾಲಿಸಬಹುದು. ಆದರೆ ಈ ವರ್ಷ ಮದುವೆಯಾದವರ ಗತಿ ಏನು?

ಶ್ರೀ ಪಿ. ರಾಂದೇವ್.—ಮಕ್ಕಳು ಇಲ್ಲದ ವರ್ಷ ಎಂದು ಚೈನಾದಲ್ಲಿ ಮಾಡಿದ್ದಾರೆ. ಹಾಗೆ ಇಲ್ಲೂ ಮಾಡಿ ಎಂದು ನಾನು ಹೇಳಿದೆ.

ಶ್ರೀ ಎಂ. ಮಲ್ಲಪ್ಪ.—ಅದನ್ನು ಪ್ರಚಾರ ಮಾಡೋಣ. ಇದರಿಂದ ಒಳ್ಳೆಯ ಫಲಿತಾಂಶ ಸಿಕ್ಕಿದರೆ ತಮ್ಮ ಆತ್ಮಕ್ಕೂ ಶಾಂತಿಯಾಗುತ್ತದೆ ಎಂದು ನನ್ನ ಭಾವನೆ.

ಶ್ರೀ ಎ. ಲಕ್ಷ್ಮೀಸಾಗರ.—ತಮ್ಮ ಆತ್ಮಕ್ಕೆ ಸಮಾಧಾನವಾಗುವುದಿಲ್ಲವೇ?

ಶ್ರೀ ಎಂ. ಮಲ್ಲಪ್ಪ.—ಅವರ ಆತ್ಮ, ನನ್ನ ಆತ್ಮ ಎರಡೂ ಒಂದೇ,

ಶ್ರೀ ಎಸ್. ಆರ್ ಬೊಮ್ಮಾಯಿ.—ನಿಮ್ಮ ಆತ್ಮಕ್ಕೂ ಅವರ ಆತ್ಮಕ್ಕೂ ಬಹಳ ಅಂತರ ಇದೆ· ರಾಂದೇವ್ ಅವರು ಬ್ರಹ್ಮಚಾರಿಗಳು, ಅವರ ಆತ್ಮ ಬ್ರಹ್ಮಚಾರಿಗಳ ಆತ್ಮ. ಆದರೆ ತಾವು ತಂದೆಯಾಗಿದ್ದೀರಿ. ಆದ್ದರಿಂದ ನಿಮ್ಮ ಆತ್ಮ ಅವರ ಆತ್ಮ ಎರಡೂ ಒಂದೇ ಹೇಗೆ ಆಗುತ್ತದೆ?

ಶ್ರೀ ಎಂ. ಮಲ್ಲಪ್ಪ.—ದೇಹ ಬೇರೆ, ಆದರೆ ಆತ್ಮ ಒಂದೆ. ಮಾನ್ಯ ಸದಸ್ಯರಾದ ಎಸ್. ಎಸ್. ಅರಕೇರಿಯವರು ಅನೇಕ ವಿಷಯಗಳನ್ನು ಪ್ರಸ್ತಾಪ ಮಾಡಿದರು. ನಾನು ಒಂದು ಮಾತನ್ನು ಸಂತೋಷದಿಂದ ಹೇಳುತ್ತೇನೆ, ಇವತ್ತು ಷೆಡ್ಯೂಲ್ಡ್ ಕ್ಯಾಸ್ಟ್ ಅಭ್ಯರ್ಥಿಗಳಲ್ಲಿ ನಿರುದ್ಯೋಗಿ ವೈದ್ಯರುಗಳೇನಿದ್ದರು ಅವರಲ್ಲಿ ೩೦೦ ಜನರಿಗೆ ಹುದ್ದೆಗಳನ್ನು ಒದಗಿಸಿಕೊಟ್ಟಿದ್ದೇವೆ.

ಅಧ್ಯಕ್ಷರು.—ಸಮತೂಕವನ್ನು ಸರಿಪಡಿಸುತ್ತೀರಾ ಎಂದು ಕೇಳಿದ್ದಾರೆ.

SRI M. MALLAPPA.—There are r cruitment rules. We have to follow certain rules and regulations. Reservations made are observed If reservations were not observed in the past whether it can be compensated is a matter for consideration. ಈಗ ಅವರಿಗೆ ಏನೂ ತೊಂದರೆ ಇಲ್ಲ. ಅವರು ಪ್ಯಾರಾ ಮೆಡಿಕಲ್ ಸ್ಟಾಫ್ ಬಗ್ಗೆ ಹೇಳಿದರು. ಅವರಿಗೆ ಏನು ರೂಲ್ಸ್ ಅನುಸರಿಸಬೇಕೋ ಅದನ್ನನುಸರಿಸಿ ಎಲ್ಲರಿಗೂ ಸಾಧ್ಯವಿದ್ದಷ್ಟು ಒದಗಿಸುವುದಕ್ಕೆ ಪ್ರಯತ್ನಮಾಡಿದೆ. Imbalance make up ಮಾಡುವ ಬಗ್ಗೆ ಸರ್ಕಾರ ಆಲೋಚನೆ ಮಾಡುತ್ತದೆ.

ಶ್ರೀ ಎಸ್. ಎಸ್. ಅರಕೇರಿ.—೫೦೦ ಜನ ಬೇಸಿಕ್ ಹೆಲ್ತ್ ವರ್ಕರ್ಸನ್ನು ಸೆಲೆಕ್ಟ್ ಮಾಡಿ ಎರಡು ವರ್ಷದಿಂದ ಅವರಿಗೆ ಕೆಲಸ ಕೊಡದೇ ಕೊಳೆಸುತ್ತಿದ್ದೀರಿ. ಅವರ ಗತಿ ಏನು? ಲಕ್ಷಾಂತರ ರೂಪಾಯಿ ಖರ್ಚು ಮಾಡಿ ಇಂಟರ್‌ವ್ಯೂ ಮಾಡಿ ಸೆಲೆಕ್ಟ್ ಮಾಡಿದರೂ ಅಪಾಯಿಂಟ್‌ಮೆಂಟ್ ಆರ್ಡರ್ ಕೊಟ್ಟಿಲ್ಲ.

ಶ್ರೀ ಎಂ. ಮಲ್ಲಪ್ಪ.—ಈಗ ಆ ಬಗ್ಗೆ ನನ್ನ ಹತ್ತಿರ ಮಾಹಿತಿ ಇಲ್ಲ. ರೆಕ್ರೂಟ್‌ಮೆಂಟ್ ಕಮಿಟಿಯವರು ಸೆಲೆಕ್ಟ್ ಮಾಡಿದ್ದಾರೆ. ಹುದ್ದೆಗಳು ಖಾಲಿಯಾದಾಗ ಅಪಾಯಿಂಟ್‌ಮೆಂಟ್ ಮಾಡಿಕೊಳ್ಳುತ್ತೇವೆ. ಈಗ ಹುದ್ದೆಗಳು ಖಾಲಿ ಇಲ್ಲದಿರುವುದರಿಂದ ಇನ್ನೂ ಅಪಾಯಿಂಟ್‌ಮೆಂಟ್ ಮಾಡಿಕೊಂಡಿಲ್ಲ. ಕೆಲವರನ್ನು ಮಾಡಿಕೊಂಡಿದ್ದೇವೆ.

ಶ್ರೀ ಎಸ್. ಎಸ್. ಅರಕೇರಿ.—೫೦೦ ಜನ ಕೆಲಸವಿಲ್ಲದೆ ನಿರುದ್ಯೋಗಿಗಳಾಗಿದ್ದಾರೆ.

ಶ್ರೀ ಎಂ. ಮಲ್ಲಪ್ಪ.—೩೧ ಮಾತ್ರ ಖಾಲಿ ಹುದ್ದೆಗಳಿದ್ದು ೩೧ ಜನರಿಗೆ ಅಪಾಯಿಂಟ್‌ಮೆಂಟ್ ಕೊಟ್ಟಿದೆ ಬಾಕಿಯವರಿಗೆ ಕೊಡಲಾಗಿಲ್ಲ. ಕಾರಣ ವೇಕೆನ್ಸಿ ಇರಲಿಲ್ಲ. ಈಗ ಮತ್ತೆ ಆರೋಗ್ಯ ಇಲಾಖೆಯಿಂದ ನೋಟಿಫೈ ಮಾಡಲಾಗಿದೆ. ಇವರೂ ಕೂಡ ಅರ್ಜಿ ಹಾಕಿಕೊಳ್ಳಲಿ. ಆಗ...

SRI S. S. ARAKERI.—May I know when posting orders will be issued? They were eligible for selection. They have been watching like dumb animals. I want to know whether there is any salvation for them.

SRI M. MALLAPPA.—If they are eligibie for selection, let them apply and get selected.

ಶ್ರೀ ಕಡಿದಾಳ್ ದಿವಾಕರ್.—೩೧ ಹುದ್ಧೆಗಳು ಮಾತ್ರ ಖಾಲಿ ಇದ್ದರೆ ೫೦೦ ಜನರನ್ನು ಏತಕ್ಕೆ ಸೆಲೆಕ್ಟ್ ಮಾಡಿದಿರಿ?

ಶ್ರೀ ಎಸ್. ಎಸ್. ಅರಕೇರಿ.—೫೦೦ ಪೋಸ್ಟ್‌ಗಳನ್ನು ನೋಟಿಫೈ ಮಾಡಿ ಅಡ್‌ವರ್‌ಟೈಸ್ ಮಾಡಿ ಎರಡು ವರ್ಷದವರೆಗೆ ಇಂಟರ್‌ವ್ಯೂ ಮಾಡಿ ಸೆಲೆಕ್ಟ್ ಮಾಡಿ ಈಗ ೩೧ ಜನರಿಗೆ ಮಾತ್ರ ಕೆಲಸ ಕೊಟ್ಟಿದ್ದೇವೆ ಎಂದು ಹೇಳಿದರೆ ಉಳಿದ ೪೭೦ ಜನರ ಗತಿ ಏನು? ಅವರಿಗೆ ಈಗ ಏಜ್ ಬಾರ್ ಆಗಿದೆ, ಲಗ್ನವಾಗಿದೆ. ಅವರ ಗತಿ ಏನು ಸ್ವಾಮಿ?

ಶ್ರೀ ಭೀಮಣ್ಣ ಖಂಡ್ರೆ.—ಮಾನ್ಯ ಮಂತ್ರಿಗಳ ಗಮನಕ್ಕೆ ಈ ವಿಷಯವನ್ನು ೧೦ ಸಾರಿ ತಂದಿದ್ದೇನೆ. ಡೈರೆಕ್ಟರ್ ಅವರ ಗಮನಕ್ಕೆ ೨೦ ಸಾರಿ ತಂದಿದ್ದೇನೆ. ನಮ್ಮ ಬೀದರ್ ಜಿಲ್ಲೆಯಲ್ಲೂ ಬೇಸಿಕ್ ಹೆಲ್ತ್ ವರ್ಕರ್ಸ್ ತಮಗೆ ಉದ್ಯೋಗವನ್ನು ಒದಗಿಸಬೇಕೆಂದು ಮುಷ್ಕರ ಮಾಡಿದ್ದರು. ಈ ರೀತಿ ಸೆಲೆಕ್ಟ್ ಮಾಡಿ ಉದ್ಯೋಗ ಕೊಡದೇ ಇರುವುದು ಏತಕ್ಕೆ. ಒಂದು ವೇಳೆ ವೇಕೆನ್ಸಿ ಇಲ್ಲದಿದ್ದರೆ ನೋಟಿಫೈ ಮಾಡಿ ಸೆಲೆಕ್ಟ್ ಏತಕ್ಕೆ ಮಾಡಿದಿರಿ? ತಪ್ಪಾಗಿ ಈ ಕೆಲಸ ಮಾಡಿದ್ದರೆ ತಪ್ಪಿತಸ್ಥರ ಮೇಲೆ ಕ್ರಮ ತೆಗೆದುಕೊಂಡಿದ್ದೀರಾ? ಯಾರನ್ನಾದರೂ ಸಸ್ಪೆಂಡ್ ಮಾಡಿದ್ದೀರಾ ಈಗ ಸೆಲೆಕ್ಟ್ ಮಾಡಿರುವ ಅಭ್ಯರ್ಥಿಗಳನ್ನು ಯಾವಾಗ ಕೆಲಸಕ್ಕೆ ತೆಗೆದುಕೊಳ್ಳುತ್ತೀರಿ? ಇವರಿಗೆ ಏನು ಪರಿಹಾರ ಮಾಡುತ್ತೀರಿ? ಅಪಾಯಿಂಟ್‌ಮೆಂಟ್ ಮಾಡುತ್ತೀರೋ ಇಲ್ಲವೋ? ಮಾಡದೇ ಇದ್ದರೆ ಇವರನ್ನು ಏನು ಮಾಡಬೇಕೆಂದಿದ್ದೀರಿ? ಸೆಲೆಕ್ಟ್ ಆಗಿರುವಲ್ಲಿ ಬಹಳ ಮಂದಿಗೆ ಏಜ್ ಬಾರ್ ಆಗಿದೆ.

SRI S. S. ARAKERI.—They were selected. If there were no vacancies, what was the necsssity to notify?

SRI M. MALLAPPA.—It is a genuine mistake. The recruitment committee had to select 31 and they selected 500. It is a genuine mistake committed by the Departmental Recruitment Committee. Instead of 31 they have selected 310. There was no need for that. Due action will be taken after enquiry.

SRI BHEEMANNA KHANDRE.—What about these candidates?

SRI K. BHASKARNAIDU—It is not a genuine mistake but a blunder. Can there be such a thing? A mistake is different from blunder.

SRI M. MALLAPPA.—This mistake is committed about 2 years back.

ಶ್ರೀ ಎಂ. ಮಲ್ಲಪ್ಪ.—ಎಲ್ಲರನ್ನೂ ಅಪಾಯಿಂಟ್ ಮಾಡಿಸುವುದಕ್ಕೆ ನಾನು ಪ್ರಯತ್ನ ಮಾಡಿದೆ. ಆದರೆ ಆಗ ಎಕಾನಮಿ ಆರ್ಡರ್ ಇದ್ದುದರಿಂದ ಎಲ್ಲರನ್ನೂ ತೆಗೆದುಕೊಳ್ಳುವುದಕ್ಕೆ ಸಾಧ್ಯವಾಗಲಿಲ್ಲ.

SRI G. B. SHANKAR RAO.—Sir, it is not the mistake of the Department, it is the mistake of the Recruitment Committee. The Department is helpless and they say that those candidates may seek their fortune elsewhere. What steps do Government purpose to take to employ these candidates?

SRI M. MALLAPPA.- Sir the hon. member says that there is no fault on the part of the Dpartment. But, no humanitarian grounds, we have again notified, and if there are eligible candidates let them apply. We have about 500 vacancies in different categories in the Department.

SRI K. BHASKAR NAIDU —The Hon'ble Minister should definitely tell us why the Recruitment Committee selected them?

ಶ್ರೀ ಭಿ.ವುಣ್ಣ ಖಂಡ್ರೆ.—ತಾವು ಈ ಬಗ್ಗೆ ಆಶ್ವಾಸನೆಯನ್ನು ಕೊಡಬೇಕಾಗಿದೆ ಇದರಲ್ಲಿ ಸೆಲೆಕ್ಟ್ ಆಗಿರುವಂತಹ ಅಭ್ಯರ್ಥಿಗಳ ಜೀವನದ ಪ್ರಶ್ನೆ ಇದರಲ್ಲಿದೆ. ಆದ್ದರಿಂದ ತಾವು ಇಲ್ಲಿ ಆ ಬಗ್ಗೆ ಯಾವುದಾದರೂ ಒಂದು ಖಚಿತವಾದ ಆಶ್ವಾಸನೆಯನ್ನು ಕೊಡಬೇಕಾಗಿದೆ. ಇಲ್ಲದಿದ್ದರ ನಾವು ಧರಣಿ ಮಾಡಬೇಕಾಗುತ್ತದೆ.

ಅಧ್ಯಕ್ಷರು.--ಆ ರೀತಿ ಧರಣಿ ಕುಳಿತರೆ ಮುಂದೆ ಏನು ಮಾಡಬೇಕೋ ಅದನ್ನು ಮಾಡಲಾಗುತ್ತದೆ

SRI M. MALLAPPA.—The hon. member cannot force an illegal action to be done by the Government. If they have willfully erred, action will be taken. But, on humanitarian grounds, I will have it examined. How can I give an assurance? I have got all the sympathy for them, but how can I do it?

ಶ್ರೀ ಎಸ್. ಎಸ್. ಅರಕೇರಿ.--ಈಗ ನೂತನವಾಗಿ ಬಂದಿರತಕ್ಕಂತಹ ಡೈರೆಕ್ಟರ್‌ರವರು ಹರಿಜನ-ಗಿರಿಜನರ ಬಗ್ಗೆ ಅನಾದಾರ ಮಾಡುತ್ತಿದಾರೆ. ಅದಕ್ಕೆ ತಮ್ಮಿಂದ ಉತ್ತರ ಬಂಲಿಲ್ಲ.?

SRI M. MALLAPPA.—I will strictly advice the concerned authorities in this behalf. There is no reason for any person to make any discriminatjon against any person and against any community. I do not think nobody could do it in the Government.

ಮತ್ತೆ ಮಾನ್ಯ ಶಾಮಣ್ಣನವರು ಟಿ. ಬಿ. ಆಸ್ಪತ್ರೆಯ ಬಗ್ಗೆ ಕೆಲವು ವಿಷಯಗಳನ್ನು ಪ್ರಸ್ತಾಪ ಮಾಡಿದ್ದಾರೆ. ಅವುಗಳನ್ನು ಪರಿಶೀಲನೆ ಮಾಡಿ ಅನುಕೂಲವಾಗುವಂತೆ ಸೂಕ್ತ ಕ್ರಮ ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತೇನೆ.

ಮತ್ತೆ ಶ್ರೀಮಾನ್ ಕಡಿದಾಳ್ ದಿವಾಕರ್ ರವರು ಕೆಲವು ವಿಚಾರಗಳನ್ನು ತಿಳಿಸಿದರು ಆದರ ಬಗ್ಗೆ ಈಗಾಗಲೇ ಒಂದು ಕಮಿಟಿಯನ್ನು ನೇಮಕ ಮಾಡಿದ್ದೇನೆ. ಆ ಕಮಿಟಿಯನ್ನು ಏನು ತೀರ್ಮಾನ ಕೊಡುತ್ತಾರೆಂಬುದನ್ನು ನೋಡಿಕೊಂಡು ಸರ್ಕಾರ ಅದರ ಬಗ್ಗೆ ತೀರ್ಮಾನ ತೆಗೆದುಕೊಳ್ಳುತ್ತದೆ. ಮತ್ತು ಸ್ಥಳೀಯ ಅಭ್ಯರ್ಥಿಗಳನ್ನು ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ವೈದ್ಯಾಧಿಕಾರಿಗಳನ್ನಾಗಿ ಹಾಕಬಾರದು. ಅಲ್ಲಿ ಅನುಭವ ಇರತಕ್ಕಂತಹವರನ್ನೇ ಹಾಕಬೇಕೆಂಬ ಸಲಹೆಯನ್ನು ಕೊಟ್ಟಿದ್ದಾರೆ. ಇದಕ್ಕೆ ಕಾರಣವೇನೆಂದರೆ, ಇರತಕ್ಕಂತಹ ವೇಕೆನ್ಸಿಯನ್ನು ಭರ್ತಿ ಮಾಡುವ ಸಲುವಾಗಿ ಸ್ಥಳೀಯ ಅಭ್ಯರ್ಥಿಗಳನ್ನು ನೇಮಕ ಮಾಡಲಾಗಿತ್ತು. ನುರಿತ ಅಭ್ಯರ್ಥಿಗಳನ್ನೇ ಅಲ್ಲಿಗೆ ನೇಮಕ ಮಾಡುವ ಬಗ್ಗೆ ತಾವು ಕೊಟ್ಟಂತಹ ಸಲಹೆಯನ್ನು ಗಮನದಲ್ಲಿಟ್ಟುಕೊಂಡು ಕೆಲಸ ಮಾಡುತ್ತೇವೆ. ಪ್ಯಾಕೇಜ್ ಇಂಡೆಂಟ್ ಬಗ್ಗೆ ಅನೇಕ ದೂರುಗಳು ಬರುತ್ತಿವೆ. ಅಗತ್ಯವಾದ ಔಷಧಿಗಳನ್ನು ಸರಬರಾಜು ಮಾಡುತ್ತಿಲ್ಲ, ಅನಗತ್ಯವಾದ ಔಷದಿಯನ್ನು ಸರಬರಾಜು ಮಾಡುತ್ತಿದ್ದಾರೆಂಬ ದೂರುಗಳನ್ನು ತಿಳಿಸಿದ್ದಾರೆ. ಅಲ್ಲಿರತಕ್ಕಂತಹ ವೈದ್ಯರು ಎಂತಹ ಔಷಧಿ ಬೇಕೆಂದು ತಿಳಿಸಬೇಕು. ಅಥವಾ ಜಿಲ್ಲಾ ವೈಧ್ಯಾಧಿಕಾರಿಗಳು ತಿಳಿಸಬೇಕು. ಆ ಬಗ್ಗೆ ಕ್ರಮ ತೆಗೆದುಕೊಳ್ಳುತ್ತೇನೆ. ಒಂದು ಪಕ್ಷ ಅಗತ್ಯ ಇಲ್ಲದ ಔಷಧಿಯನ್ನು ಸರಬರಾಜು ಮಾಡಿದ್ದರೆ ಅವನ್ನು ವಾಪಸ್ಸು ಕಳುಹಿಸಿಕೊಟ್ಟು, ಯಾವುದು ಅವಶ್ಯಕತೆ ಇದೆ ಅದನ್ನು ತರಿಸಿಕೊಳ್ಳುವುದಕ್ಕೆ ಯಾವುದೇ ವಿಧವಾದ ನಿಬಂಧನೆ ಇಲ್ಲ. ಮತ್ತೆ ವಿಕ್ಟೋರಿಯ ಆಸ್ಪತ್ರೆಯಲ್ಲಿ ಸ್ಪೆಷಲ್ ವಾರ್ಡನ್ನು ಕೊಡತಕ್ಕಂತಾದ್ದಲ್ಲಿ ತಾರತಮ್ಯ ಇದೆ ಎಂಬುದಾಗಿ ಹೇಳಿದ್ದಾರೆ. ಇದರ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳಿಗೂ ಸೂಕ್ತ

ತಿಳುವಳಿಕೆಯನ್ನು ಕೊಡುತ್ತೇನೆ. ಈ ರೀತಿಯ ತಾರತಮ್ಯವನ್ನು ಆಸ್ಪತ್ರೆಗಳಲ್ಲಿ ಮಾಡಬಾರದು. ಬಡವರೇ ಇರಲಿ, ಶ್ರೀಮಂತರೇ ಇರಲಿ ಎಲ್ಲರನ್ನೂ ಸರಿಯಾದ ದೃಷ್ಟಿಯಲ್ಲಿ ನೋಡಿಕೊಂಡರೆ ಅಲ್ಲಿರತಕ್ಕಂತಹ ಅಧಿಕಾರಿಗಳಿಗೂ ಒಳ್ಳೆಯ ಹೆಸರು ಬರುತ್ತದೆ. ಆ ಆಸ್ಪತ್ರೆಗೂ ಒಳ್ಳೆಯ ಹೆಸರು ಬರುತ್ತದೆ. ಇದರಿಂದ ಸರ್ಕಾರಕ್ಕೂ ಒಳ್ಳೆಯ ಹೆಸರು ಬರುತ್ತದೆ.

ಮತ್ತೆ ಮಾನ್ಯ ಸದಸ್ಯರಾದ ಬೊರ್ಕರ್ ರವರು ಗುಡ್ ಡಾಕ್ಟರ್, ಬ್ಯಾಡ್ ಡಾಕ್ಟರ್ ಎಂಬುದಾಗಿ ವ್ಯಾಖ್ಯಾನ ಮಾಡಿದ್ದಾರೆ. ಒಳ್ಳೆಯವರು ಕೆಟ್ಟವರಾಗಬಹುದು. ಕೆಟ್ಟವರು ಒಳ್ಳೆಯವರಾಗಬಹುದು. ಇದು ಅವರು ಮಾಡತಕ್ಕಂತಹ ಕೆಲಸದ ಮೇಲೆ ಅವಲಂಬಿಸಿರುತ್ತದೆ. ನಾನು ಚೆನ್ನಾಗಿ ಕೆಲಸ ಮಾಡಬೇಕು, ಒಳ್ಳೆಯ ಹೆಸರನ್ನು ಸಂಪಾದನೆ ಮಾಡಬೇಕು, ಜನಗಳ ಸೇವೆಯನ್ನು ಚೆನ್ನಾಗಿ ಮಾಡುವುದರಿಂದ, ಜನಗಳಿಂದ ಸಪೋರ್ಟ್ ಬರುತ್ತದೆ. ಆ ದೃಷ್ಟಿಯಿಂದ ಕೆಲಸ ಮಾಡಿದರೆ ಆತನು ಒಳ್ಳೆಯ ಡಾಕ್ಟರ್ ಆಗುವುದಕ್ಕೆ ಸಾಧ್ಯತೆ ಇದೆ. ಇದಕ್ಕೆ ಮತ್ತೆ ಯಾವುದೇ ಆಧಾರವಿಲ್ಲ ಸೋಷಿಯಲ್ ಸೈನ್ಸ್ ಎಜುಕೇಷನ್ ಇರಬೇಕೆಂದು ಹೇಳಿದ್ದಾರೆ. ಎಲ್ಲಕ್ಕಿಂತ ಹೆಚ್ಚಾಗಿ ಮಾರಲ್ ಎಜುಕೇಷನ್ ಬೇಕು. ಇದರಿಂದ ತಿಳುವಳಿಕೆಯನ್ನು ಪಡೆಯತಕ್ಕಂತಹ ಶಕ್ತಿ ಇದೆ. ಒಳ್ಳೆಯ ಕೆಲಸವನ್ನು ಮಾಡಬೇಕು, ಒಳ್ಳೆಯ ಹೆಸರನ್ನು ಸಂಪಾದನೆ ಮಾಡಬೇಕು, ಎಂಬುದನ್ನು ತಿಳಿದುಕೊಳ್ಳಬೇಕು. ವೈದ್ಯರಲ್ಲಿ ಬಹಳ ಮಂದಿ ಒಳ್ಳೆಯವರಿದ್ದಾರೆ. ಎಲ್ಲೋ ಒಬ್ಬೊಬ್ಬರು ಕೆಟ್ಟ ಕೆಲಸ ಮಾಡುವುದರಿಂದ ಇಡೀ ಇಲಾಖೆಗೆ ಕೆಟ್ಟ ಹೆಸರು ಬರುತ್ತದೆ. ಎಲ್ಲರೂ ಆ ರೀತಿ ಮಾಡುವುದಿಲ್ಲ.

ಮತ್ತೆ ಆಯುರ್ವೇದಿಕ್ ಆಸ್ಪತ್ರೆಗೆ ಬೆಡ್ ಬಾಡಿ ಬೇಕಾಗಿದೆ ಎಂಬುದಾಗಿ ಹೇಳಿದ್ದಾರೆ. ಇದನ್ನು ಸಂಬಂಧಪಟ್ಟ ಡೈರೆಕ್ಟರ್ ನಿಗಾವಹಿಸಿ ಕೆಲಸ ಮಾಡಬೇಕು. ಮತ್ತೆ ತಿಪಟೂರಿನಲ್ಲಿ ಇರುವ ಆಸ್ಪತ್ರೆಯ ಬೆಡ್ ಸ್ಟ್ರೆಂತನ್ನು ಹೆಚ್ಚು ಮಾಡಬೇಕೆಂದು ಹೇಳಿದ್ದಾರೆ. ಬರೀ ಬೆಡ್ ಸ್ಟ್ರೆಂತನ್ನು ಹೆಚ್ಚು ಮಾಡುವುದರಿಂದ ರೋಗ ಕಡಿಮೆಯಾಗುವುದಿಲ್ಲ. ರೋಗ ಬರದ ಹಾಗೆ ಏನೇನು ಕ್ರಮಗಳನ್ನು ತೆಗೆದುಕೊಳ್ಳಬೇಕೋ ಅದನ್ನು ಮಾಡಿದರೆ ಮಾತ್ರ ನಮ್ಮ ದೇಶದಲ್ಲಿರುವ ಜನರು ಆರೋಗ್ಯವಂತರಾಗಿರುತ್ತಾರೆ. ಎಲ್ಲರೂ ಬೆಡ್ ಹೆಚ್ಚಿಗೆ ಬೇಕು ಎಂಬುದಾಗಿ ಕೇಳುತ್ತಾರೆ, ಒಳ್ಳೆಯ ಡಾಕ್ಟರ್ ಬೇಕು. ಕಡಿಮೆ ಔಷಧಿಯನ್ನು ಉಪಯೋಗಿಸಿ ಅದರೊಳಗೆ ರೋಗವನ್ನು ನಿವಾರಣೆ ಮಾಡಿಕೊಳ್ಳಬೇಕು. ಇದಕ್ಕಾಗಿ ನಾವು ೭ ಕೋಟಿ ರೂಪಾಯಿಗಳನ್ನು ಖರ್ಚು ಮಾಡುತ್ತಿದ್ದೇವೆ. ಮುಂದೆ ೧೦ ಕೋಟಿ ರೂಪಾಯಿಗಳನ್ನಾದರೂ ಇದಕ್ಕಾಗಿ ಖರ್ಚು ಮಾಡೋಣ. ಔಷಧಿ ಆಹಾರ ಅಲ್ಲ. ಆಹಾರ ಬೇರೆ, ಔಷದಿ ಬೇರೆ. ಆದರೂ ಅಲ್ಲಿ ಬೆಡ್ ಸ್ಟ್ರೆಂತನ್ನು ಜಾಸ್ತಿ ಮಾಡಬೇಕಾದರೆ ಅಲ್ಲಿರತಕ್ಕಂತಹ ಆಸ್ಪತ್ರೆಯನ್ನು ವಿಸ್ತರಿಸಬೇಕಾಗುತ್ತದೆ. ಅದಕ್ಕೆ ಆಗುವಂತಹ ಖರ್ಚಿನ ಅರ್ಧ ಭಾಗವನ್ನು ತಾವು ಕೊಡಿಸಿಕೊಟ್ಟರೆ, ಉಳಿದದ್ದನ್ನು ಸರ್ಕಾರ ಹಾಕಿಕೊಂಡು ಈ ಕೆಲಸವನ್ನು ಮಾಡುವುದಕ್ಕೆ ಪ್ರಯತ್ನ ಮಾಡುತ್ತೇವೆ.

ಮತ್ತೆ ಹುಬ್ಬಳ್ಳಿ ಆಸ್ಪತ್ರೆಯ ಬಗ್ಗೆ ಸ್ವಲ್ಪ ಸಮಯ ಕೊಡಿ, ಡೈರೆಕ್ಟರ್ ಜೊತೆಯಲ್ಲಿ ಮಾತನಾಡುತ್ತೇನೆ. ಮತ್ತೆ ಈಗ ಅಲ್ಲಿಗೆ ಒಬ್ಬ ಪರ್ಮನೆಂಟ್ ಪ್ರಿನ್ಸಿಪಾಲರನ್ನು ನೇಮಕ ಮಾಡಿದ್ದೇವೆ. ಹುಬ್ಬಳ್ಳಿಯಲ್ಲಿರುವ ಕಾಲೇಜು ಹಾಗೂ ಆಸ್ಪತ್ರೆಯನ್ನು ಮಾನ್ಯ ಸದಸ್ಯರು ಯಾವ ಮಟ್ಟಕ್ಕೆ ತರಬೇಕೆಂದು ಹೇಳುತ್ತಾರೋ, ಆ ಮಟ್ಟಕ್ಕೆ ತರುವಂತೆ ಪ್ರಯತ್ನ ಮಾಡುತ್ತೇನೆ.

ಶ್ರೀ ಎಂ. ಎಂ. ನದಾಫ್.—ಅಲ್ಲಿ ೧,೦೦೦ ಬೆಡ್ ಸ್ಟ್ರೆಂತ್ ಇದ್ದುದನ್ನು ೭೫೦ಕ್ಕೆ ಇಳಿಸಿದ್ದೀರಿ. ಆದ್ದರಿಂದ ಒಂದು ಸಾವಿರ ಬೆಡ್ ಸ್ಟ್ರೆಂತ್‌ಗೆ ಹೆಚ್ಚು ಮಾಡಬೇಕು.

ಶ್ರೀ ಎಂ. ಮಲ್ಲಪ್ಪ —ಅಲ್ಲಿ ಈಗ ೭೭೫ ಬೆಡ್ಸ್ ಇವೆ.

ಶ್ರೀ ಎಸ್.ಆರ್. ಬೊಮ್ಮಾಯಿ —ನರ್ಸಿಂಗ್ ಹೋಂ ಆಕ್ಟ್ ಬಗ್ಗೆ ವಿಚಾರಣೆ ಮಾಡಲು ಸರ್ಕಾರ ಡಾ॥ ಪುಟ್ಟಸ್ವಾಮಿಯವರ ನೇತೃತ್ವದಲ್ಲಿ ಒಂದು ಸಮಿತಿಯನ್ನು ನೇಮಕ ಮಾಡಿತ್ತು. ಆ ಸಮಿತಿಯವರು ತನ್ನ ವರದಿಯನ್ನು ಸರ್ಕಾರಕ್ಕೆ ಕೊಟ್ಟು ಒಂದು ವರ್ಷವಾಯಿತು. ಆ ಬಗ್ಗೆ ಸರ್ಕಾರ ಏನು ನಿರ್ಣಯ ತೆಗೆದುಕೊಂಡಿದೆ? ಏಕೆಂದರೆ ತುರ್ತು ಪರಿಸ್ಥಿತಿಯಲ್ಲಿ ಅಂದಿನ ಮಾನ್ಯ ಸಚಿವರಾಗಿದ್ದಂತಹ ಶ್ರೀಮಾನ್ ಚನ್ನಬಸಪ್ಪನವರು ಇದನ್ನು ಒಂದು ಆರ್ಡಿನೆನ್ಸ್ ರೂಪದಲ್ಲಿ ತಂದು ಬಿಟ್ಟಿದ್ದರು. ಆ ಬಗ್ಗೆ ನೇಮಕ ಮಾಡಿದಂತಹ ಸಮಿತಿಯು ತನ್ನ ವರದಿಯನ್ನು ಕೊಟ್ಟಿದ್ದೆ. ಅದರ ಮೇಲೆ ಕ್ರಮವನ್ನು ಯಾವಾಗ ತೆಗೆದುಕೊಳ್ಳುತ್ತೀರಾ?

ಇನ್ನು ಎರಡನೆಯದಾಗಿ ಬಾಲ್ಸ್ ಸ್ಟೆರಿಲೈಸರ್ಸ್ ಬಗ್ಗೆ ಈ ಮನೆಯಲ್ಲಿ ಹಿಂದೆ ಪ್ರಶ್ನೆ ಎತ್ತಿದ ಮೇಲೆ ಸಂಬಂಧಪಟ್ಟ ಟೆಂಡರ್‌ನವರಿಗೆ ಆ ಹಣವನ್ನು ಕೊಡಕೂಡದು ಎನ್ನುವ ಆಜ್ಞೆಯನ್ನು ಮಾಡಿದ್ದೀರಿ ಎಂದು ಗೊತ್ತಾಯಿತು. ಅದಕ್ಕಾಗಿ ನಾನು ತಮ್ಮನ್ನು ವಂದಿಸುತ್ತೇನೆ. I congratulate you because you have taken immediate steps to prevent lot of money from going out of the exchequer.

ಇನ್ನು ಮುಂದಾದರೂ ಕೂಡ ಈ ಬಗ್ಗೆ ಟೆಂಡರ್‌ನ್ನು ಕರೆದು ನೋಡಿಕೊಂಡು ಸರಿಯಾದ ರೀತಿಯಲ್ಲಿ ವ್ಯವಸ್ಥೆ ಮಾಡಬೇಕು ಎಂದು ಹೇಳುತ್ತೇನೆ.

ಶ್ರೀ ಎಂ. ಮಲ್ಲಪ್ಪ.—ಇನ್ನು ನರ್ಸಿಂಗ್ ಹೋಮ್ ಆಕ್ಟ್ ವಿಚಾರವಾಗಿ ಹೇಳುವುದಾದರೆ ಅದರ ರಿಪೋರ್ಟ್ ಈಗ ಬಂದಿದೆ. ಅದು ಸರ್ಕಾರದ ಪರಿಶೀಲನೆಯಲ್ಲಿದೆ. ಅದರ ಬಗ್ಗೆ ಬಹು ಬೇಗ ಕಾರ್ಯಕ್ರಮ ತೆಗೆದುಕೊಳ್ಳುತ್ತೇನೆ ಎಂದು ಹೇಳುತ್ತೇನೆ.

12 NOON

MR. SPEAKER.—The question is:

"That the respective sums not exceeding the amounts mentioned in this list of Demands inclusive of sums granted "on account" be granted to government to defray the charges which will come in course of payment during the financial year for the period ending 31st day of March 1980 in respect of demands No. 27 and 28. Medical Services and Family Welfare and Public Health and Sanitation"

The motion was adopted and the Sums were granted

As ordered by the Chair the ***Motion of Demands*** *for grants adopted by the House are reproduced below*

DEMAND NO. 27—MEDICAL SERVICES AND FAMILY WELFARE

"That a sum not exceeding Rs. 46,68,05,000 inclusive of the sum granted 'on account' be granted to the Government to defray the charges which will come in course of payment during the financial year ending 31st day of March 1980 in respect of "Medical Services and Family Welfare"

DEMAND NO. 28—PUBLIC HEALTH AND SANITATION

"That a Sum not exceeding Rs. 11, 83,75,000 inclusive of the sum granted 'on account' be granted to the Government to defray the charges which will come in course of payment during the financial year ending 31 day of March 1980 in respect of "Public Health and Sanitation".